ಅಖಿಲ ಭಾರತ ಪತ್ರಿಕೆ
ಆಗಸ್ಟ್ 2024

# ಭಾರತ
## ಶ್ರೀಮಾತಾರವಿಂದರ ದೃಷ್ಟಿಕೋನ



ಬೆಲೆ : 15/-



**ಅಖಿಲ ಭಾರತ ಪತ್ರಿಕೆ**
**ಆಗಸ್ಟ್ 2024**

ಸಂಪುಟ: 34 ಸಂಚಿಕೆ: 08

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಭಾರತ
## ಶ್ರೀಮಾತಾರವಿಂದರ ದೃಷ್ಟಿಕೋನ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಭಾರತ ಮಾತೆ** 7
ಅನು: ಶ್ರೀ ಪುಟ್ಟು ಕುಲಕರ್ಣಿ

**ಭವಿಷ್ಯದ ಕೀಲಿಕೈಗಳು** 9
ಅನು: ಡಾ॥ ಮಹಾದೇವ ಸಕ್ರಿ

**ಭಾರತಕ್ಕೆ ಮಂತ್ರಗಳು ಮತ್ತು ಸೂತ್ರಗಳು** 24
ಅನು: ನಾಗಜ್ಯೋತಿ ಮಾನ್ವಿ

**ಭಾರತದ ಬಗ್ಗೆ ಸಂದೇಶಗಳು** 26
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಭವಾನಿ ಭಾರತೀ** 34
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 62
ಅನು: ಜಾನ್ವಿ

## ಸಂಪಾದಕರ ಟಿಪ್ಪಣಿ

ತನ್ನ ರಾಷ್ಟ್ರೀಯ ಅಸ್ಮಿತೆಯನ್ನು ಕಂಡುಕೊಳ್ಳುವ ಸಲುವಾಗಿ ಭಾರತದಲ್ಲಿ (ಇಂಡಿಯಾದಲ್ಲಿ) "ಒಂದು ರಾಷ್ಟ್ರ"ದ ಬಗೆಗಿನ ಜಾಗ್ರತಿ ಉದಿಸುತ್ತಾ ಇದೆ. ನಾವು ತಲೆತಲಾಂತರದಿಂದ ಪಡೆದುಕೊಂಡು ಬಂದಿರುವ ಈ "ದೇಶ"ವೆಂದರೆ ಏನು? ಇದು ಏನಿದೆ? ಯಾರ ಮಣ್ಣು ನಮ್ಮ ದೇಹಗಳ ಸಂರಚನೆಗೆ ಮೂಲಾಧಾರ–ವಾಗಿದೆಯೋ, ಯಾರ ಸ್ಪರ್ಶವು ನಮ್ಮ ಆತ್ಮಗಳನ್ನು ಜಾಗರಗೊಳಿಸುತ್ತಿದೆಯೋ, ಯಾವುದನ್ನು ನಾವು ಪ್ರಕೃತಿದತ್ತವಾಗಿ ಪಡೆದುಕೊಂಡು ಬಂದಿರುವ ಈ ದೇಶವೆಂದರೆ ಏನು? ಯಾಕೆ? ಅದು ಇನ್ನುಳಿದವರು ಭಾವಿಸುತ್ತಿರುವ ಹಾಗೆ ಕೇವಲ ಭೂ–ಭಾಗದ ತುಣುಕೇ? ಅಥವಾ ಅವಳೊಂದು ಜೀವಂತ ವ್ಯಕ್ತಿಯಾಗಿ–ಶಕ್ತಿಯಾಗಿರುವ ಚೈತನ್ಯಪೂರ್ಣ ಅಸ್ತಿತ್ವವೇ? ಆತ್ಮವೊಂದು ಜನನ–ಮರಣಗಳ ಚಕ್ರದ ಗತಿಯಲ್ಲಿ ಮತ್ತೆ ಮತ್ತೆ ಅವನತಿಗೊಂಡು ಪುನರ್ಜನ್ಮಗಳಲ್ಲಿ ಇರುವ ಒಂದು ಆತ್ಮವಾಗಿದೆಯೇ? ನಾವು ಯಾವ ತೆರದಲ್ಲಿ ಅವಳಿಗೆ (ಮಾತೃಭೂಮಿಗೆ) ಸೇವೆ ಸಲ್ಲಿಸಬೇಕು? ಅದು ಹೇಗೆ ಗತಿಸಿ ಹೋಗಿರುವ ಅವಳ ಆ ವೈಭವವನ್ನು ಪುನಃ ಪಡೆದುಕೊಳ್ಳುವದು? ಅದಕ್ಕಾಗಿ ನಾವು ಅದು ಹೇಗೆ ಸಹಕಾರಿಯಾಗಿ ಕಾರ್ಯಪ್ರವೃತ್ತರಾಗಬೇಕು? ಇದಕ್ಕಾಗಿ ನಮ್ಮ ಮುಂದೆ ಯಾವುದಾದರೂ ದಾರಿ ಇದೆಯೇ? ಅಥವಾ ಎಲ್ಲವನ್ನೂ "ಕಾಲಕ್ಕೇ" ಬಿಟ್ಟು – ಅದರ ಪ್ರಕ್ರಿಯೆಯ ಮೇಲೆಯೇ ಎಲ್ಲವನ್ನೂ ಹೇರಿ ದೀರ್ಘಾವಧಿಯವರೆಗೂ ಸದಾ ಕಾಯುತ್ತಲೇ ಇರಬೇಕೇ? ಹಲ–ಕೆಲವು ಅಸಂಗತಗಳ ಮಧ್ಯೆಯೂ, ಬೇರೆ ಯಾವುದೇ ರಾಷ್ಟ್ರವೂ ನೀಡದ "ಅದರದೇ ಆದ ವೈಶಿಷ್ಟ್ಯಮಯದ ಕೊಡುಗೆಗಳಿಂದಾಗಿ" ಯಾರು ಈ ರಾಷ್ಟ್ರವನ್ನು ಪ್ರೀತಿಸುತ್ತಾರೋ, ಅವರೆಲ್ಲರಿಗೂ ಮೇಲ್ಕಂಡ ಪ್ರಶ್ನೆಗಳು ಹೈರಾಣಾಗಿಸುತ್ತಿವೆ.

ಈ ಸಂಚಿಕೆಯನ್ನು, ಈ ರಾಷ್ಟ್ರದ ವಿಷಯವಾಗಿ, ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ನೀಡಿರುವ ಅವರ ದರ್ಶನದ ಪ್ರಕಾಶದೊಂದಿಗೆ, ಅಂದರೆ "ಭಾರತ ಮಾತೆಯ ದರ್ಶನಕ್ಕೆ" ಸಮರ್ಪಣೆ ಮಾಡಲಾಗಿದೆ. [ಎಐಎಮ್]

*

## ಸಂಪಾದಕೀಯ

ಡಾ॥ ಎಸ್. ರಾಧಾಕೃಷ್ಣನ್ ಹೇಳಿದಂತೆ 'ಆಧ್ಯಾತ್ಮಿಕ ಜೀವನ ಶೈಲಿಯೇ ಭಾರತದ ಪ್ರತಿಭಾನ್ವಿತ ಅಸ್ಮಿತೆ'ಯಾಗಿದೆ. ಇಂತಹ ಜೀವನ ಶೈಲಿಯನ್ನು ನಿಸರ್ಗ ಸಹಜವಾಗಿಯೇ ಒದಗಿಸುವ ಒಂದು ಭೂ–ಖಂಡದ ಹಿನ್ನೆಲೆಯಲ್ಲಿ 'ರಾಷ್ಟ್ರದ ಪರಿಕಲ್ಪನೆ' ನಮ್ಮಲ್ಲಿ ಇತ್ತು. ಅದಕ್ಕಾಗಿಯೇ 'ಪೃಥಿವ್ಯಾ ಸಾಗರ ಪರ್ಯಾಂತ್ ಏಕ ರಾಟ್' (ಸಾಗರದಿಂದ ಸುತ್ತುವರೆಯಲ್ಪಟ್ಟಿರುವ ಭೂ–ಖಂಡವೇ ರಾಷ್ಟ್ರ)ವೆನ್ನುವ ಉದಾತ್ತ ಮನೋಭಾವವನ್ನು ನಮ್ಮ ದೃಷ್ಟಾರರು ಹೊಂದಿದ್ದರು. ಆದರೆ ಮಾನವನು ತಮೋ ಗುಣಕ್ಕೆ ಪ್ರಾಧಾನ್ಯತೆಯಿತ್ತು, ಜ್ಞಾನಕ್ಕೆ ಗಡಿಯಿರಿಸಿಕೊಂಡ ಹಾಗೆ, ಭೂಭಾಗಕ್ಕೂ ಸಹಿತ ತನ್ನದೇ ಕಲ್ಪಿತ ರೇಖೆಗಳನ್ನು ಎಳೆದುಕೊಂಡು, ದೇಶದ ಕಲ್ಪನೆಯಲ್ಲಿ ಸೀಮಿತಗೊಳ್ಳತೊಡಗಿದ. ಆ ಸೀಮಿತತನವು ಮತ್ತೂ ಮತ್ತೂ ಘನವಾಗುತ್ತಲೇ ಬಂದು, ಅದಕ್ಕೊಂದು "ಮತದ" ಆಲೇಪನವನ್ನು ಕೊಟ್ಟುಕೊಂಡು, ಅದೇ 'ಅಂತಿಮ ಸತ್ಯ' ಎಂದು ಹಕ್ಕೊತ್ತಾಯದಿಂದಲೇ ಆ ಮತದ ಮತ್ತಿನಲ್ಲಿಯೇ ಜನ ಸಮುದಾಯವನ್ನು ವಿಭ್ರಮೆಗೊಳಿಸಿ, ಬೆದರಿಸಿ ಅವರ ಮೇಲೆ ಹೇರಲಾಯಿತು. ಆಗ ಅಲ್ಲಿ ನಿಸರ್ಗ ಸಹಜವಾದ ಬದುಕಿನ ಸ್ಪಂದನಗಳು, ಕೃತಕವಾಗಿ ರೂಪಿಸಲ್ಪಟ್ಟು, ಪ್ರಕೃತಿಗೂ ಮತ್ತು ಮಾನವನಿಗೂ ಇರುವ ಸಂಬಂಧವನ್ನೇ ತುಂಡರಿಸಲಾಯಿತು. ಅದು ಪೀಳಿಗೆ ಪೀಳಿಗೆಗಳ ಕಾಲ ಮುಂದುವರೆಯುತ್ತ ಬಂದ ಹಾಗೆ, ಆ ಅಂಧಕಾರವೇ ಬದುಕು ಎಂದುಕೊಂಡ ಪೀಳಿಗೆಯು, ಯಾವಾಗಲೂ ಅಸಮರ್ಥರಾಗಿಯೇ ಉಳಿಯುವದೂ ಅಲ್ಲದೇ, ತಮ್ಮನ್ನೇ ತಾವು ಗುಲಾಮರಂತೆ ಒಪ್ಪಿಸಿಕೊಂಡಿರುತ್ತಾರೆ.

ತತ್ತ್ವಜ್ಞಾನದ ಸೂತ್ರದಲ್ಲಿಯೇ ತತ್ತ್ವಜ್ಞಾನವನ್ನು ವಿಶ್ಲೇಷಿಸಿದಲ್ಲಿ ಅದು 'ಜ್ಞಾನವನ್ನು ಪ್ರೇಮಿಸು', 'ಜ್ಞಾನವನ್ನು ಆರಾಧಿಸು' ಎಂದೇ ಅರ್ಥ ಕೊಡುತ್ತದೆ. ಇಂತಹ ತತ್ತ್ವಜ್ಞಾನವನ್ನು ಸಾಕಾರಗೊಳಿಸುವ ಅವಕಾಶವನ್ನು ಒದಗಿಸುವ ಭೂಭಾಗವೇ 'ರಾಷ್ಟ್ರ'ವಾಗಿರುತ್ತದೆ. ಮಾನವನಿಗೆ ಬದುಕು ಕೊಟ್ಟ 'ತಾಯಿ' ಹೇಗೆ ಸದಾ ಪೂಜ್ಯಳೋ, ಅದೇ ರೀತಿ ಮನುಕುಲಕ್ಕೆ 'ಬದುಕು' ಕೊಟ್ಟ ಈ 'ಭೂಮಿ'ಯೂ ತಾಯಿಯ ಹಾಗೆ ಎಂದು ಗೌರವಿಸುವ ಪರಂಪರೆಯ ಹಿಂದೆ, ಮಾನವನ ಚಿಂತನದ ವಿಕಾಸದ ಅಪ್ರತಿಮ ಸಾಧನೆಗಳಿವೆ. ಆಯಾ ಕಾಲಕ್ಕೆ ವಿಚಲನೆ ಹೊಂದಿದ ಸಂಸ್ಕೃತಿಯ ಪ್ರವಾಹವು ಬತ್ತದ ಹಾಗೆ, ಸಮೃದ್ಧಗೊಂಡ

ಭುವಿಯೊಡಲ ಸಾರವನ್ನು ಹೀರಿಕೊಳ್ಳಲಿದ್ದ ಬೇರುಗಳನ್ನು ಕತ್ತರಿಸಿ ಬೊನ್ಸಾಯಿ ಮಾದರಿಯ ಸಂಸ್ಕೃತಿಯನ್ನೂ, ಅಷ್ಟೇ ಸೀಮಿತ ಗಡಿಯನ್ನೂ ಮೀರಿ ಮತ್ತೆ ವಿಶ್ವದ ವ್ಯಾಪಕತ್ವದೆಡೆಗೆ ಸಾಗಲೇಬೇಕಾಗಿದೆ.

ಇದು ರಾಷ್ಟ್ರವನ್ನು (ದೇಶವನ್ನು) ನಮ್ಮ ಮಾತೆ ಎಂದು ಪ್ರೀತಿಸಿದಾಗ ಮಾತ್ರ ಸಾಧ್ಯವಾಗುವ ಸಂಗತಿ. ಎಷ್ಟೇ ಆಘಾತಗೊಂಡರೂ ಮಾತೆಯ (ರಾಷ್ಟ್ರದ) ಆತ್ಮಶಕ್ತಿ ಕುಂಠಿತಗೊಂಡಿರುವದಿಲ್ಲ; ಆದರೆ ಅದಕ್ಕೊಂದು ಅವಕುಂಠನವನ್ನು ತೊಡಿಸಲಾಗಿರುತ್ತದೆ. ಆ ಕವಚವನ್ನು ತೆರೆಯುವ ಸಲುವಾಗಿ, ಇಡೀ ರಾಷ್ಟ್ರಾದ್ಯಂತ ಜಾಗ್ರತಿಯ ಸಂಕೇತಗಳಾಗಿ ಹಲವಾರು "ಆತ್ಮಗಳು" ಕಳೆದ ಶತಮಾನದಲ್ಲಿ ಪಥಗಳನ್ನು ನಿರ್ಮಿಸಿವೆ. ಆಧ್ಯಾತ್ಮಿಕ ವಲಯದಲ್ಲಿ, ಸಾಮಾಜಿಕ ವಲಯದಲ್ಲಿ, ಸಾಂಸ್ಕೃತಿಕ ವಲಯದಲ್ಲಿ ಹಾಗೂ ಅನಿವಾರ್ಯವೇ ಆಗಿರುವ ರಾಜಕೀಯ ವಲಯದಲ್ಲಿಯೂ ಸಹಿತ ಹಲವು ಚೇತನಗಳು ನಮಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿವೆ. ಅವೆಲ್ಲ ಸೂತ್ರಗಳನ್ನೂ 'ಆಧ್ಯಾತ್ಮಿಕ ಚಿಂತನ'ಗಳನ್ನಾಗಿಸಿಕೊಂಡು, ಬದುಕು ರೂಪಿಸಿಕೊಳ್ಳುವ ಹಾಗೂ ಅದರ ಮೂಲಕ 'ರಾಷ್ಟ್ರದ ಉಜ್ವಲತೆ'ಗೂ ಕೊಡುಗೆಯಾಗಬಲ್ಲ ಆದರ್ಶದ ಸೂತ್ರಗಳನ್ನು ಶ್ರೀ ಅರವಿಂದರು ನೀಡಿದ್ದಾರೆ.


ಪೃಥ್ವೀ ತತ್ತ್ವದಿಂದ ಜನಿಸಿದ ಈ ದೇಹವು ಸಹಜವಾಗಿಯೇ, ಆಯಾ ಭಾಗದ ಭೂ–ತತ್ತ್ವಗಳನ್ನು ತನ್ನ ದೇಹದಲ್ಲಿ ಹೊಂದಿರುತ್ತದೆ. ಅದರ ಆಂತರ್ಯ ಎಂದಿಗೂ ಬದಲಾಗದು. ಅವಕಾಶದಲ್ಲಿರುವ ಉಳಿದ ನಾಲ್ಕು ಅಂಶಗಳು (ಜಲ–ಮುಗಿಲು–ಅಗ್ನಿ–ಆಕಾಶ) ಈ ಭೂ–ತತ್ತ್ವದ ಮೂಲಕವೇ ಸಾಕಾರಗೊಳ್ಳಬೇಕಾಗುತ್ತದೆ. ಹೀಗಾಗಿ ಆಯಾ ರಾಷ್ಟ್ರದ ಪರಿಕಲ್ಪನೆಗೆ ಗಡಿಗಳ ಸೀಮಿತತನವಿರಬಾರದು ಎನ್ನುವದು ವಿಶ್ವ ಸತ್ಯ. ಅದನ್ನು ಸಾಧಿಸುವ ಹಿನ್ನಲೆಯಲ್ಲಿ 'ವಿಶ್ವ ಸಂಸ್ಥೆ', 'ವಿಶ್ವ–ಗ್ರಾಮ', 'ವಿಶ್ವ–ಮಾರುಕಟ್ಟೆ'ಗಳಂತಹ ಘಟನೆಗಳು ರೂಪುಗೊಂಡು, ಮಾನವನ ಬದುಕು ನಿಧಾನವಾಗಿಯಾದರೂ 'ವೈಶ್ವಿಕ ಆಯಾಮ'ವಾಗುವತ್ತ ವಾಸ್ತವದ ಘಟನೆಗಳು ಘಟಿಸುತ್ತಲಿವೆ.

"ಭವಾನಿ ಭಾರತೀ" ಈ ಹಿನ್ನೆಲೆಯಲ್ಲಿ ರಚಿತಗೊಂಡಿರುವ ಅವರ ಏಕೈಕ ಸಂಸ್ಕೃತ ಕೃತಿ. ಅಲ್ಲಿ, ಪಥ ವಿಚಲನೆಗೊಂಡ ರಾಷ್ಟ್ರದ ಸ್ಥಿತಿಯನ್ನು ಕಂಡ ಮಾತೆ, ಕುದಿದು ಕ್ರೋಧಾನ್ವಿತೆಯಾಗಿ "ಕಾಳಿ"ಯಂತೆ ಹೂಂಕಾರ ಮಾಡುವದರ ಮೂಲಕ

ಜನತೆಯನ್ನು ಎಚ್ಚರಿಸುವ ಹಂತ ಬಂದಿರುವದನ್ನು, ಹಾಗೂ ಈಗಾಗಲೇ ಘಟಿಸಿಹೋದ ಘಟನೆಯ ಆಘಾತದಿಂದ ಹೊರಬರುವ ಎಲ್ಲ ಮಾರ್ಗಗಳನ್ನೂ ಕೊಟ್ಟಿದ್ದಾರೆ. ಅದೇ ಸಮಯಕ್ಕೆ ಆಧುನಿಕ ಕಾಲದ ಮಂತ್ರ "ವಂದೇ ಮಾತರಂ" ಗೀತೆಯ ಅಂತರಾರ್ಥವನ್ನೂ ಸಹಿತ ವಿಷದಪಡಿಸಿದ್ದಾರೆ. ಸುಭಾಷ ಚಂದ್ರ ಭೋಸ ಅವರ ಧೀರೋದ್ಧಾತ ಹೋರಾಟ, ಬಂಕಿಮ ಚಂದ್ರ ಚಟರ್ಜಿಯವರ ಮಾಂತ್ರಿಕ ಗೀತೆ 'ವಂದೇ ಮಾತರಂ', ಸ್ವಾಮಿ ವಿವೇಕಾನಂದರ 'ಆಧ್ಯಾತ್ಮಿಕ ಸ್ವರೂಪದ ಉತ್ಕ್ರಾಂತಿ', ಲೋಕಮಾನ್ಯ ತಿಳಕರ 'ಸ್ವರಾಜ್ಯವೇ ನಮ್ಮ ಹಕ್ಕು' ಎನ್ನುವ ಆತ್ಮವಿಶ್ವಾಸದ ಸರ್ವ ಸಮನ್ವಯವನ್ನು ಶ್ರೀ ಅರವಿಂದರು 'ಸಮತೆಯ' ಸ್ವರೂಪದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವದಕ್ಕೆ ಸೂಕ್ತ ಪಥವನ್ನು ನಿರ್ಮಿಸಿ, ನವೀನ ಯುಗವೊಂದಕ್ಕೆ ನಾಂದಿ ಹಾಡಿದ್ದಾರೆ.

ಭಾರತವಷ್ಟೇ ಅಲ್ಲ ಇಡೀ ಜಗತ್ತೇ ಈ ವಿಷಯದ ಬಗೆಗೆ ಇಂದು ತುಡಿಯುತ್ತಿದೆ. ಆಧುನಿಕ ವೈಜ್ಞಾನಿಕ ಸಂಶೋಧನೆಗಳು, ಉಪಕರಣಗಳು ನಮ್ಮನ್ನು 'ಗಡಿರಹಿತ'ರನ್ನಾಗಿಸುತ್ತಿವೆ. ಆದರೆ ಇದು ಕೇವಲ ಕಾಲ್ಪನಿಕವಾಗಿ ಇರದೇ, ಚಿಂತನಗಳಲ್ಲಿ ಹಾಗೂ ಅದಕ್ಕಿಂತ ಮುಖ್ಯವಾಗಿ ಅನುಷ್ಠಾನಕ್ಕೆ ತಂದುಕೊಳ್ಳಬೇಕಾಗಿದೆ. ಧರ್ಮದ ಆಂತರ್ಯವನ್ನು ಮುಚ್ಚಿ ಮತದ ಹೊದಿಕೆಯಲ್ಲಿ ಬದುಕು ಮಾಡಲೇಬೇಕು ಎನ್ನುವ ಒತ್ತಡಕ್ಕೆ ಸಿಕ್ಕಾಗ, ಘಾಸಿಗೊಳ್ಳುವ ಆತ್ಮಶಕ್ತಿ 'ಕಾಳಿ'ಯಾಗಿಯೇ ಹೂಂಕರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಆಧುನಿಕ ವೈಜ್ಞಾನಿಕ ಯುಗದಲ್ಲಿ 'ರಾಷ್ಟ್ರದ ನವೀನ ಆಯಾಮ'ದ ಬಗೆಗೆ ಶ್ರೀ ಅರವಿಂದರು ನೀಡಿರುವ ಸೂತ್ರಗಳಲ್ಲಿ ಕೆಲವನ್ನು ಇಲ್ಲಿ ಅನುಸ್ಪಂದನದ ಮೂಲಕ ಕನ್ನಡಕ್ಕೂ ತರಲು ಯತ್ನಿಸಲಾಗಿದೆ.



ನಾವೆಲ್ಲ ಏಕೈಕ ಮಾತೆಯ ಪುತ್ರರು; ಸ್ವದೇಶವಾಸಿಗಳು; ಈ ದೃಷ್ಟಿಕೋನವನ್ನು ಹೊಂದಿದ್ದರೆ ಸಹೋದರತ್ವದ ಪ್ರೇಮಭಾವನೆಯನ್ನು ನಮ್ಮ–ನಮ್ಮಲ್ಲಿ ಕಾಣಲು ಆಧಾರವಾಗುತ್ತದೆ; ಇದೇ ಅನುಭವವೇ ರಾಜಕೀಯ ಏಕತೆಗೂ ಸಹಿತ ತಳಹದಿಯಾಗಬಹುದು ಎಂದುಕೊಂಡರೂ, ಇದು ಸಾಮಾಜಿಕ ಏಕತೆಯನ್ನು ರೂಪಿಸಲು ಸಾಧ್ಯವಾಗುವದಿಲ್ಲ. ನಾವು ಇನ್ನೂ ಇನ್ನೂ ಅಂತರಾಳಕ್ಕೆ ಹೋಗಬೇಕಿದೆ; ಸದ್ಯದ ಅವಧಿಯಲ್ಲಿ ನಾವೆಲ್ಲರೂ ನಮ್ಮ ನಮ್ಮ ತಾಯಿಯನ್ನು ಸಹಿತ ಬದಿಗಿರಿಸಿ (ದೂರ ಮಾಡಿ) ಈ "ದೇವ ಮಾತೆ"ಯನ್ನು ಸ್ವದೇಶವಾಸಿಗಳ ಸಹೋದರತ್ವದಲ್ಲಿಯೇ ಉಪಾಸನೆ ಮಾಡಬೇಕಾಗಿದೆ. ಅದೇ ರೀತಿಯಲ್ಲಿಯೇ ನಾವು ವಿಶ್ವ ಮಾತೆಯನ್ನೂ (ಲೋಕ ಮಾತೆಯನ್ನೂ) ಸಹಿತ ಅರಿತುಕೊಂಡು, ಸಾಕ್ಷಾತ್ಕರಿಸಿಕೊಂಡು ಭಾವಾಭೂತಗೊಳಿಸಿಕೊಳ್ಳಬೇಕಾಗಿದೆ (ಟ್ರಾನ್ಸೆಂಡ್). ಅವಳಲ್ಲಿ ನೆಲೆಯಿರುವ ಶಕ್ತಿಯ ಮೂಲವನ್ನು ನಾವು ತಲುಪಲು ಈ ಮೂಲಕ ಆ ಶಕ್ತಿಯ

ಅಂಶವನ್ನು ಇದಕ್ಕಾಗಿ ಭಾವಾಭೂತಗೊಳಿಸಿಕೊಳ್ಳಬೇಕಾಗಿದೆ. ಆದರೆ, ಭಾರತ ಮಾತೆಯ ಕುರಿತು ನಮ್ಮ ಆರಾಧನೆಯಲ್ಲಿ, ಆ ಮೂಲಕ ನಮಗೆ ಜನ್ಮವಿತ್ತ ತಾಯಿಯನ್ನು ದೂರವಿರಿಸಬೇಕೆಂದರೆ, ಅವಳನ್ನು ಬಿಟ್ಟುಬಿಡುವದು ಎಂದರ್ಥವಲ್ಲ, ಅದೇ ರೀತಿಯಾಗಿಯೇ, ವಿಶ್ವ ಮಾತೆಯ ಬಗೆಗಿನ ನಮ್ಮ ಆರಾಧನೆಯಲ್ಲಿ ನಾವು ಭಾರತ ಮಾತೆಯನ್ನು ಆತ್ಮಗತ ಮಾಡಿಕೊಳ್ಳಬೇಕಿದೆ. ಏಕೆಂದರೆ ಅವಳನ್ನು ಮರೆಯುವಂತಿಲ್ಲ. ಅವಳೇ ಕಾಳಿಯೂ ಆಗಿದ್ದಾಳೆ, ಅವಳೇ ಮಾತೆಯೂ ಆಗಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/235 – ಶ್ರೀ ಅರವಿಂದರು**

## ಭಾರತ ಮಾತೆ

**– ಅನು: ಪುಟ್ಟು ಕುಲಕರ್ಣಿ**

### ರಾಷ್ಟ್ರದ ದೈವ ನಿಯಾಮಕ ಕರ್ತವ್ಯ

ಒಂದು ರಾಷ್ಟ್ರದ ದೈವ ನಿಯಾಮಕ ಕರ್ತವ್ಯವು, ಯಾವಾಗಲೂ ಅಹಂಕಾರಭರಿತ ಹಾಗೂ ಅಜ್ಞಾನದಿಂದ ಪ್ರೇರಿತವಾದ ಬಾಹ್ಯ ಪ್ರಜ್ಞೆಯ ಅವಶ್ಯಕತೆಗಳನ್ನು, ಮಾನಸಿಕವಾಗಿ ನಿರ್ಣಯಿಸಲ್ಪಟ್ಟಂತೆ ಪರಿಗಣಿಸುವ ಸಂಗತಿಯಲ್ಲ. ಅದಕ್ಕಾಗಿ ಅಂತಹ ಸಂದರ್ಭವಿದ್ದಾಗಲೇ ರಾಷ್ಟ್ರ–ರಾಷ್ಟ್ರಗಳ ನಡುವೆ ಇರುವ ಸಂಘರ್ಷವನ್ನು ಹೋಗಲಾಡಿಸಬೇಕಾಗುತ್ತದೆ. ಆದರೂ ಅಂತಹ ಸಂಘರ್ಷಮಯ ಘಟನೆಗಳು ಮುಂದುವರೆಯುತ್ತಲೇ ಇರುತ್ತವೆ. ಬಹುತೇಕವಾಗಿ, ಮತ್ತೂ ಮತ್ತೂ ಬೃಹದ್ ಬಲದೊಂದಿಗೇ ಮುಂದುವರೆಸಲ್ಪಡುತ್ತವೆ.

ಪ್ರತಿಯೊಬ್ಬ ವ್ಯಕ್ತಿಯೂ ಹೇಗೆ ತನ್ನದೇ ಅಸ್ಮಿತೆಯ ಚೈತ್ಯ ಪುರುಷನನ್ನು ಹೊಂದಿರುತ್ತಾನೆಯೋ ಮತ್ತು ಅದು ಅವನ ನೈಜ ಅಸ್ತಿತ್ವವೂ ಆಗಿರುತ್ತದೆಯೋ ಮತ್ತು ಅವನ ಗಮ್ಯತೆಯನ್ನು ಹೆಚ್ಚೂ–ಕಡಿಮೆ ಬಹಿರಂಗವಾಗಿ ಅಧಿಪತ್ಯಕ್ಕೆ ಒಳಪಡಿಸಲ್ಪಡುತ್ತದೆಯೋ, ಅದೇ ರೀತಿಯಲ್ಲಿಯೇ ಪ್ರತಿಯೊಂದು ದೇಶವೂ ಸಹಿತ ತನ್ನದೇ ಆದ ಅಸ್ಮಿತೆಯ ಆವರಣದೊಳಗೆ ಅಭಿವ್ಯಕ್ತಗೊಳಿಸಲ್ಪಡುತ್ತದೆ, ಜೊತೆಗೆ ಆ ದೇಶದ ಗಮ್ಯತೆಯನ್ನೂ – ಆ ಆವರಣದಲ್ಲಿಯೇ – ಸಾಕಾರಗೊಳಿಸುವದರ ಮೂಲಕ “ಅದರ” ಆತ್ಮವೇ ಆಗಿರುತ್ತದೆ. ಇದು ದೇಶದ ಪ್ರತಿಭಾ ಹಂತವೂ

ಹೌದು; ಜನ ಸಮುದಾಯದ ಪ್ರಾಣವೂ(ಭಾವವೂ) ಹೌದು. ಇದೇ ರಾಷ್ಟ್ರದ ಅಭೀಪ್ಸೆಯ ಕೇಂದ್ರ ಬಿಂದುವೂ ಆಗಿರುತ್ತದೆ. ಯಾವುದು ಸುಂದರವಾಗಿ, ಪವಿತ್ರವಾಗಿ, ಮಹತ್ತರವಾಗಿ ಮತ್ತು ಸರ್ವೇಸಾಮಾನ್ಯವಾಗಿ ರಾಷ್ಟ್ರದ ಜೀವನ ಶೈಲಿಯಾಗಿರುತ್ತದೆಯೋ ಅದರ ಚಿಲುಮೆಯಾಗಿರುತ್ತದೆ. ನಿಜವಾದ ರಾಷ್ಟ್ರ–ಭಕ್ತರು ಇದೊಂದು ದರ್ಶನ ಸಾಧ್ಯವಾದ ನೈಜತೆ ಎಂದು ಆದರಿಸುತ್ತಾರೆ. ಭಾರತದಲ್ಲಿಯೇ ಇದನ್ನು ಬಹುತೇಕವಾಗಿ ದೈವತ್ವದ ಹಂತಕ್ಕೂ ಕೊಂಡೊಯ್ಯಲಾಗಿದೆ. ಯಾರು ಈ ಹಂತದಲ್ಲಿ ತಮ್ಮ ರಾಷ್ಟ್ರವನ್ನು ನಿಜವಾಗಿಯೂ ಪ್ರೀತಿಸುತ್ತಾರೆಯೋ, ಅವರೆಲ್ಲರೂ "ಭಾರತ ಮಾತೆ" ಎಂದೇ ಕರೆಯುತ್ತಾರೆ. ಜೊತೆಗೆ ಪ್ರತಿನಿತ್ಯವೂ ರಾಷ್ಟ್ರದ ಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಹೀಗಾಗಿ ಇವಳೇ ರಾಷ್ಟ್ರದ ಒಂದು ಚಿಂತನಶೀಲ ಆದರ್ಶದ ನೈಜತೆಯನ್ನು ರೂಪಕ್ಕಿಳಿಸಿ ಮತ್ತು ಅದನ್ನು ಸಂಕೇತಗೊಳಿಸುತ್ತಾಳೆ. ಇದೇ ಜಗತ್ತಿನ ನೈಜ ದೈವ ನಿಯಾಮಕ ಕಾರ್ಯವಾಗಿದೆ. ಭಾರತೀಯ ದಾರ್ಶನಿಕ ಚಿಂತನಗಳಲ್ಲಿಯೂ ಸಹಿತ ಅವಳನ್ನು "ಜಗನ್ಮಾತೆ" ಎಂದೇ ಆರಾಧನಾ ಮನೋಭಾವದಲ್ಲಿಯೇ ಪೂಜಿಸಲಾಗುತ್ತಿದೆ. ಇದನ್ನು 'ದುರ್ಗಾ ಸೂಕ್ತ'ದ ಈ ಕೆಳಕಂಡ ಶ್ಲೋಕಗಳಲ್ಲಿ ಕಾಣಬಹುದು.

ಯಾವುದೇ ದೇಶದಲ್ಲಾಗಲೀ, ಪ್ರತಿಯೊಬ್ಬನೂ ಗಮನಿಸಲೇಬೇಕಾಗಿರುವ ಸಂಗತಿ ಎಂದರೆ, ಒಂದು ರಾಷ್ಟ್ರದ ಆತ್ಮಕ್ಕಾಗಿ ಇಡೀ ಸಮುದಾಯಗಳಲ್ಲಿ ಏಕೋಭಾವದ ಆರಾಧನೆಯು ಇರುವದನ್ನು ಗಮನಿಸಬಹುದಾಗಿದೆ. ಅದರ ಉದಾತ್ತ ಧ್ಯೇಯಾದರ್ಶಗಳಿಗಾಗಿ ಅತ್ಯಂತ ಸೂಕ್ತವಾದ ಉಪಕರಣವಾಗುವಂತೆ ಅರ್ಹರಾಗುವ ಅಭೀಪ್ಸೆಯನ್ನು, ಅದೇ ತೆರನಾಗಿ ಉಜ್ವಲದ ಪ್ರಗತಿಗಾಗಿ ಮತ್ತು ಸ್ವಯಂ–ಪರಿಪೂರ್ಣತೆಗಾಗಿ ಸಮರ್ಥರಾಗುವಂತೆ ಪ್ರತಿಯೊಬ್ಬರನ್ನೂ ಸನ್ನದ್ಧಗೊಳಿಸುವಂತೆ ಮಾಡಲು, ಅದರೊಡನೇ ಸಮಸ್ಪಂದಿಯಾಗಿ ಅಂದರೆ ರಾಷ್ಟ್ರದ ಆತ್ಮದೊಡನೇ ಸಮಸ್ಪಂದಿಯಾಗುವಂತೆ ಗುರುತಿಸಿ, ಆ ಮೂಲಕ ಅವರ ನೈಜ ಸ್ವಭಾವವನ್ನೂ ಹಾಗೂ ಅವರ ಪಾತ್ರವನ್ನೂ ತೋರಿಸಬೇಕಾಗುತ್ತದೆ. ಅದರಲ್ಲೂ ಪ್ರತಿ ಜೀವಿಯ ಜೀವನಕ್ಕೂ ಆಸ್ಪದವಾಗಿ ಮತ್ತು ಇತಿಹಾಸದಲ್ಲಿ ಘಟಿಸಿದ ಯಾವುದೇ ಪ್ರಮಾದಗಳಿಗೂ ವಿಚಲನೆಗೊಳ್ಳದ ಅಮೃತತತ್ತ್ವದ ನೆಲೆಯ ಅಸ್ತಿತ್ವವನ್ನು ಪಡೆದುಕೊಳ್ಳುವಲ್ಲಿ ರೂಪುಗೊಳಿಸಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/42–44** **– ಶ್ರೀಮಾತೆ**

# ಭವಿಷ್ಯದ ಕೀಲಿಕೈಗಳು

– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ

## ಸ್ತ್ರೀ ಕುಲದ ತತ್ತ್ವವನ್ನು ಗೌರವಿಸಿ

ನಿಜಕ್ಕೂ, ಭಾರತದಲ್ಲಿ ಅತ್ಯಂತ ತೀವ್ರವಾದ ಆರಾಧನೆ, ಸರ್ವೋಚ್ಚ ಮಾತೆಯ ಸಂಪೂರ್ಣ ಪೂಜೆ, ಬ್ರಹ್ಮಾಂಡದ ಸೃಷ್ಟಿಕರ್ತೆ, ಎಲ್ಲ ಶತ್ರುಗಳನ್ನು ಜಯಿಸಿದವರು, ಎಲ್ಲ ದೇವರುಗಳ ಮತ್ತು ಎಲ್ಲ ಪ್ರಪಂಚಗಳ ತಾಯಿ, ವರಪ್ರದಾಯಿಕೆ ಎಂಬುದನ್ನು ನಾವು ಕಾಣುತ್ತೇವೆ; ಅಲ್ಲವೇ?

ಮತ್ತು ಭಾರತದಲ್ಲೂ, ತೀವ್ರವಾದ ನಿಂದನೆ, ಸ್ತ್ರೀ ಕುಲದ ತತ್ತ್ವಗಳ ನಿಂದನೆ, ಪ್ರಕೃತಿ, ಮಾಯೆ, ಅಶುದ್ಧಗೊಳಿಸುವ ಭ್ರಾಂತಿ, ಎಲ್ಲ ಬೀಳುಗಳ ಮತ್ತು ದುಃಖಗಳ ಕಾರಣ, ಮೋಸಗೊಳಿಸುವ ಮತ್ತು ಅಪವಿತ್ರಗೊಳಿಸುವ ಮತ್ತು ದೇವರಿಂದ ದೂರ ಸೆಳೆಯುವ ಸ್ವಭಾವ ಎಂಬುದನ್ನು ಸಹ ನಾವು ಕಾಣುತ್ತೇವೆ, ಅಲ್ಲವೇ?

ಭಾರತದ ಇಡೀ ಜೀವನವನ್ನು ಈ ವಿರೋಧಾಭಾಸದಿಂದ ಚಿತ್ರೀಕರಿಸಲಾಗಿದೆ; ಆದುದರಿಂದ ಅವಳು ಮನಸ್ಸು ಮತ್ತು ಹೃದಯ ಎರಡರಿಂದಲೂ ಬಳಲುತ್ತಿದ್ದಾಳೆ. ಎಲ್ಲೆಡೆ, ಸ್ತ್ರೀ–ದೇವತೆಗಳನ್ನು ಅವಳ ಬಲಿಪೀಠದ ಮೇಲೆ ಸ್ಥಾಪಿಸಲಾಗಿದೆ; ಭಾರತದ ಮಕ್ಕಳು, ತಮ್ಮ ತಾಯಿ ದುರ್ಗಾಳಿಂದ ಮೋಕ್ಷ ಮತ್ತು ವಿಮೋಚನೆಗಾಗಿ ಕಾಯುತ್ತಿದ್ದಾರೆ. ಆದಾಗ್ಯೂ, ಅವತಾರ ಎಂದಿಗೂ ಮಹಿಳೆಯ ದೇಹದಲ್ಲಿ ಅವತರಿಸುವುದಿಲ್ಲ ಎಂದು ಅವಳ ಮಕ್ಕಳಲ್ಲಿ ಒಬ್ಬನು ಹೇಳಿದ್ದಲ್ಲವೆ, ಏಕೆಂದರೆ ಯಾವುದೇ ಸರಿಯಾದ ಮನಸ್ಸಿನ ಹಿಂದೂ ಅವನನ್ನು ಗುರುತಿಸುವುದಿಲ್ಲ! ಅದೃಷ್ಟವಶಾತ್ ದೈವೀಕತೆಯು ಅಂತಹ ಕೀಳು ಪಂಥೀಯ ಮನೋಭಾವದಿಂದ ಪ್ರಭಾವಿತವಾಗುವುದಿಲ್ಲ ಅಥವಾ ಸಣ್ಣ ಪರಿಗಣನೆಗಳಿಂದ ಪ್ರಚೋದನೆ–ಯಾಗುವುದಿಲ್ಲ ಮತ್ತು ಭೂ–ಮಂಡಲದಲ್ಲಿ ಪ್ರಕಟವಾಗುವುದು ಅವನಿಗೆ ಇಷ್ಟವಾದಾಗ, ಅವನು ಪುರುಷರಿಂದ ಗುರುತಿಸಲ್ಪಟ್ಟಿರುವನೋ ಇಲ್ಲವೋ ಎಂಬ ಬಗ್ಗೆ ಅವನು ಬಹಳ ಕಡಿಮೆ ಕಾಳಜಿ ವಹಿಸುತ್ತಾನೆ. ಇದಲ್ಲದೆ, ಅವನ ಎಲ್ಲ ಅವತಾರಗಳಲ್ಲಿ, ಅವನು ಯಾವಾಗಲೂ ಮಕ್ಕಳನ್ನೂ ಮತ್ತು ಪಾಂಡಿತ್ಯವುಳ್ಳವರಿಗೆ ಸರಳ ಹೃದಯಗಳನ್ನು ಇಷ್ಟಪಡುತ್ತಾನೆ ಎಂದು ತೋರುತ್ತದೆ.

ಯಾವುದೇ ಸಂದರ್ಭದಲ್ಲಿ, ಹೊಸ ಕಲ್ಪನೆ ಮತ್ತು ಪ್ರಜ್ಞೆಯ ಅಭಿವ್ಯಕ್ತಿಯು, ಪ್ರಕೃತಿಯನ್ನು – ಹೊಸ ಪ್ರಭೇದವೊಂದನ್ನು – ರಚಿಸಲು ಒತ್ತಾಯಿಸುವವರೆಗೆ

ಅದು ಪ್ರಾಣಿಗಳ ಸಂತಾನೋತ್ಪತ್ತಿಯ ಅವಶ್ಯಕತೆಗೆ ಮಣಿಯಬೇಕಾಗಿಲ್ಲ, ಮತ್ತು ಅದು ಅದರಿಂದ ಎರಡು ಪೂರಕ ಲಿಂಗಗಳಾಗಿ ವಿಭಜಿಸುವ ಜವಾಬ್ದಾರಿಯ ಅಡಿಯಲ್ಲಿರುತ್ತದೆ, ಪ್ರಸ್ತುತ ಮಾನವ ಜನಾಂಗದ ಪ್ರಗತಿಗೆ ಎರಡೂ ಅಂಗಗಳನ್ನು ಪರಿಪೂರ್ಣ ಸಮಾನತೆಯ ತಳಹದಿಯಲ್ಲಿ ಪರಿಗಣಿಸುವುದು ಅತ್ಯುತ್ತಮವಾಗಿ ಮಾಡಬಹುದಾದ ಕೆಲಸ, ಅವರಿಗೆ ಎಲ್ಲ ಲೈಂಗಿಕ ಭೇದ, ಎಲ್ಲ ಸಾಧ್ಯತೆಗಳ ಮತ್ತು ಸಾಮರಸ್ಯತೆಗಳ ಮೂಲಗಳಿಗೆ ಮೇಲಾದ ಒಂದೇ ರೀತಿಯ ಶಿಕ್ಷಣ ಮತ್ತು ತರಬೇತಿ ಮತ್ತು ಕಂಡುಹಿಡಿಯಲು ಕಲಿಸುವುದನ್ನು ನಿರಂತರ ಸತ್ಯವಾದ ದೈವೀ ಸಂಪರ್ಕದ ಮೂಲಕ ಕೊಡುವುದು ಅತ್ಯಂತ ಮುಖ್ಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/105–06**

## ಆರ್ಯನ್ ಚಾರಿತ್ರ್ಯವನ್ನು ಪುನರ್ ನಿರ್ಮಿಸಿ

ನಮ್ಮ ಗುರಿ ಸನಾತನ ಧರ್ಮವನ್ನು ಹರಡುವುದು ಮತ್ತು ಆ ಸನಾತನ ಧರ್ಮದ ಆಧಾರದ ಮೇಲೆ ಜನಾಂಗದ ಧರ್ಮಾಚರಣೆ ಮತ್ತು ಯುಗದ ಉತ್ಸಾಹವನ್ನು ಸ್ಥಾಪಿಸುವದಾಗಿದೆ. ನಾವು ಭಾರತೀಯರು, ಆರ್ಯ ಜನಾಂಗದ ವಂಶಸ್ಥರು, ಆರ್ಯ ಶಿಕ್ಷಣ ಮತ್ತು ನೀತಿ ಶಾಸ್ತ್ರದ ಹಕ್ಕನ್ನೂ ಹೊಂದಿದ್ದೇವೆ. ಆ ಆರ್ಯ ಭಾವನೆ ನಮ್ಮ ಕುಟುಂಬ ಧರ್ಮ ಮತ್ತು ಜನಾಂಗೀಯ ಧರ್ಮ, ಜ್ಞಾನ, ಭಕ್ತಿ ಮತ್ತು ಚಟುವಟಿಕೆಗಳು ಆರ್ಯ ಶಿಕ್ಷಣದ ಮೂಲವಾಗಿವೆ; ಉದಾರತೆ, ಪ್ರೀತಿ, ಧೈರ್ಯ, ಶಕ್ತಿ, ನಮ್ರತೆಗಳು ಆರ್ಯ ನಡತೆಯ ಚಿಹ್ನೆಗಳು. ಜನ ಸಮುದಾಯದಲ್ಲಿ ಜ್ಞಾನದ ಬೆಳಕನ್ನು ಹರಡುವುದು, ಉನ್ನತ ಉದಾರವಾದಿ ಪಾತ್ರಗಳ ಪಾಪರಹಿತವಾದ ಆದರ್ಶವನ್ನು ಜನಾಂಗದ ಮುಂದೆ ಹಿಡಿದಿಟ್ಟುಕೊಳ್ಳುವುದು, ದುರ್ಬಲರನ್ನು ರಕ್ಷಿಸುವುದು, ಪ್ರಬಲ ದಬ್ಬಾಳಿಕೆಯನ್ನು ಶಿಕ್ಷಿಸುವುದು ಆರ್ಯನ್ ಬದುಕಿನ ಗುರಿಗಳು; ಈ ಗುರಿಗಳ ಅನ್ವೇಷಣೆಯಲ್ಲಿ ಅದರ ಧಾರ್ಮಿಕ ನೆರವೇರಿಕೆ ಇರುತ್ತದೆ. ಆದರೆ ನಾವು ನಮ್ಮ ಧರ್ಮದ ಮಾರ್ಗಗಳಿಂದ ಪತನ ಹೊಂದಿದ್ದೇವೆ, ನಮ್ಮ ಗುರಿಗಳಿಂದ ದೂರ ಸರಿದಿದ್ದೇವೆ; ಧಾರ್ಮಿಕ ಗೊಂದಲಗಳಿಗೆ ಮತ್ತು ದೋಷದಿಂದ ತುಂಬಿದ ಭ್ರಮೆಗಳಿಗೆ ಬಲಿಪಶುವಾಗಿ, ಆರ್ಯ ಶಿಕ್ಷಣ ಮತ್ತು ಅದರ ನಿಯಂತ್ರಕ ನೀತಿಗಳಿಲ್ಲದೆ ನಾವಿದ್ದೇವೆ. ಆರ್ಯನ್ ಜನಾಂಗಕ್ಕೆ ಸೇರಿದವರಾಗಿದ್ದರೂ, ಬಲಿಷ್ಠ ಮತ್ತು ದುಃಖದ ಹಾಗೂ ಸಂಕಟದ ಬಲಿಪಶುಗಳಿಂದ ಅಧೀನಕ್ಕೊಳಪಟ್ಟ ನಾವು ಕೀಳರಿಮೆ ಮತ್ತು ಅದರಿಂದ ಬರುವ ದಾಸ್ಯವನ್ನು ಒಪ್ಪಿಕೊಂಡಿದ್ದೇವೆ. ಆದ್ದರಿಂದ

ನಾವು ಬದುಕ ಬಯಸಿದರೆ, ಶಾಶ್ವತ ನರಕದಿಂದ ಮುಕ್ತರಾಗಬೇಕೆಂಬ ಸಣ್ಣದೊಂದು ಆಸೆಯಿದ್ದರೆ, ನಮ್ಮ ಮೊದಲ ಕರ್ತವ್ಯ ರಾಷ್ಟ್ರ ಸೇವೆ ಮಾಡುವುದು, ಅದಕ್ಕಿರುವ ಮಾರ್ಗವೆಂದರೆ ಆರ್ಯ ಚಾರಿತ್ರ್ಯವನ್ನು ಪುನರ್ ನಿರ್ಮಿಸುವುದು. ಆದುದರಿಂದ, ಮಾತೃಭೂಮಿಯ ಭವಿಷ್ಯದ ಮಕ್ಕಳು ಬುದ್ಧಿವಂತಿಕೆಯ ಮಾನವರು, ಸತ್ಯ ಪಾಲಿಸುವವರು, ಮಾನವ ಕುಲದ ಪ್ರೇಮಿಗಳು, ಸಹೋದರತ್ವದ ಭಾವನೆಗಳಿಂದ ಪ್ರೇರಿತರಾಗಿ, ಧೈರ್ಯಶಾಲಿ, ವಿನಮ್ರರಾಗಬಹುದು. ಇದು ಇಡೀ ರಾಷ್ಟ್ರಕ್ಕೆ, ವಿಶೇಷವಾಗಿ ದೇಶದ ಯುವಕರಿಗೆ ಸಮರ್ಪಕ ಶಿಕ್ಷಣ, ಉನ್ನತ ಆದರ್ಶಗಳು ಮತ್ತು ಈ ಆರ್ಯ ಆದರ್ಶಗಳನ್ನು ಹುಟ್ಟುಹಾಕುವ ಚಟುವಟಿಕೆಯ ಮಾರ್ಗಗಳನ್ನು ಕೊಡುವುದು ನಮ್ಮ ಮೊದಲ ಗುರಿಯಾಗಿರಬೇಕು. ಅದನ್ನು ನಾವು ಯಶಸ್ವಿ ಮಾಡುವವರೆಗೆ, ಶಾಶ್ವತ ಧರ್ಮದ ಹರಡುವಿಕೆಯು ಬಂಜರು ಭೂಮಿಯಲ್ಲಿ ಬೀಜಗಳನ್ನು ಬಿತ್ತಿದಂತೆ ಆಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/191–92**

**ಹೊಸ ಜೀವನದ ಹೊಸ ರೂಪದ ಅವಶ್ಯಕತೆ**

ಜೀವನವು ಪರಿಣಾಮಕಾರಿ ಚಲನೆಯನ್ನು ಹೊಂದಲು ಆಕಾರ ಮತ್ತು ರೂಪ ಅವಶ್ಯಕ. ಇದೀಗ ರೂಪರಹಿತವಾದುದು ರೂಪ ಪಡೆದುಕೊಂಡಿದೆ. ಹೆಸರು ಮತ್ತು ರೂಪ ಮಾಯೆಯ ಚಂಚಲತೆಯ ಕಲ್ಪನೆಯಲ್ಲ, ರೂಪದ ಸಕಾರಾತ್ಮಕ ಅವಶ್ಯಕತೆಯು ರೂಪದ ಕಲ್ಪನೆಯನ್ನು ತಂದಿದೆ. ವಿಶ್ವದ ಯಾವುದೇ ಚಟುವಟಿಕೆಗಳನ್ನು ಹೊರಗಿಡಲು ನಾನು ಬಯಸುವುದಿಲ್ಲ, ರಾಜಕೀಯ, ವ್ಯಾಪಾರ, ಸಾಮಾಜಿಕ ಸಂಘಟನೆ, ಕವನ, ಕಲೆ, ಸಾಹಿತ್ಯ ಎಲ್ಲವೂ ಉಳಿಯುತ್ತವೆ. ಆದರೆ ಎಲ್ಲವುದಕ್ಕೂ ಹೊಸ ಜೀವನ, ಹೊಸ ರೂಪ ನೀಡಲಾಗುವುದು. ನಾನು ರಾಜಕೀಯವನ್ನು ಏಕೆ ತೊರೆದಿದ್ದೇನೆ? ಏಕೆಂದರೆ, ನಮ್ಮ ರಾಜಕೀಯವು ನಿಜವಾದ ಭಾರತದ ವಸ್ತುವಲ್ಲ; ಇದು ಯುರೋಪಿನಿಂದ ಆಮದಾದುದು, ಯುರೋಪಿಯನ್ ವಿಧಾನಗಳ ಅನುಕರಣೆ. ಆದರೆ, ಅದೂ ಅಗತ್ಯವಾಗಿತ್ತು. ನೀವು ಮತ್ತು ನಾನೂ ಸಹ ಯುರೋಪಿಯನ್ ಶೈಲಿಯ ರಾಜಕೀಯದಲ್ಲಿ ತೊಡಗಿದ್ದೇವೆ. ನಾವು ಹಾಗೆ ಮಾಡದಿದ್ದರೆ, ದೇಶವು ಪ್ರಗತಿ ಹೊಂದುತ್ತಿರಲಿಲ್ಲ, ಮತ್ತು ನಮಗೆ ಅದರ ಅನುಭವವಿರುತ್ತಿರಲಿಲ್ಲ ಅಥವಾ ಪೂರ್ಣ ಅಭಿವೃದ್ಧಿಯನ್ನು ಪಡೆಯುತ್ತಿರಲಿಲ್ಲ. ಈಗಲೂ ಇದರ ಅವಶ್ಯಕತೆಯಿದೆ, ಭಾರತದ ಇತರ

ಪ್ರಾಂತ್ಯಗಳಲ್ಲಿರುವಂತೆ ಬಂಗಾಳದಲ್ಲಿ ಅಷ್ಟಾಗಿ ಇಲ್ಲ. ಆದರೆ ಈಗ ನೆರಳನ್ನು ವಿಸ್ತರಿಸುವ ಬದಲು ವಸ್ತುವನ್ನು ಹಿಡಿಯುವ ಸಮಯ ಬಂದಿದೆ. ನಾವು ಭಾರತದ ನಿಜವಾದ ಆತ್ಮವನ್ನು ಜಾಗೃತಗೊಳಿಸಬೇಕು ಮತ್ತು ಅದಕ್ಕೆ ಅನುಗುಣವಾಗಿ ಎಲ್ಲವನ್ನೂ ಮಾಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/365**

**ತಾಯಿಯವರ ಆರಾಧನೆಯು ಅಡಿಪಾಯವಾಗಿರಲೇಬೇಕು**

ನಾವು ಭಾರತೀಯರು, ನಾವು ಆರ್ಯರು. ನಾವು ರಾಷ್ಟ್ರೀಯ ಪ್ರಜ್ಞೆಯನ್ನು ಪಡೆದುಕೊಂಡಿದ್ದೇವೆ. ಆದರೆ, ಅದು ದೇಶ ಪ್ರೇಮದಲ್ಲಿ ಮುಳುಗದಿದ್ದರೆ ನಮ್ಮ ರಾಷ್ಟ್ರೀಯ ಪ್ರಜ್ಞೆ ಅರಳಲು ಸಾಧ್ಯವಿಲ್ಲ. ತಾಯಿಯ ಆರಾಧನೆಯು ಆ ದೇಶ ಪ್ರೇಮದ ಅಡಿಪಾಯವಾಗಿರಬೇಕು. ಬಂಕಿಮ ಚಂದ್ರ ಅವರ ಹಾಡು "ವಂದೇ ಮಾತರಂ" ಬಾಹ್ಯ ಇಂದ್ರಿಯಗಳ ತಡೆಗೋಡೆ ದಾಟಿದ ದಿನ ಮತ್ತು ಹೃದಯಕ್ಕೆ ಬಡಿದ ದಿನ, ನಮ್ಮ ಹೃದಯದಲ್ಲಿ ದೇಶ ಭಕ್ತಿಯು ಹುಟ್ಟಿಕೊಂಡಿತು; ಆ ದಿನ ತಾಯಿಯ ಚಿತ್ರಣವು ನಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ದೇಶವು ತಾಯಿ, ದೇಶವು ದೇವರು – ಉಪನಿಷತ್ತುಗಳ ಬೋಧನೆಗಳ ಒಂದು ಭಾಗವಾಗಿರುವ ಈ ಭವ್ಯವಾದ ಉಪದೇಶವು ರಾಷ್ಟ್ರೀಯ ಉನ್ನತಿಯ ಬೀಜವಾಗಿದೆ. ಹೇಗೆ 'ಜೀವ'ನು ದೇವರ ಭಾಗವಾಗಿರುವನೋ, ಹೇಗೆ 'ಜೀವ'ನ ಶಕ್ತಿಯು ದೇವರ ಶಕ್ತಿಯ ಭಾಗವಾಗಿದೆಯೋ, ಹಾಗೆಯೇ, ಎಪ್ಪತ್ತು ದಶಲಕ್ಷ ಬಂಗಾಳಿಗಳು, ಮುನ್ನೂರು ದಶಲಕ್ಷ ಭಾರತೀಯರ ಸಾಮೂಹಿಕತೆಯು ಸರ್ವವ್ಯಾಪಿ ವಾಸುದೇವನ ಭಾಗವಾಗಿದೆ; ಅದೇ ರೀತಿಯಲ್ಲಿ, ಈ ಮುನ್ನೂರು ದಶಲಕ್ಷ ಜನರ ರಕ್ಷಕಳಾಗಿರುವ, ಶಕ್ತಿಯ ಸಾಕಾರ ರೂಪವಾಗಿರುವ, ಅನೇಕ ಕೈ ಮತ್ತು ಶಕ್ತಿಗಳಿಂದ ಅಲಂಕರಿಸಲ್ಪಟ್ಟ ಭಾರತ ಮಾತೆಯು ದೈವಿಕ ತಾಯಿಯ ಶಕ್ತಿಯಾಗಿದ್ದಾಳೆ, ದೇವತೆಯಾಗಿದ್ದಾಳೆ, ವಿಶ್ವವ್ಯಾಪಿ ಮಹಾಕಾಳಿಯ ದೇಹವಾಗಿದೆ. ತಾಯಿಯ ಮೇಲಿನ ಪ್ರೀತಿಯನ್ನು ಜಾಗೃತಗೊಳಿಸುವ ಮತ್ತು ರಾಷ್ಟ್ರದ ಹೃದಯ ಮತ್ತು ಮನಸ್ಸಿನಲ್ಲಿ ಅವಳ ಪ್ರತಿರೂಪವನ್ನು ಸ್ಥಾಪಿಸುವ ಸಲುವಾಗಿ ಈ ಐದು ವರ್ಷಗಳಲ್ಲಿ ಅನುಭವಿಸಿದ ಉತ್ಸಾಹ, ಉದ್ವೇಗ, ಕಿರುಚಾಟ, ಅವಮಾನ, ದಬ್ಬಾಳಿಕೆ ಮತ್ತು ಚಿತ್ರಹಿಂಸೆಗಳು ದೈವದಿಂದ ನಿರ್ಣಯಿಸಲ್ಪಟ್ಟವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/221–22**

## ತ್ಯಾಗದ ಅವಶ್ಯಕತೆ

ಹಾಗಾದರೆ ನಾವು ಸ್ವತಂತ್ರವಾಗಿ ಹೇಗೆ ಬದುಕಬೇಕು? ಚೈತನ್ಯರು ಕೇವಲ ಪಂಡಿತರಾಗುವುದನ್ನು ಬಿಟ್ಟು ಕೃಷ್ಣನಾದಂತೆ, ರಾಧಾ ಆದಂತೆ, ಬಲರಾಮನಾದಂತೆ, ಆದ್ದರಿಂದ ನಾವೆಲ್ಲರೂ ಅವನ ಪ್ರತ್ಯೇಕ ಜೀವನವನ್ನು ಪಾಲಿಸುವುದನ್ನು ಬಿಟ್ಟು ರಾಷ್ಟ್ರದಲ್ಲಿ ಬದುಕಬೇಕು. ಮೋಕ್ಷದ ಕಲ್ಪನೆಯು ಮುಮುಕ್ಷುವಿನ ಮನಸ್ಸನ್ನು ಹೀರಿಕೊಳ್ಳುವಂತೆ, ರಾಷ್ಟ್ರೀಯ ಪುನರುತ್ಥಾನದ ಭರವಸೆ ನಮ್ಮ ಮನಸ್ಸನ್ನು ಹೀರಿಕೊಳ್ಳಬೇಕು. ನಮ್ಮ ತ್ಯಾಗವು, ಹೆಸರಿಲ್ಲದ ತಪಸ್ವಿಯ ತ್ಯಾಗದಷ್ಟು ಪೂರ್ಣವಾಗಿರಬೇಕು. ನಮ್ಮ ಸ್ವತಂತ್ರ ಮತ್ತು ವೈಭವೀಕರಿಸಿದ ತಾಯಿಯ ಮುಖವನ್ನು ನೋಡುವ ನಮ್ಮ ಉತ್ಸಾಹವು, ಶ್ರೀಕೃಷ್ಣನ ಮುಖವನ್ನು ನೋಡಲು ಚೈತನ್ಯರ ಉತ್ಸಾಹದಂತೆ, ಹುಚ್ಚುತನವನ್ನು ನುಂಗಿ ಹಾಕುತ್ತಿರಬೇಕು. ದೇಶಕ್ಕಾಗಿ ನಮ್ಮ ತ್ಯಾಗವು, ಜಗೈ ಮತ್ತು ಮಾಧೈ ಅವರುಗಳು ಗೌರಾಂಗರವರ ಸಂಕೀರ್ತನೆಯನ್ನು ಅನುಸರಿಸಲು, ಒಂದು ಸಾಮ್ರಾಜ್ಯದ ಆಳ್ವಿಕೆಯನ್ನು ತೊರೆದಂತೆ ಉತ್ಸಾಹಯುತ ಮತ್ತು ಪೂರ್ಣವಾಗಿರಬೇಕು. ಬಲಿಪೀಠದ ಮೇಲಿನ ನಮ್ಮ ಅರ್ಪಣೆಗಳು, ತಮ್ಮ ಮಕ್ಕಳನ್ನು ಬೆಂಕಿಯ ಮೂಲಕ ಮೊಲೊಚ್ (ಶಿಶು–ಬಲಿಯನ್ನು ನೀಡಿ ಆರಾಧಿಸಲ್ಪಡುತ್ತಿದ್ದ ಒಂದು ದೇವ–ಪ್ರತಿಮೆ. ಇದು ಕಾರ್ತೆಜೀನಿಯನ್ ಸಮುದಾಯದಲ್ಲಿ ಪ್ರಚಲಿತದಲ್ಲಿ ಇತ್ತು)ಗೆ ಹಾದುಹೋದ ಕಾರ್ತೆಜೀನಿಯನ್ ಪೋಷಕರಂತೆ ಪಶ್ಚಾತ್ತಾಪವಿಲ್ಲದೆ ಪೂರ್ಣವಾಗಿ ಉದಾರವಾಗಿರಬೇಕು. ಯಾವುದೇ ಸಂಕೋಚವು, ನಮ್ಮ ಸ್ವಯಂ ತ್ಯಜಿಸುವಿಕೆಯ ಸಂಪೂರ್ಣತೆಯನ್ನು ಹಾಳುಮಾಡಿದರೆ, ಯಾವುದೇ ಚೌಕಾಶಿಯು ನಮ್ಮ ತ್ಯಾಗದ ಪೂರ್ಣತೆಯನ್ನು ಸಂಕ್ಷಿಪ್ತಗೊಳಿಸಿದರೆ, ಯಾವುದೇ ಸಂದೇಹವು ನಮ್ಮ ನಂಬಿಕೆ ಮತ್ತು ಉತ್ಸಾಹದ ಬಲವನ್ನು ಹಾಳು ಮಾಡಿದರೆ, ಯಾವುದೇ ಸ್ವಯಂ ಆಲೋಚನೆಯು ನಮ್ಮ ಪ್ರೀತಿಯ ಪಾವಿತ್ರ್ಯವನ್ನು ಕಲುಷಿತಗೊಳಿಸಿದರೆ, ಆಗ ತಾಯಿಯು ತೃಪ್ತಳಾಗುವುದಿಲ್ಲ ಮತ್ತು ಅವಳ ಇರುವಿಕೆಯನ್ನು ತಡೆಹಿಡಿಯುವುದು ಮುಂದುವರೆಯುತ್ತದೆ. ನಾವು ಅವಳನ್ನು ಬಾ ಎಂದು ಕರೆಯುತ್ತೇವೆ, ಆದರೆ ಕರೆಯು ಇನ್ನೂ ನಮ್ಮ ಹೃದಯದ ಆಳದಿಂದ ಹೊರಬಂದಿಲ್ಲ. ತಾಯಿಯ ಅಡಿಗಳು ಹೊಸ್ತಿಲಲ್ಲಿವೆ, ಆದರೆ ಅವಳು ಪ್ರವೇಶಿಸುವ ಮೊದಲು, ನಿಜವಾದ ಕೂಗನ್ನು, ಹೃದಯದಿಂದ ಹೊರಹೊಮ್ಮುವ ಕೂಗನ್ನು ಕೇಳಲು ಅವಳು ಕಾಯುತ್ತಾಳೆ. ನಮ್ಮ ಮತ್ತು ನಮ್ಮ ದೇಶದ ನಡುವೆ ನಾವು ಇನ್ನೂ ಅನುಮಾನಿಸುತ್ತಿದ್ದೇವೆ; ನಾವು

ತಾಯಿಯ ಸೇವೆಗೆ ಒಂದು ಅಣೆ(ಆರು ಪೈಸೆ)ಯನ್ನು ನೀಡುತ್ತೇವೆ ಮತ್ತು ನಮಗಾಗಿ, ನಮ್ಮ ಹೆಂಡಂದಿರಿಗಾಗಿ, ನಮ್ಮ ಮಕ್ಕಳಿಗಾಗಿ, ನಮ್ಮ ಆಸ್ತಿಗಾಗಿ, ನಮ್ಮ ಖ್ಯಾತಿ ಮತ್ತು ಪ್ರಸಿದ್ಧಿಗಾಗಿ ನಮ್ಮ ಸುರಕ್ಷತೆಗಾಗಿ ಹದಿನೈದು ಅಣೆಗಳನ್ನು ಇಡುತ್ತೇವೆ. ತಾಯಿಯು ತನ್ನನ್ನು ತಾನು ಕೊಡುವ ಮೊದಲು ಎಲ್ಲವನ್ನೂ ಕೇಳುತ್ತಾಳೆ. ಸೂರತ್ ರಾಜ ತನ್ನ ಅಭಿದಮನಿಯ ರಕ್ತವನ್ನು ಅರ್ಪಿಸುವವರೆಗೂ ತಾಯಿ ಅವನಿಗೆ ಕಾಣಿಸಿಕೊಂಡು ಅವನು ವರವನ್ನು ಆರಿಸಿಕೊಳ್ಳುವಂತೆ ಕೇಳಲಿಲ್ಲ. ಶಿವಾಜಿಯು ತನ್ನ ತಲೆಯನ್ನು ತಾಯಿಯ ಪಾದದಲ್ಲಿ ಅರ್ಪಿಸುವ ತನಕ, ತಾಯಿ ಭವಾನಿಯು, ತನ್ನನ್ನು ನೋಡಲು ಸಾಧ್ಯವಾದ ರೂಪದಲ್ಲಿ ಅವನ ಕೈಯನ್ನು ತಡೆದು, ತನ್ನ ಜನರನ್ನು ಮುಕ್ತಗೊಳಿಸುವ ಆಜ್ಞೆಯನ್ನು ಕೊಟ್ಟರು. ರಾಷ್ಟ್ರಗಳನ್ನು ಮುಕ್ತಗೊಳಿಸಿದವರು, ತಮ್ಮ ಪ್ರಯತ್ನಗಳು ಯಶಸ್ಸಿನ ಕಿರೀಟವನ್ನು ಹೊಂದುವ ಮೊದಲು ಸಂಪೂರ್ಣವಾಗಿ ತ್ಯಜಿಸುವ ಸಂಕಟವನ್ನು ಅನುಭವಿಸಿವೆ, ಮತ್ತು ಭಾರತವನ್ನು ಮುಕ್ತಗೊಳಿಸುವ ಆಕಾಂಕ್ಷಿಗಳು ಮೊದಲು ತಾಯಿ ಕೋರುವ ಬೆಲೆಯನ್ನು ಪಾವತಿಸಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1031–32**

## ಗಂಭೀರವಾದ ಪುನರುಜ್ಜೀವನದ ಅವಶ್ಯಕತೆ

ದೇಶವು ಮುಕ್ತವಾಗುವುದಕ್ಕಿಂತ ಮೊದಲು, ಅದು ಗಂಭೀರವಾದ ಪುನರುಜ್ಜೀವನದ ಆಧೀನ ಲಕ್ಷಣಗಳಾದ ಅದನ್ನು ರೂಪಿಸಲು ಬಯಸುವ ಯೋಜನೆಗಳು, ಕೈಗಾರಿಕಾ ಪುನರುಜ್ಜೀವನ ಯೋಜನೆ, ಶೈಕ್ಷಣಿಕ ಪುನರುಜ್ಜೀವನ ಯೋಜನೆ, ಸ್ವ–ಸಹಾಯದ ಮೂಲಕ ರಾಜಕೀಯ ಪುನರುಜ್ಜೀವನದ ಯೋಜನೆ ಇವುಗಳ ಮೂಲಕ ದೇಶವು ಸಾಗಬೇಕು. ಮಾತೆಯವರು ನಮ್ಮಿಂದ ಯಾವುದೇ ಸೂತ್ರಗಳನ್ನು (ವ್ಯವಸ್ಥೆಗಳನ್ನು), ಯಾವುದೇ ಯೋಜನೆಗಳನ್ನು, ಯಾವುದೇ ವಿಧಾನಗಳನ್ನು ಕೇಳುವುದಿಲ್ಲ. ಅವಳು, ನಾವು ರೂಪಿಸಬಹುದಾದ ಎಲ್ಲಕ್ಕಿಂತ ಉತ್ತಮವಾದ ಯೋಜನೆಗಳನ್ನು, ಕ್ರಮಗಳನ್ನು, ವಿಧಾನಗಳನ್ನು ಸ್ವತಃ ಒದಗಿಸುತ್ತಾಳೆ. ಅವಳು ನಮ್ಮ ಹೃದಯಗಳನ್ನು, ನಮ್ಮ ಬದುಕನ್ನು ಕೇಳುತ್ತಾಳೆ, ಕಡಿಮೆಯೂ ಇಲ್ಲ, ಹೆಚ್ಚೂ ಇಲ್ಲ. ಸ್ವದೇಶಿ, ರಾಷ್ಟ್ರೀಯ ಶಿಕ್ಷಣ, ಸ್ವರಾಜ್ ಸಂಘಟಿಸುವ ಪ್ರಯತ್ನ ಅವಳಿಗೆ ಸ್ವಯಂ ಶರಣಾಗಲು ಇರುವ ಹಲವು ಅವಕಾಶಗಳು ಮಾತ್ರ. ನಾವು, ಸ್ವದೇಶಿಗಾಗಿ ಎಷ್ಟು ಪ್ರಯತ್ನಿಸಿದ್ದೇವೆ, ಸ್ವರಾಜ್‌ಗಾಗಿ

ಎಷ್ಟು ಬುದ್ಧಿವಂತಿಕೆಯಿಂದ ಯೋಜಿಸಿದ್ದೇವೆ, ಶಿಕ್ಷಣವನ್ನು ಎಷ್ಟು ಯಶಸ್ವಿಯಾಗಿ ಸಂಘಟಿಸಿದ್ದೇವೆ ಎಂಬುದನ್ನು ಅವಳು ನೋಡುವುದಿಲ್ಲ. ಆದರೆ, ನಮ್ಮನ್ನು ನಾವು ಎಷ್ಟು ಅರ್ಪಿಸಿಕೊಂಡಿದ್ದೇವೆ, ನಮ್ಮ ದೃಢತೆ, ನಮ್ಮ ಶ್ರಮ, ನಮ್ಮ ಸುರಕ್ಷತೆ, ನಮ್ಮ ನೆಮ್ಮದಿ, ನಮ್ಮ ಬದುಕನ್ನು ಎಷ್ಟು ನೀಡಿದ್ದೇವೆ ಎಂಬುದನ್ನು ನೋಡುತ್ತಾಳೆ. ಪುನರುಜ್ಜೀವನವು ಅಕ್ಷರಶಃ ಪುನರ್ಜನ್ಮವಾಗಿದೆ, ಮತ್ತು ಪುನರ್ಜನ್ಮವು ಬುದ್ಧಿಶಕ್ತಿಯಿಂದ, ಕೊಡುಗೆಯ ಪೂರ್ಣತೆಯಿಂದ, ನೀತಿಯಿಂದ, ಯಂತ್ರೋಪಕರಣಗಳ ಬದಲಾವಣೆಯಿಂದ ಬರುವುದಿಲ್ಲ. ಅದು, ನಾವು ಇದ್ದುದೆಲ್ಲವನ್ನು ತ್ಯಾಗದ ಅಗ್ನಿಯಲ್ಲಿ ಎಸೆಯುವ ಮೂಲಕ, ಹೊಸ ಹೃದಯವನ್ನು ಪಡೆಯುವ ಮೂಲಕ ಮತ್ತು ತಾಯಿಯಲ್ಲಿ ಮರುಜನ್ಮದ ಮೂಲಕ ಬರುತ್ತದೆ. ಸ್ವಯಂ ಪರಿತ್ಯಾಗ ನಮ್ಮ ಮೇಲೆ ಮಾಡಿದ ಬೇಡಿಕೆಯಾಗಿದೆ. ಅವಳು ನಮ್ಮನ್ನು ಕೇಳುತ್ತಾಳೆ, ನನಗಾಗಿ ಎಷ್ಟು ಜನ ಬದುಕುತ್ತೀರಾ? ಎಷ್ಟು ಜನ ಸಾಯುತ್ತೀರಾ? ಮತ್ತು ನಮ್ಮ ಉತ್ತರಕ್ಕಾಗಿ ಕಾಯುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1032–33**

## ರಾಷ್ಟ್ರೀಯ ಪುನರುತ್ಥಾನದ ಕಾರ್ಯವನ್ನು ಸಾಧಿಸುವ ಮಾರ್ಗ

ಮೊದಲನೆಯದಾಗಿ, ಆರ್ಯ ಚಾರಿತ್ರ್ಯ ಮತ್ತು ಆರ್ಯ ಶಿಕ್ಷಣವು ಮತ್ತೆ ಆವಿರ್ಭವಿಸಬೇಕು; ಎರಡನೆಯದಾಗಿ, ಯೋಗ ಶಕ್ತಿಯನ್ನು ಮತ್ತೆ ಅಭಿವೃದ್ಧಿ-ಪಡಿಸಬೇಕು; ಕೊನೆಯದಾಗಿ, ಜ್ಞಾನಕ್ಕಾಗಿ ಆ ಹಂಬಲ, ಹೊಸ ಯುಗಕ್ಕೆ ಅಗತ್ಯವಾದ ವಸ್ತುಗಳನ್ನು ಒಟ್ಟುಗೂಡಿಸಲು ಆರ್ಯನ್‌ರಿಗೆ ಯೋಗ್ಯವಾದ ಕೆಲಸದ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು; ಈ ಕಳೆದ ಐದು ವರ್ಷಗಳಲ್ಲಿ ಕೆಲಸ ಮಾಡಿದ ಹುಚ್ಚು ಉತ್ಸಾಹವನ್ನು ತಾಯಿಯವರ ಕೆಲಸದ ಸಾಧನೆಯತ್ತ ಸಜ್ಜುಗೊಳಿಸಬೇಕು ಮತ್ತು ನಿರ್ದೇಶಿಸಬೇಕು. ಮಾರ್ಗವನ್ನು ಅನ್ವೇಷಿಸುವ ಮತ್ತು ಉದ್ಯೋಗವನ್ನು ಹುಡುಕುತ್ತಿರುವ ದೇಶಾದ್ಯಂತದ ಯುವಕರು ತಮ್ಮ ಭಾವೋದ್ವೇಗವನ್ನು ಮೀರಿ ಅಧಿಕಾರವನ್ನು ಸಂಪಾದಿಸುವ ಮಾರ್ಗವನ್ನು ಕಂಡುಕೊಳ್ಳಲಿ. ಸಾಧಿಸಬೇಕಾದ ಉದಾತ್ತ ಕೆಲಸವನ್ನು ಬರೀ ಭಾವೋದ್ವೇಗದಿಂದ ಮಾತ್ರ ಸಾಧಿಸಲಾಗುವುದಿಲ್ಲ; ಶಕ್ತಿಯ ಅವಶ್ಯಕತೆ ಇದೆ. ನಿಮ್ಮ ಪೂರ್ವಜರ ಭೋಧನೆಗಳಿಂದ ಪಡೆಯಬಹುದಾದ ಬಲವು ಅಸಾಧ್ಯವಾದುದನ್ನು ಮಾಡಬಹುದು. ಆ ಬಲವು ನಿಮ್ಮ ದೇಹದಲ್ಲಿ ಇಳಿಯಲು ತಯಾರಿ ನಡೆಸುತ್ತಿದೆ. ಆ ಬಲವು ಸ್ವತಃ ಮಾತೆಯವರೇ ಆಗಿದ್ದಾರೆ.

ಅವಳಿಗೆ ಶರಣಾಗಲು ಕಲಿಯಿರಿ. ತಾಯಿಯವರು ನಿಮ್ಮನ್ನು ತಮ್ಮ ಸಾಧನವನ್ನಾಗಿ ಮಾಡಿಕೊಳ್ಳುವ ಮೂಲಕ ಕೆಲಸವನ್ನು ಎಷ್ಟು ವೇಗವಾಗಿ, ಎಷ್ಟು ಶಕ್ತಿಯುತವಾಗಿ ಸಾಧಿಸುತ್ತಾರೆಂದರೆ, ಜಗತ್ತು ಬೆರಗುಗೊಳ್ಳುತ್ತದೆ. ಆ ಬಲವಿಲ್ಲದೆ ನಿಮ್ಮ ಎಲ್ಲ ಪ್ರಯತ್ನಗಳು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ತಾಯಿಯವರ ಚಿತ್ರಣವು ನಿಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ, ನೀವು ತಾಯಿಯವರ ಸೇವೆ ಮಾಡಲು ಮತ್ತು ಆರಾಧಿಸಲು ಕಲಿತಿದ್ದೀರಿ; ಈಗ ನಿಮ್ಮೊಳಗಿರುವ ತಾಯಿಯವರಿಗೆ ಶರಣಾಗಿರಿ. ಈ ಕೆಲಸವನ್ನು ಸಾಧಿಸಲು ಅನ್ಯ ಮಾರ್ಗವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/222–223**

### ಪ್ರಧಾನ ಅಡಚಣೆ ಮತ್ತು ಪರಿಹಾರ

ನಮ್ಮ ಮುಖ್ಯ ಅಡಚಣೆ ಏನೆಂದರೆ, ದೇಶವನ್ನು ನಮ್ಮ ತಾಯಿಯಾಗಿ ಕಾಣುವ ದೃಷ್ಟಿಕೋನದ ಅನುಪಸ್ಥಿತಿ. ಬಹುತೇಕ ನಮ್ಮ ರಾಜಕಾರಣಿಗಳು ತಾಯಿಯವರ ನಿಕಟ ಮತ್ತು ಪೂರ್ಣ ದೃಷ್ಟಿಕೋನ ಮನಗಾಣಲು ಅಸಮರ್ಥರಾಗಿದ್ದಾರೆ. ರಣಜೀತ್ ಸಿಂಗ್ ಅಥವಾ ಗುರು ಗೋವಿಂದ್ ಸಿಂಗ್ ಅವರು ಭಾರತ ಮಾತೆಯನ್ನಾಗಿ ಕಾಣುವ ಬದಲು ಐದು ನದಿಗಳ ತಾಯಿಯನ್ನಾಗಿ ನೋಡಿದ್ದರು; ಶಿವಾಜಿ ಅಥವಾ ಬಾಜಿರಾವ್‌ರವರು ಭಾರತ ಮಾತೆಯ ಬದಲು ಹಿಂದೂಗಳ ತಾಯಿಯನ್ನಾಗಿ ನೋಡಿದ್ದರು. ಇತರ ಮಹಾರಾಷ್ಟ್ರದ ರಾಜಕಾರಣಿಗಳು ಮಹಾರಾಷ್ಟ್ರೀಯನ್ನರಿಗೆ ತಾಯಿಯನ್ನಾಗಿ ಮಾತ್ರ ನೋಡಿದ್ದರು. ವಿಭಜನೆಯ ಸಮಯದಲ್ಲಿ ನಾವು “ಬಂಗಾಳ ತಾಯಿ” ಎಂಬ ದೃಷ್ಟಿಯಿಂದ ಆಶೀರ್ವದಿಸಲ್ಪಟ್ಟಿದ್ದೆವು. ಅದು ಏಕತೆಯ ದೃಷ್ಟಿಯಾಗಿತ್ತು. ಆದ್ದರಿಂದ ಬಂಗಾಳದ ಭವಿಷ್ಯತ್ತಿನ ಏಕತೆ ಮತ್ತು ಪ್ರಗತಿ ಖಚಿತವಾಗಿದೆ. ಆದರೆ, ಭಾರತ ಮಾತೆಯ ಏಕೀಕೃತ ಪ್ರತಿರೂಪವು ಇನ್ನೂ ಸಾಕಾರವಾಗಬೇಕಿದೆ. ನಾವು ಸ್ತುತಿಸುವ, ಆರಾಧಿಸುವ, ಪೂಜಿಸುವ ಭಾರತ ಮಾತೆಯು ಕಾಂಗ್ರೆಸ್‌ನಲ್ಲಿ ಒಂದು ಅಲಂಕಾರಿಕ ಆಕಾರವಾಗಿದ್ದಳು. ಬ್ರಿಟಿಷ ರಾಜ್‌ನ ಒಬ್ಬ ಜೊತೆಗಾರ್ತಿ ಮತ್ತು ದಾಕ್ಷಿಣ್ಯಪರ ಸೇವಕಿಯಾಗಿದ್ದಳು, ಪಾಶ್ಚಾತ್ಯದ ಉಡುಪಿನಲ್ಲಿ ಒಬ್ಬ ಅದೈವಿಕ ಭ್ರಾಂತಿ. ವಾಸ್ತವವಾಗಿ ಅವಳು ನಮ್ಮ ತಾಯಿಯಾಗಿರಲಿಲ್ಲ. ಅದಾಗ್ಯೂ, ಆಳ ಅಥವಾ ಅಸ್ಪಷ್ಟ ತಮದಲ್ಲಿ ಅಡಗಿದ ನಮ್ಮ ನೈಜ ಮಾತೆಯು, ನಮ್ಮ ಹೃದಯ ಮತ್ತು ಆತ್ಮವನ್ನು ಸೆಳೆದರು. ಯಾವಾಗ ನಾವು ಅವಳ ಸೌಂದರ್ಯ ಮತ್ತು ಸೊಬಗಿನ

ಪ್ರಖರತೆಯಿಂದ ಅವಳ ನಿಜವಾದ ಅವಿಭಜಿತ ರೂಪವನ್ನು ನೋಡುತ್ತೇವೆಯೋ, ಅಂದು ನಾವು ಉತ್ಸುಕತೆಯಿಂದ ನಮ್ಮ ಜೀವಗಳನ್ನು ಅವಳ ಸೇವೆಗೆ ಅರ್ಪಿಸುತ್ತೇವೆ. ಆಗ ಈ ಅಡಚಣೆ ಹೋಗುತ್ತದೆ, ಮತ್ತು ಭಾರತದ ಏಕತೆ, ಸ್ವಾತಂತ್ರ್ಯ ಮತ್ತು ಪ್ರಗತಿಯನ್ನು ಸಾಧಿಸಲು ಸುಲಭವಾಗುತ್ತದೆ. ಭಾಷೆಯ ಬೇಲಿ ಇನ್ನೆಂದಿಗೂ ವಿಭಜಿಸುವುದಿಲ್ಲ. ಹಿಂದಿ ಭಾಷೆಯನ್ನು ಒಂದು ಬೆಸೆಯುವ ಭಾಷೆಯನ್ನಾಗಿ ಸ್ವೀಕರಿಸಿ, ತಮ್ಮ ಸ್ವಂತ ಪ್ರಾದೇಶಿಕ ಭಾಷೆಯನ್ನು ಗೌರವಿಸಿ ನಾವು ಈ ಅಂಗವೈಕಲ್ಯವನ್ನು ತೊಡೆದುಹಾಕೋಣ. ಹಿಂದು–ಮುಸ್ಲಿಂ ಸಂಘರ್ಷದ ನಿಜವಾದ ಪರಿಹಾರವನ್ನು ಕಂಡುಹಿಡಿಯುವಲ್ಲಿ ನಾವು ಯಶಸ್ವಿಯಾಗುತ್ತೇವೆ. ದೇಶವನ್ನು ತಾಯಿಯಾಗಿ ಬಯಸಿದ ದೃಷ್ಟಿಗಾಗಿ, ಈ ಅಡತಡೆಗಳನ್ನು ನಿವಾರಿಸುವ ಹಂಬಲವನ್ನು ಬಲವಾಗಿ ಅನುಭವಿಸಲಾಗಿಲ್ಲ. ಅದಕ್ಕಾಗಿಯೇ, ಸಾಧನಗಳು ಲಭಿಸಲಿಲ್ಲ ಮತ್ತು ಭಿನ್ನಾಭಿಪ್ರಾಯ ಕೆಟ್ಟದಾಗಿ ಬೆಳೆಯುತ್ತದೆ. ಸದ್ಯ ಬೇಕಾಗಿರುವುದೇನೆಂದರೆ, ನೈಜ ಮತ್ತು ಅಖಂಡ ದೇಶದ ಪ್ರತಿರೂಪ. ಆದರೆ, ಆ ನೈಜ ದೃಷ್ಟಿಕೋನದ ಭ್ರಮೆಯಲ್ಲಿ, ನಾವು ಹಿಂದೂಗಳ ತಾಯಿಯನ್ನು ಅಥವಾ ಹಿಂದೂ ರಾಷ್ಟ್ರೀಯತೆಯನ್ನು ಇನ್ನೂ ಏನಾದರೂ ಪ್ರೀತಿಸುತ್ತಿದ್ದರೆ, ನಾವು ಹಳೆಯ ತಪ್ಪುಗಳಿಗೆ ಬಲಿಯಾಗಿ ರಾಷ್ಟ್ರೀಯತೆಯ ಸಂಪೂರ್ಣ ಅರಳುವಿಕೆಯಿಂದ ನಮ್ಮನ್ನು ನಾವು ವಂಚಿತಗೊಳಿಸಿಕೊಳ್ಳುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/225–26**

**ಅಗತ್ಯವಾದ ದೃಷ್ಟಿಕೋನ**

ನಾವು ಆರ್ಯರ ಅಭಿವೃದ್ಧಿಗಾಗಿ ಮಾತ್ರ ಎದ್ದು ನಿಲ್ಲುತ್ತಿಲ್ಲ, ಅದು ಅರ್ಯ ನಡತೆಯ ಏಳಿಗೆಗಾಗಿ, ಆರ್ಯ ಶಿಕ್ಷಣಕ್ಕಾಗಿ ಆರ್ಯ ಜೀವನದ ನಿಯಮಕ್ಕಾಗಿ. ಚಳುವಳಿಯ ಆರಂಭಿಕ ಹಂತದಲ್ಲಿ ಪಾಶ್ಚಾತ್ಯ ರಾಜಕಾರಣದ ಪ್ರಭಾವ ಬಹಳ ದೊಡ್ಡದಾಗಿತ್ತು; ಆಗಲೂ ಆ ಆರಂಭಿಕ ಹಂತದಲ್ಲಿ ನಾವು ಈ ಸತ್ಯವನ್ನು ಅರಿತುಕೊಂಡೆವು. ದೈವಿಕ ನಿಯಮದ ಚೈತನ್ಯದಿಂದ ತುಂಬಿದ ಎರಡನೆಯ ಹಂತವನ್ನು ಮಾತೆಯ ಮೇಲಿನ ಪ್ರೀತಿಯಿಂದ, ಆರ್ಯ ಘನತೆಯ ಭಾವನೆಯಿಂದ ತಯಾರಿಸಲಾಯಿತು. ರಾಜಕೀಯವು ದೈವೀ ನಿಯಮದ ಒಂದು ಅಂಗವಾಗಿದೆ. ಅದನ್ನು ಆರ್ಯ ಮನೋಭಾವದ ಮೂಲಕ, ಆರ್ಯ ನಿಯಮಗಳಿಂದ ಅಂಗೀಕರಿಸಲ್ಪಟ್ಟ ವಿಧಾನಗಳ ಮೂಲಕ ನಡೆಸಬೇಕಾಗಿದೆ. ನಾವು ನಮ್ಮ ಭವಿಷ್ಯದ

ಭರವಸೆ ಯುವಕರಿಗೆ ಹೇಳುತ್ತೇವೆ: ನಿಮ್ಮ ಹೃದಯದಲ್ಲಿ ದ್ವೇಷವಿದ್ದರೆ ಅದನ್ನು ವಿಳಂಬ ಮಾಡದೆ ಬೇರುಸಹಿತ ಕಿತ್ತೆಸೆಯಿರಿ. ಪ್ರಕ್ಷುಬ್ಧ ಹಿಂಸಾಚಾರದಿಂದ ತುಂಬಿರುವ ಒಂದು ಶಕ್ತಿ (ರಾಜಸಿಕ) ದ್ವೇಷದ ತೀವ್ರ ಉತ್ತೇಜನದಿಂದ ಸ್ವಲ್ಪ ಸಮಯದವರೆಗೆ ಸುಲಭವಾಗಿ ಜಾಗೃತಗೊಳ್ಳಬಹುದು. ಆದರೆ ಅದು ಶೀಘ್ರದಲ್ಲೇ ಒಡೆದು ದೌರ್ಬಲ್ಯಕ್ಕೆ ತಿರುಗುತ್ತದೆ. ದೇಶವನ್ನು ಮುಕ್ತಗೊಳಿಸುವ ನಿರ್ಣಯವನ್ನು ತೆಗೆದುಕೊಂಡವರು, ತಮ್ಮ ಜೀವನವನ್ನು ಸಮರ್ಪಿಸಿಕೊಂಡವರು, ಜನರ ನಡುವೆ ಹೋಗಿ ಬಲವಾದ ಭ್ರಾತೃತ್ವ, ಕಠಿಣ ಪ್ರಯತ್ನ, ಕಠಿಣವಾದ ಸ್ಥಿರತೆ ಮತ್ತು ಬೆಂಕಿಯ ಜ್ವಾಲೆಯಂತಹ ಶಕ್ತಿಯ ಬಂಧವನ್ನು ಹರಡುತ್ತಾರೆ. ಆ ಬಲದಲ್ಲಿ ನಾವು ಅಚಲ ಶಕ್ತಿ ಮತ್ತು ವಿಜಯವನ್ನು ಎಂದೆಂದಿಗೂ ಪಡೆದುಕೊಳ್ಳುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/247–48**

**ಭಾರತದ ಆತ್ಮ**

ನೀವು ನಿಮ್ಮ ಒಂದು ಸಂದೇಶದಲ್ಲಿ ಹೇಳಿದ್ದೀರಿ:

"ಭಾರತಕ್ಕಿರುವ ಪ್ರಥಮ ಸಮಸ್ಯೆ ಎಂದರೆ, ಅವಳ ಆತ್ಮವನ್ನು ಮರಳಿ ಕಂಡುಕೊಳ್ಳುವುದು ಮತ್ತು ಅದನ್ನು ಪ್ರಕಟಪಡಿಸುವುದು."

ಭಾರತದ ಆತ್ಮವನ್ನು ಮರಳಿ ಕಂಡುಕೊಳ್ಳುವುದು ಹೇಗೆ?

ನಿಮ್ಮ ಅತೀಂದ್ರಿಯ ಅಸ್ತಿತ್ವದ ಬಗ್ಗೆ ಜಾಗೃತರಾಗಿರಿ. ಭಾರತ ಮಾತೆಯ ಸೇವೆಯ ಮನೋಭಾವದೊಂದಿಗೆ ನಿಮ್ಮ ಅತೀಂದ್ರಿಯವು ಭಾರತದ ಆತ್ಮದಲ್ಲಿ ತೀವ್ರವಾಗಿ ಆಸಕ್ತಿ ಹೊಂದಲು ಮತ್ತು ಅದರೆಡೆಗೆ ಹಂಬಲಿಸಲು ಬಿಡಿ; ನೀವು ಪ್ರಾಮಾಣಿಕರಾಗಿದ್ದಲ್ಲಿ ಯಶಸ್ವಿಯಾಗುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/312**

ಎಲ್ಲಿ ಅತೀಂದ್ರಿಯ ನಿಯಮ ಆಳಬಹುದೋ ಮತ್ತು ಆಳಲೇಬೇಕೋ ಅಂತಹ ದೇಶ ಭಾರತ. ಅದಕ್ಕಾಗಿ ಇಲ್ಲಿ ಸೂಕ್ತ ಸಮಯ ಒದಗಿ ಬಂದಿದೆ. ದುರದೃಷ್ಟವಶಾತ್, ವಿದೇಶಿ ರಾಷ್ಟ್ರದ ಪ್ರಭಾವ ಮತ್ತು ಪ್ರಾಬಲ್ಯದಿಂದ ವಿರೂಪಗೊಂಡಿರುವ ಈ ದೇಶಕ್ಕೆ ಇದು ಏಕೈಕ ಸಾಧ್ಯವಿರುವ ಮುಕ್ತಿಯ

ಮಾರ್ಗವಾಗಿದೆ. ಆದರೆ, ಇದೆಲ್ಲದರ ಹೊರತಾಗಿಯೂ ಭಾರತ ದೇಶವು ಒಂದು ವಿಶಿಷ್ಟವಾದ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ.

*

*(ಪಾಂಡಿಚೇರಿಯ ಬಾನುಲಿಯಿಂದ ಪ್ರಸಾರವಾದ ಸಂದೇಶ)*

ನಾವುಗಳು ಬೆಳಕಿನ ಮತ್ತು ಸತ್ಯದ ಸಂದೇಶ–ವಾಹಕರಾಗಬೇಕಾಗಿದೆ. ಜಗತ್ತಿಗೆ ಸಾರಬೇಕಾದ ಭವಿಷ್ಯದ ಸಾಮರಸ್ಯವನ್ನು ಒಮ್ಮೆಲೆ ತಾನಾಗಿಯೆ ಅರ್ಪಿಸುತ್ತದೆ.

ಭಯದಿಂದ ಆಡಳಿತ ನಡೆಸುವ ಹಳೆಯ ಅಭ್ಯಾಸವನ್ನು ಪ್ರೀತಿಯ ಸರಕಾರದಿಂದ ಬದಲಾಯಿಸುವ ಸಮಯ ಬಂದಿದೆ.

*(21 ಫೆಬ್ರವರಿ 1971, ಶ್ರೀಮಾತೆಯವರ ಜನ್ಮದಿನದಂದು ಪಾಂಡಿಚೇರಿ ಆಕಾಶವಾಣಿಯಿಂದ ಪ್ರಸಾರವಾದ ಸಂದೇಶ)*

ನಿಮ್ಮ ಸಹಜ ಗುಣಗಳಿಗೆ ಬಗ್ಗದ ನಿಜವಾದ ಸ್ವಾತಂತ್ರ್ಯವು ಆರೋಹಣದ ಚಲನೆಯಾಗಿದೆ.

ನಿಜವಾದ ಸ್ವಾತಂತ್ರ್ಯವು ಒಂದು ದೈವಿಕ ಪ್ರಕಟಣೆಯಾಗಿದೆ (ಅಭಿವ್ಯಕ್ತಿಯಾಗಿದೆ).

ಮಾನವ ಜನಾಂಗವು ಏನಾಗಬೇಕಾಗಿದೆಯೋ ಅದರ ನಿದರ್ಶನವಾಗಿ ಅವಳು ಜಗತ್ತಿಗೆ ಸರಿ ಮಾದರಿಯಾಗಬೇಕೆಂದರೆ ನಾವು ಭಾರತದ ನಿಜ ಸ್ವಾತಂತ್ರ್ಯವನ್ನು ಬಯಸುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/370–71**

ಅನಾದಿ ಕಾಲದಿಂದಲೂ, (ಕೆಲ ಪಂಡಿತರು ಕ್ರಿಶ್ಚಿಯನ್ ಯುಗಕ್ಕಿಂತ 8000 ವರ್ಷ ಮೊದಲು ಎಂದು ಹೇಳುತ್ತಾರೆ) ಭಾರತವು ಆಧ್ಯಾತ್ಮಿಕ ಜ್ಞಾನ ಮತ್ತು ಅನುಷ್ಠಾನದ, ಸರ್ವೋಚ್ಚ ಸತ್ಯದ ಆವಿಷ್ಕಾರದ ಮತ್ತು ಅದರೊಂದಿಗೆ ಒಂದಾಗುವ ಭೂಮಿಯಾಗಿದೆ. ಇದು ಏಕಾಗ್ರತೆಯನ್ನು ಹೆಚ್ಚು ಮತ್ತು ಉತ್ತಮವಾಗಿ ಅಭ್ಯಾಸ ಮಾಡಿದ ದೇಶ. ಈ ದೇಶದಲ್ಲಿ ಸಂಸ್ಕೃತದಲ್ಲಿ ಯೋಗ ಎಂದು ಕರೆಯಲ್ಪಡುವುದನ್ನು ಕಲಿಸುವ ಮತ್ತು ಬಳಸುವ ಅಸಂಖ್ಯಾತ ವಿಧಾನಗಳಿವೆ. ಅದರಲ್ಲಿ ಕೆಲವು ಬರೀ ಪ್ರಾಪಂಚಿಕವಾಗಿವೆ, ಇನ್ನು ಕೆಲವು ಶುದ್ಧ ಬೌದ್ಧಿಕವಾಗಿವೆ,

ಕೆಲವು ಧರ್ಮನಿಷ್ಠವಾಗಿವೆ; ಒಂದು ಹೆಚ್ಚಿನ ಸಮಗ್ರ ಫಲಿತಾಂಶವನ್ನು ಹೊಂದಲು ಅವುಗಳಲ್ಲಿ ಕೆಲವನ್ನು ವಿವಿಧ ಪ್ರಕ್ರಿಯೆಗಳಲ್ಲಿ ಸೇರಿಸಲಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/373**

ಭಾರತದ ಆತ್ಮವು ಒಂದು ಮತ್ತು ಅವಿಭಜಿತ. ಭಾರತ ಮಾತೆಗೆ, ಜಗತ್ತಿನಲ್ಲಿ ತನ್ನ ಉದ್ದಿಷ್ಟ ಕಾರ್ಯದ ಅರಿವಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/351 – ಶ್ರೀಮಾತೆ**

---

ಸಂಸ್ಕೃತವು ಭಾರತದ ರಾಷ್ಟ್ರ ಭಾಷೆಯಾಗಲೇಬೇಕು.

ಆಶೀರ್ವಾದಗಳು.

*

ಹಿಂದಿ ಭಾಷೆಯು, ಹಿಂದಿ ಮಾತನಾಡುವ ಪ್ರದೇಶಕ್ಕೆ ಸಂಬಂಧಿಸಿದ ಜನರಿಗೆ ಮಾತ್ರ ಒಳ್ಳೆಯದು. ಸಂಸ್ಕೃತ ಭಾಷೆಯು ಎಲ್ಲ ಭಾರತಿಯರಿಗೆ ಒಳ್ಳೆಯದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/375 – ಶ್ರೀಮಾತೆ**

**ತಾಯಿಯವರಿಗೆ ತಲೆಬಾಗಿ**

ನಾವು ಯುರೋಪಿನ್‌ರಲ್ಲ, ನಾವು ಏಷಿಯನ್‌ರು. ನಾವು ಭಾರತಿಯರು, ನಾವು ಆರ್ಯರು. ರಾಷ್ಟ್ರೀಯ ಪ್ರಜ್ಞೆಯನ್ನು ನಾವು ಗಳಿಸಿದ್ದೇವೆ, ಅದು ನಮ್ಮ ರಾಷ್ಟ್ರ ಪ್ರೇಮದಲ್ಲಿ ಆಳವಾಗಿ ಬೇರೂರದ ಹೊರತು ನಮ್ಮ ರಾಷ್ಟ್ರ ಪ್ರಜ್ಞೆ ಅರಳಲು ಸಾಧ್ಯವಿಲ್ಲ. ಭಾರತ ಮಾತೆಯ ಉಪಾಸನೆ ಆ ರಾಷ್ಟ್ರ ಪ್ರೇಮದ ಅಡಿಪಾಯವಾಗಬೇಕು. ಬಂಕಿಮ ಚಂದ್ರ ಅವರ ಹಾಡು "ವಂದೇ ಮಾತರಂ" ನಮ್ಮ ಬಾಹ್ಯ ಇಂದ್ರಿಯಗಳ ಬೇಲಿಗಳನ್ನು ದಾಟಿ ನಮ್ಮ ಹೃದಯವನ್ನು ತಟ್ಟಿದ ದಿವಸ, ನಮ್ಮ ಹೃದಯದಲ್ಲಿ ದೇಶ ಪ್ರೇಮ ಹುಟ್ಟಿತು, ಆ ದಿನ ಮಾತೆಯ ಪ್ರತಿರೂಪವು ನಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ದೇಶವು ತಾಯಿ, ದೇಶವು ದೇವರು – ಇದು ಉಪನಿಷತ್ತುಗಳ ಬೋಧನೆಯ ಒಂದು ವಿಧವಾದ ಈ ಉದಾತ್ತ ಉಪದೇಶವು ದೇಶದ ಉದಯಿಸುವಿಕೆಯ ಬೀಜವಾಗಿದೆ. ಹೇಗೆ "ಜೀವ"ನು

ದೇವರ ಭಾಗವಾಗಿದ್ದಾನೊ, ಹಾಗೆಯೇ "ಜೀವ"ನ ಶಕ್ತಿಯು ದೇವರ ಶಕ್ತಿಯ ಭಾಗವಿದ್ದಂತೆ, ಹೇಗೆ ಎಪ್ಪತ್ತು ದಶಲಕ್ಷ ಬಂಗಾಳಿಗಳು, ಮುನ್ನೂರು ದಶಲಕ್ಷ ಭಾರತೀಯರ ಸಮೂಹವು ಸರ್ವವ್ಯಾಪಿಯಾದ ವಾಸುದೇವನ ಭಾಗವಾಗಿದ್ದಾರೊ; ಅದೇ ರೀತಿಯಾಗಿ ಹಲವು ಕೈಗಳಿಂದ ಮತ್ತು ಶಕ್ತಿಗಳಿಂದ ಭೂಷಿತಳಾದ, ಮುನ್ನೂರು ದಶಲಕ್ಷ ಜನರ ಆಶ್ರಯದಾತೆ, ಶಕ್ತಿಯ ಪ್ರತಿರೂಪವಾದ ಭಾರತ ಮಾತೆಯು ದಿವ್ಯಮಾತೆಯ ಶಕ್ತಿ, ದೇವತೆ, ವಿಶ್ವವ್ಯಾಪಿ ಮಹಾಕಾಳಿಯ ನಿಜವಾದ ದೇಹ. ಮಾತೆಗೆ ಪ್ರೀತಿಯನ್ನು ಜಾಗೃತಗೊಳಿಸುವ ಸಲುವಾಗಿ ಮತ್ತು ಅವಳ ಪ್ರತಿರೂಪವನ್ನು ಭಾರತೀಯರ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಪ್ರತಿಷ್ಠಾಪಿಸುವ ಸಲುವಾಗಿ ಈ ಐದು ವರ್ಷಗಳಲ್ಲಿ ಸಹಿಸಿದ ಆತುರತೆ, ಭಾವೋದ್ರೇಕ, ಕೂಗಾಟ, ಅವಮಾನ ದಬ್ಬಾಳಿಕೆ ಮತ್ತು ಚಿತ್ರಹಿಂಸೆಗಳು ಆ ದೇವರ ಆಜ್ಞೆಯಾಗಿತ್ತು. ಆ ಕಾರ್ಯ ಈಗ ಮುಗಿದಿದೆ, ಮುಂದೇನು?

ಮುಂದೆ, ಆರ್ಯರ ಪುರಾತನ ಶಕ್ತಿಯನ್ನು ಪುನರ್ ರಚಿಸಬೇಕಾಗಿದೆ. ಮೊದಲು, ಆರ್ಯರ ಚಾರಿತ್ರ್ಯ ಮತ್ತು ಆರ್ಯರ ಶಿಕ್ಷಣ ಪುನಃ ಪ್ರಕಟವಾಗಬೇಕು; ಎರಡನೆಯದಾಗಿ, ಯೋಗದ ಶಕ್ತಿಯನ್ನು ಮತ್ತೊಮ್ಮೆ ಬೆಳೆಸಬೇಕಾಗಿದೆ; ಕೊನೆಯದಾಗಿ, ಜ್ಞಾನಕ್ಕಾಗಿ ಆ ಹಂಬಲ, ಆರ್ಯರ ಯೋಗ್ಯವಾದ ಆ ಕಾರ್ಯಕ್ಷಮತೆ ಎಲ್ಲವನ್ನು ಹೊಸ ಯುಗಕ್ಕಾಗಿ ಅವಶ್ಯಕವಾದ ವಸ್ತುಗಳನ್ನು ಹೊಂದಿಸಲು ಉಪಯೋಗಿಸಲೇಬೇಕಾಗಿದೆ; ಈ ಹಿಂದಿನ ಐದು ವರ್ಷಗಳಲ್ಲಿ ಹುಚ್ಚು ಭಾವೋದ್ರೇಕದ ತಯಾರಿಯನ್ನು ಒಟ್ಟುಗೂಡಿಸಿ ತಾಯಿಯವರ ಕಾರ್ಯವು ಈಡೇರುವೆಡೆಗೆ ನಿರ್ದೇಶಿಸಬೇಕಾಗಿದೆ. ಮಾರ್ಗವನ್ನು ಅನ್ವೇಷಿಸುವ ಮತ್ತು ಉದ್ಯೋಗವನ್ನು ಹುಡುಕುತ್ತಿರುವ ದೇಶಾದ್ಯಂತದ ಯುವಕರು ತಮ್ಮ ಭಾವೋದ್ವೇಗವನ್ನು ಮೀರಿ ಅಧಿಕಾರವನ್ನು ಸಂಪಾದಿಸುವ ಮಾರ್ಗವನ್ನು ಕಂಡುಕೊಳ್ಳಲಿ. ಸಾಧಿಸಬೇಕಾದ ಉದಾತ್ತ ಕೆಲಸವನ್ನು ಬರೀ ಭಾವೋದ್ವೇಗದಿಂದ ಮಾತ್ರ ಸಾಧಿಸಲಾಗುವುದಿಲ್ಲ; ಅದಕ್ಕೆ ಬಲದ ಅವಶ್ಯಕತೆಯಿದೆ. ನಿಮ್ಮ ಪೂರ್ವಜರ ಭೋಧನೆಗಳಿಂದ ಪಡೆಯಬಹುದಾದ ಬಲವು ಅಸಾಧ್ಯವಾದುದನ್ನು ಮಾಡಬಹುದು. ಆ ಬಲವು ನಿಮ್ಮ ದೇಹದಲ್ಲಿ ಇಳಿಯಲು ತಯಾರಿ ನಡೆಸುತ್ತಿದೆ. ಆ ಬಲವು ಸ್ವತಃ ಮಾತೆಯವರೇ ಆಗಿದ್ದಾರೆ. ಅವಳಿಗೆ ಶರಣಾಗತರಾಗಲು ಕಲಿಯಿರಿ, ತಾಯಿಯವರು ನಿಮ್ಮನ್ನು ತಮ್ಮ ಸಾಧನವನ್ನಾಗಿ ಮಾಡಕೊಳ್ಳುವ ಮೂಲಕ ಕೆಲಸವನ್ನು ಎಷ್ಟು ವೇಗವಾಗಿ, ಎಷ್ಟು ಶಕ್ತಿಯುತವಾಗಿ ಸಾಧಿಸುತ್ತಾರೆಂದರೆ, ಜಗತ್ತು ಬೆರಗುಗೊಳ್ಳುತ್ತದೆ.

ಆ ಬಲವಿಲ್ಲದ ನಿಮ್ಮ ಎಲ್ಲ ಪ್ರಯತ್ನಗಳು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ತಾಯಿಯವರ ಚಿತ್ರಣವು ನಿಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ, ನೀವು ತಾಯಿಯವರ ಸೇವೆ ಮಾಡಲು ಮತ್ತು ಆರಾಧಿಸಲು ಕಲಿತುಕೊಂಡಿದ್ದೀರಿ, ಈಗ ನಿಮ್ಮೊಳಗಿರುವ ತಾಯಿಯವರಿಗೆ ಶರಣಾಗು. ಈ ಕೆಲಸವನ್ನು ಸಾಧಿಸಲು ಅನ್ಯ ಮಾರ್ಗವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 9/221–223**

ದೇಶ ಪ್ರೇಮದ ಭಾವನೆಗಳು ನಮ್ಮ ಯೋಗದ ಜೊತೆ ಹೊಂದಿಕೆ–ಯಾಗುವುದಿಲ್ಲ – ಅದರಿಂದ ಬಹು ದೂರ – ಒಬ್ಬನ ತಾಯಿ ಭೂಮಿಯ ಸಾಮರ್ಥ್ಯಕ್ಕಾಗಿ ಮತ್ತು ಸಮಗ್ರತೆಗಾಗಿ ಇಚ್ಛಿಸುವುದು ಒಂದು ನ್ಯಾಯಸಮ್ಮತ ಅನಿಸಿಕೆ. ಪೂರ್ಣ ಸ್ವಾತಂತ್ರ್ಯದಲ್ಲಿ, ಅವಳ ನೈಜ ಇರುವಿಕೆಯಲ್ಲಿ ಅವಳು ಮಾಡಬಹುದಾದ ಪ್ರಗತಿಯು ಮತ್ತು ಅತಿ ಹೆಚ್ಚು ಅವಿರ್ಭಾವವು ಒಳ್ಳೆಯ ಮತ್ತು ಶ್ರೇಷ್ಠ ಇಚ್ಛೆಯಾಗಿದೆ. ಅ ಇಚ್ಛೆಯು ನಮ್ಮ ಯೋಗಕ್ಕೆ ಮಾರಕವಾಗಲಾರದು.

ಆದರೆ, ಯಾರೊಬ್ಬರೂ ಉತ್ತೇಜನಗೊಳ್ಳಬಾರದು, ಯಾರೊಬ್ಬರೂ ಮಾಗುವ ಮುಂಚೆ ಕಾರ್ಯಪ್ರವೃತ್ತರಾಗಬಾರದು. ಸತ್ಯದ ಜಯಕ್ಕಾಗಿ ಒಬ್ಬರು ಪ್ರಾರ್ಥಿಸಬಹುದು ಮತ್ತು ಪ್ರಾರ್ಥಿಸಲೇಬೇಕು, ಹಂಬಲಿಸಬೇಕು ಮತ್ತು ಇಚ್ಛಿಸಬೇಕು. ಅದೇ ಸಮಯದಲ್ಲಿ, ತಮ್ಮ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸಿ ಮಾಡಬೇಕಾದ ಕಾರ್ಯದ ಸೂಚನೆಯ ಸುಸ್ಪಷ್ಟ ಚಿಹ್ನೆ ಬರುವತನಕ ಕೊಂಚ ಕಾಯಬೇಕು.

ನನ್ನ ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/356 – ಶ್ರೀಮಾತೆ**

ಶ್ರೀ ಅರವಿಂದೋ ಅವರು ಹುಟ್ಟುವವರೆಗೆ, ಧರ್ಮಗಳು ಮತ್ತು ಆಧ್ಯಾತ್ಮಿಕತೆಗಳು ಯಾವಾಗಲೂ ಹಿಂದಿನ ಗ್ರಹಿಕೆಯ ಮೇಲೆ ಕೇಂದ್ರೀಕೃತವಾಗಿದ್ದವು, ಮತ್ತು ಅವು ಭೂಮಿಯ ಮೇಲಿನ ಜೀವನದ ನಿರಾಕರಣೆಯನ್ನು "ಗುರಿ" ಎಂದು ತೋರಿಸುತ್ತಿದ್ದವು. ಆದ್ದರಿಂದ, ನಿಮಗೆ ಎರಡು ಪರ್ಯಾಯಗಳ ನಡುವೆ ಆಯ್ಕೆ ಇದೆ: ಒಂದೊ

– ನೀವು ಸರಿಯಾಗಿ ವರ್ತಿಸದಿದ್ದರೆ ಈ ಜಗತ್ತಿನಲ್ಲಿ ಜೀವನವು ನರಕದಿಂದ ಹೆದರಿಸುವ ಅಲ್ಪ ಸುಖಗಳು ಮತ್ತು ನೋವುಗಳು, ಸಂತೋಷಗಳು ಮತ್ತು ಬಾಧೆಗಳೊಂದಿಗೆ ಸುತ್ತುತ್ತದೆ, ಅಥವಾ

– ಮತ್ತೊಂದು ಜಗತ್ತು, ಸ್ವರ್ಗ, ನಿರ್ವಾಣ, ಮೋಕ್ಷದಲ್ಲಿ ನುಣುಚಿಕೊಳ್ಳುವುದು........

ಈ ಎರಡರ ನಡುವೆ ಆಯ್ಕೆ ಮಾಡಲು ಹೆಚ್ಚೇನು ಇಲ್ಲ, ಅವೆರಡೂ ಅಷ್ಟೇ ಕೆಟ್ಟವು.

ಶ್ರೀ ಅರವಿಂದೋ ಅವರು ನಮಗೆ ಹೇಳಿದರು, ಭಾರತದ ದುರ್ಬಲತೆಗೆ ಮತ್ತು ಅವನತಿಗೆ ಹೊಣೆಯಾಗುವ ಇದು ಒಂದು ಪ್ರಮುಖ ಪ್ರಮಾದವಾಗಿತ್ತು. ಬೌದ್ಧ, ಜೈನ, ಮಾಯೆಯ ತತ್ತ್ವಗಳು ದೇಶದಿಂದ ಎಲ್ಲ ಶಕ್ತಿಯನ್ನು ಬತ್ತಿಸಲು ಸಾಕಾಗಿತ್ತು. ನಿಜ, ಭೌತ ವಸ್ತುವನ್ನು ಹೊರತುಪಡಿಸಿ ಬೇರೆ ಏನೋ ಒಂದು ಅಸ್ತಿತ್ವದಲ್ಲಿದೆ ಎಂದು ಇನ್ನೂ ಅರಿತಿರುವ ವಿಶ್ವದ ಏಕೈಕ ಸ್ಥಳ ಭಾರತವಾಗಿದೆ. ಇತರ ದೇಶಗಳು ಇದನ್ನು ಸಂಪೂರ್ಣವಾಗಿ ಮರೆತಿವೆ: ಯುರೊಪ್, ಅಮೆರಿಕ ಮತ್ತು ಇತರೆಡೆ –

ಅದಕ್ಕಾಗಿಯೇ, ಜಗತ್ತನ್ನು ಸಂರಕ್ಷಿಸಲು ಮತ್ತು ಜಗತ್ತಿಗೆ ತಲುಪಿಸಲು ಒಂದು ಸಂದೇಶವನ್ನು ಇನ್ನೂ ಹೊಂದಿದ್ದಾಳೆ. ಆದರೆ ಸದ್ಯದ ಸ್ಥಿತಿಯಲ್ಲಿ ಅವಳು ಅವ್ಯವಸ್ಥೆಯಲ್ಲಿ ಮುಗ್ಗರಿಸುತ್ತಿದ್ದಾಳೆ ಮತ್ತು ಕಳಂಕಿತಳಾಗುತ್ತಿದ್ದಾಳೆ.

ಸತ್ಯವು ಈ ಪ್ರಾಪಂಚಿಕ ಜೀವನದಿಂದ ಪಲಾಯನವಾಗುವುದರಲ್ಲಿ ಇಲ್ಲ. ಆದರೆ ಅದರಲ್ಲಿ ಇರುವುದರಿಂದ ಅದನ್ನು ಪರಿವರ್ತಿಸಲು, ಅದನ್ನು ದೈವೀಕರಿಸಲು ಇದೆ ಎಂದು ಶ್ರೀ ಅರವಿಂದರು ತೋರಿಸಿಕೊಟ್ಟಿದ್ದಾರೆ. ಈ ಪ್ರಪಂಚದಲ್ಲಿ ನಾವಿರುವುದರಿಂದ ಇಲ್ಲಿ, ಈ ಭೌತಿಕ ಜಗತ್ತಿನಲ್ಲಿ ದೇವರು ಪ್ರಕಟವಾಗುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/210–11**

ಭಾರತವು, ಆಧುನಿಕ ಮನುಕುಲದ ಎಲ್ಲ ತೊಂದರೆಗಳ ಸಾಂಕೇತಿಕ ಪ್ರತಿನಿಧಿಯಾಗಿದೆ.

ಭಾರತವು ತನ್ನ ಪುನರುತ್ಥಾನದ ಭೂಮಿಯಾಗಲಿದೆ – ಉನ್ನತ ಮತ್ತು ಸತ್ಯದ ಜೀವನಕ್ಕೆ ಪುನರುತ್ಥಾನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/368 – ಶ್ರೀಮಾತೆ**

# ಭಾರತಕ್ಕೆ ಮಂತ್ರಗಳು ಮತ್ತು ಸೂತ್ರಗಳು

**– ಅನು: ನಾಗಜ್ಯೋತಿ, ಮಾನ್ವಿ**

## ಭಾರತಕ್ಕೆ ಒಂದು ಮಂತ್ರ

(ಈ ಕೆಳಗಿನ ಸಂದೇಶವನ್ನು ಆಶ್ರಮದಲ್ಲಿ ಎಲ್ಲರಿಗೂ ಈ ಪ್ರಸ್ತಾವನೆಯೊಂದಿಗೆ ವಿತರಿಸಲಾಯಿತು: "ಪ್ರಸ್ತುತ ಬಿಕ್ಕಟ್ಟಿನ ಬಗ್ಗೆ ದೇಶದ ಎಲ್ಲ ಜನರಿಗೆ ಶ್ರೀಮಾತೆಯವರು ಕೊಟ್ಟ ಮಂತ್ರ")

"ಸರ್ವೋಚ್ಚ ಒಡೆಯನೇ ಶಾಶ್ವತ ಸತ್ಯ
ಕೇವಲ 'ನಿಮಗೆ' ಮಾತ್ರ ವಿಧೇಯರಾಗಿರಿ
ಹಾಗೂ 'ಸತ್ಯದ' ಅನುಸಾರವಾಗಿ ಬದುಕೋಣ"

## ಭಾರತ ಎಂದರೇನು?

ಭಾರತವೆಂದರೆ ಈ ಭೂಮಿಯಲ್ಲ, ನದಿ ಮತ್ತು ಬೆಟ್ಟಗಳಿಂದ ಕೂಡಿದ ಪ್ರದೇಶವಲ್ಲ, ಈ ದೇಶದ ನಿವಾಸಿಗಳ ಸಾಮೂಹಿಕ ಹೆಸರಿಗೆ ಕೂಡ ಭಾರತವೆನ್ನಲಾಗದು. ಭಾರತವು ಒಂದು ಜೀವಂತ ಅಸ್ತಿತ್ವ. ಎಷ್ಟು ಜೀವಂತವೆಂದರೆ ಶಿವನಷ್ಟೇ. ಯಾವ ರೀತಿ ಶಿವನು ಒಬ್ಬ ದೇವನೋ ಅದೇ ರೀತಿ ಭಾರತ ಮಾತೆಯೂ ಒಬ್ಬ ದೇವತೆ. ಆಕೆ ಇಚ್ಛೆಪಟ್ಟರೆ, ಮಾನವ ರೂಪದಲ್ಲಿಯೂ ಪ್ರಕಟವಾಗಬಲ್ಲಳು.

## ಭಾರತ ಮಾತೆಯು ಯಾರಿಗೆ ತನ್ನ ರಹಸ್ಯವನ್ನು ತೋರಿಸುತ್ತಾಳೆ?

> *"ಆಹಾ! ಭಾರತವು ಧರ್ಮಗಳ ತೊಟ್ಟಿಲು ಮತ್ತು ಬಹಳಷ್ಟು ದೇವತೆಗಳು ಆಕೆಯ ಹಣೆ ಬರಹದ ಒಡೆಯರು, ಅವರಲ್ಲಿ ಯಾರು ಈ ನಗರವನ್ನು ಮತ್ತೆ ಬೆಳಕಿಗೆ ತರುವ ಪವಾಡವನ್ನು ಸಾಧಿಸುತ್ತಾರೆ?"* – ಎ. ಚೋಮೆಲ್ (1928ರ ಪಾಂಡಿಚೇರಿಯ ಮೇಲಿನ ಲೇಖನ)

ತಪ್ಪು ತೋರಿಕೆಗಳಿಂದ ಕುರುಡಾಗಿ, ನಿಂದನೆಗಳಿಂದ ಮೋಸ ಹೋಗಿ, ಭಯ ಮತ್ತು ಪೂರ್ವ ಗ್ರಹ ಪೀಡಿತಗಳಿಂದ ಬಂಧಿತನಾಗಿ, ಯಾವ ದೇವರ ಹಸ್ತಕ್ಷೇಪಕ್ಕಾಗಿ ದೈನ್ಯದಿಂದ ಕರೆಯುತ್ತಿದ್ದನೋ, ಆ ದೇವರೇ ಪಕ್ಕದಲ್ಲಿದ್ದರೂ ಕಾಣದಾದ; ಯಾವ ಶಕ್ತಿಗಳಿಂದ ಈ ಪವಾಡಗಳನ್ನು ಬಯಸುತ್ತಿದ್ದನೋ ಅವುಗಳ ಹತ್ತಿರ ಹಾದುಹೋದರೂ

ಅವನ್ನು ಗುರುತಿಸುವ ಸಂಕಲ್ಪವನ್ನೇ ಕಳೆದುಕೊಂಡ. ಹೀಗಾಗಿ ತನ್ನ ಜೀವನದ ಅತ್ಯುನ್ನತ ಅವಕಾಶವನ್ನು ಕಳೆದುಕೊಂಡಿದ್ದಾನೆ – ಯಾವ ರಹಸ್ಯ ಮತ್ತು ಅದ್ಭುತದ ಜೊತೆಗೆ ಸಂಪರ್ಕ ಹೊಂದುವ ವಿಶಿಷ್ಟ ಅವಕಾಶವನ್ನು ಆತನ ಮೆದುಳು ಕಳೆದುಕೊಂಡಿತ್ತೋ ಮತ್ತು ಆತನ ಹೃದಯದಲ್ಲಿ ಅಸ್ಪಷ್ಟ ಅಭೀಪ್ಸೆಯಿತ್ತೋ ಅದೆಲ್ಲವನ್ನೂ ಕಳೆದುಕೊಂಡಿದ್ದಾನೆ.

ಎಲ್ಲಾ ಸಮಯದಲ್ಲಿಯೂ ಅಭೀಪ್ಸಕನು ಕೃಪೆಯನ್ನು ಪಡೆಯುವ ಮುನ್ನ ಹಲವು ಪರೀಕ್ಷೆಗಳ ಮೂಲಕ ಹಾದುಹೋಗಬೇಕಾಗುತ್ತದೆ. ಪ್ರಾಚೀನ ಶಾಲೆಗಳಲ್ಲಿ ಈ ಪರೀಕ್ಷೆಗಳು ಕೃತಕವಾಗಿದ್ದವು. ಹಾಗಾಗಿ ಅವು ಮೌಲ್ಯಗಳ ಶ್ರೇಷ್ಠತೆಯನ್ನು ಕಳೆದುಕೊಂಡವು. ಆದರೆ ಈಗ ಹಾಗಿಲ್ಲ. ಈಗ ಪರೀಕ್ಷೆಗಳು ದಿನನಿತ್ಯದ ಸಾಮಾನ್ಯ ಸಂದರ್ಭಗಳ ಹಿಂದೆ ಅಡಗಿ ಕೂತಿರುವುದರಿಂದ ಅವು ಮುಗ್ಧತೆಯಿಂದ ಕೂಡಿದ ಕಾಕತಾಳೀಯ ಹಾಗೂ ಅದೃಷ್ಟದ ರೂಪವನ್ನು ಧರಿಸಿದಾಗ, ಪರೀಕ್ಷೆಗಳು ಮತ್ತಷ್ಟು ಕಷ್ಟಕರ ಮತ್ತು ಅಪಾಯಕಾರಿಯಾಗಿರುತ್ತವೆ.

ಇಂದು ಯಾರು ಜನಾಂಗದಿಂದ ಹಾಗೂ ಶಿಕ್ಷಣದಿಂದ ಬಂದ ಮಾನಸಿಕ ಆದ್ಯತೆ ಮತ್ತು ಪೂರ್ವ ಗ್ರಹಗಳಿಂದ ಮುಕ್ತರಾಗಿರುತ್ತಾರೋ ಅಂಥವರಿಗೆ ಮಾತ್ರ ಭಾರತವು ತನ್ನ ರಹಸ್ಯಮಯ ಸಂಪತ್ತನ್ನು ತೆರೆದಿಡುತ್ತದೆ. ಉಳಿದವರು ನಿರಾಸೆಯಿಂದ ನಿರ್ಗಮಿಸಿ, ಹುಡುಕಬೇಕಾದುದನ್ನೇ ಹುಡುಕದೇ ಸೋತಿದ್ದಾರೆ: ಏಕೆಂದರೆ ಅವರು ತಪ್ಪು ದಾರಿಯಲ್ಲಿ ಹುಡುಕಿದ್ದಾರೆ ಮತ್ತು ದೈವೀ ಅವಿಷ್ಕಾರಕ್ಕೆ ಕೊಡಬೇಕಾದ ಬೆಲೆ ತೆರಲು ನಿರಾಕರಿಸಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/371–73**

### ಎಲ್ಲಾ ದೇಶಗಳು ಸಮಾನ ಹಾಗೂ ಮೂಲತಃ "ಒಂದೇ"

ಅವುಗಳಲ್ಲಿ ಪ್ರತಿಯೊಂದು ಏಕಮಾತ್ರ ಸರ್ವೋಚ್ಚನ ಅಂಶವನ್ನು ಪ್ರತಿನಿಧಿಸುತ್ತವೆ. ಈ ಭೌತಿಕ ಸ್ಥರದಲ್ಲಿ ಎಲ್ಲಾ ದೇಶಗಳಿಗೆ ತಮ್ಮನ್ನು ತಾವು ಸ್ವತಂತ್ರ್ಯವಾಗಿ ವ್ಯಕ್ತಪಡಿಸುವ ಸಮಾನ ಹಕ್ಕಿದೆ.

ಆಧ್ಯಾತ್ಮಿಕ ದೃಷ್ಟಿಕೋನದಿಂದ ಯಾವುದೇ ದೇಶದ ಪ್ರಾಮುಖ್ಯತೆಯು ಅದರ ಗಾತ್ರ ಅಥವಾ ಅದರ ಶಕ್ತಿ ಅಥವಾ ಬೇರೊಂದು ದೇಶದ ಮೇಲಿರುವ ಅದರ ಅಧಿಕಾರದ ಮೇಲೆ ಅವಲಂಬಿತವಾಗಿರುವುದಿಲ್ಲ. ಆದರೆ ಅದು 'ಸತ್ಯ'ಕ್ಕೆ ಸ್ಪಂದಿಸುವ

ಮತ್ತು ‘ಸತ್ಯ’ವನ್ನು ಎಷ್ಟರ ಮಟ್ಟಿಗೆ ಪ್ರಕಟಪಡಿಸುವ ಸಾಮರ್ಥ್ಯ ಹೊಂದಿದೆ ಎಂಬುದರ ಮೇಲೆ ಅವಲಂಬಿತವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/383**

ಸೌಂದರ್ಯವನ್ನು ತಿರಸ್ಕರಿಸಿ ಎಂಬ ಬೋಧನೆಯೇ ಅಸುರನ ಅತ್ಯುನ್ನತ ಶಕ್ತಿಶಾಲಿ ಅಸ್ತ್ರದ ಕಾರ್ಯವಾಗಿದೆ. ಇದೇ ಭಾರತವು ಹಾಳಾಗಲು ಕಾರಣ. ದೈವತ್ವವು ಅಂತರಾತ್ಮದಲ್ಲಿ ಪ್ರೀತಿ ಮಾಗಿ, ಮನದಲ್ಲಿ ಜ್ಞಾನವಾಗಿ, ಪ್ರಾಣದಲ್ಲಿ ಶಕ್ತಿಯಾಗಿ ಹಾಗೂ ಭೌತಿಕದಲ್ಲಿ ಸೌಂದರ್ಯವಾಗಿ ಪ್ರಕಟಗೊಳ್ಳುತ್ತದೆ.

ನೀವು ಸೌಂದರ್ಯವನ್ನು ತಿರಸ್ಕರಿಸಿದರೆ, ದೈವತ್ವಕ್ಕೆ ಈ ಸಾಧ್ಯತೆಯನ್ನು ಭೌತಿಕದಲ್ಲಿ ಪ್ರಕಟ ಮಾಡಲು ವಂಚಿಸಿದಂತೆ. ಆಗ ನೀವು ಆ ಭಾಗವನ್ನು ಅಸುರನ ಕೈಗೆ ಕೊಟ್ಟಂತಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/372–73 – ಶ್ರೀಮಾತೆ**

## ಭಾರತದ ಬಗ್ಗೆ ಸಂದೇಶಗಳು

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

**25 ಸೆಪ್ಟೆಂಬರ್ 1967**

ಪುದುಚೆರಿಯ ಆಕಾಶವಾಣಿ ಕೇಂದ್ರದ ಪ್ರಾರಂಭೋತ್ಸವಕ್ಕೆ ಸಂದೇಶ,

“ಓ ಭಾರತ, ಆಧ್ಯಾತ್ಮಿಕ ಜ್ಞಾನ ಮತ್ತು ಪ್ರಕಾಶದ ಭೂಮಿಯೇ! ಪ್ರಪಂಚದಲ್ಲಿ ನಿನ್ನ ನೈಜ ಧ್ಯೇಯಕ್ಕೆ ಜಾಗೃತವಾಗು, ಸಾಮರಸ್ಯ ಮತ್ತು ಒಗ್ಗೂಡುವಿಕೆಯ ಹಾದಿಯನ್ನು ತೋರ್ಪಡಿಸು.”

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/367**

**ಭಾರತಕ್ಕೆ ಸಂದೇಶಗಳು**

ನೀನು ಪ್ರಾಮಾಣಿಕತೆ, ಧೈರ್ಯ, ಸತ್ಯಸಂಧತೆ ಮತ್ತು ಸಹಿಷ್ಣುತೆಯನ್ನು ಹೊಂದಿರುವದರ ಮೂಲಕ ನಿನ್ನ ದೇಶಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಬಹುದು. ಪ್ರಪಂಚದಲ್ಲಿ ಅದನ್ನು ಒಗ್ಗೂಡಿಸಿ ಶ್ರೇಷ್ಠವಾದುದಾಗಿ ಮಾಡಬಹುದು.

*(ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪುನರುಜ್ಜೀವನ ಸಮಾಜಕ್ಕೆ ಸಂದೇಶ)*

ಪ್ರಪಂಚಕ್ಕೆ ಶುಭವಾಗಲು ಭಾರತವನ್ನು ರಕ್ಷಿಸಬೇಕು. ಏಕೆಂದರೆ ಒಂದು ನವ ಪ್ರಪಂಚ ವ್ಯವಸ್ಥೆ ಮತ್ತು ಶಾಂತಿಯ ಕಡೆ ಈ ಜಗತ್ತನ್ನು ಭಾರತ ಮಾತ್ರ ಮುನ್ನಡೆಸಲು ಸಾಧ್ಯ.

*

ಭಾರತಕ್ಕೆ ದೈವೀ ಶಕ್ತಿ ಮಾತ್ರ ನೆರವಾಗಬಲ್ಲದು. ದೇಶದಲ್ಲಿ ಒಗ್ಗಟ್ಟು ಮತ್ತು ಶ್ರದ್ಧೆಯನ್ನು ನಿರ್ಮಿಸಲು ನಿನಗೆ ಸಾಧ್ಯವಾದರೆ ಅದು ಯಾವುದೇ ಮಾನವ ನಿರ್ಮಿತ ಶಕ್ತಿಗಿಂತ ಹೆಚ್ಚು ಶಕ್ತಿಶಾಲಿ.

ಒಂದು ಬಲಿಷ್ಠ ಗುಂಪಿನ ರಚನೆಯಾಗಬೇಕು.

*

ಭಾರತ ಮತ್ತು ಜಗತ್ತನ್ನು ರಕ್ಷಿಸಲು ಆಧ್ಯಾತ್ಮಿಕ ಜ್ಞಾನದಿಂದೊಡಗೂಡಿದ ಒಗ್ಗಟ್ಟಿನ ಸಂಕಲ್ಪವನ್ನು ಆ ಗುಂಪು ಹೊಂದಿರಬೇಕು. ಪ್ರಪಂಚದಲ್ಲಿ ಸತ್ಯವನ್ನು ತರಲು ಸಾಧ್ಯವಾಗುವದು ಭಾರತಕ್ಕೆ ಮಾತ್ರ. ದೈವೀ ಸಂಕಲ್ಪ ಮತ್ತು ಸಾಮರ್ಥ್ಯದಿಂದ ಮಾತ್ರ ಭಾರತವು ಪ್ರಪಂಚಕ್ಕೆ ಆಕೆಯ ಸಂದೇಶವನ್ನು ಬೋಧಿಸಬಹುದು. ಪಾಶ್ಚಾತ್ಯರ ಪ್ರಾಪಂಚಿಕತೆಯನ್ನು ಅನುಸರಿಸುವದರಿಂದ ಅಲ್ಲ. ದೈವೀ ಸಂಕಲ್ಪವನ್ನು ಅನುಷ್ಠಾನಕ್ಕೆ ತರುವದರಿಂದ ಭಾರತವು ಆಧ್ಯಾತ್ಮಿಕ ಪರ್ವತದ ಮೇಲೆ ಪ್ರಕಾಶಿಸುವದು, ಪ್ರಪಂಚದ ಒಗ್ಗಟ್ಟನ್ನು ವ್ಯವಸ್ಥಿತಗೊಳಿಸುವದು ಮತ್ತು ಸತ್ಯದ ಹಾದಿಯನ್ನು ತೋರಿಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/367**

ಪ್ರಪಂಚದ ಆಧ್ಯಾತ್ಮಿಕ ನಾಯಕ ಭಾರತವೇ ಆಗಬೇಕು. ಆಂತರ್ಯದಲ್ಲಿ ಆಕೆಗೆ ಆ ಸಾಮರ್ಥ್ಯವಿದೆ. ಆದರೆ ಹೊರಗೆ .... ಈ ಕ್ಷಣದಲ್ಲಿ, ಪ್ರಪಂಚದ ಆಧ್ಯಾತ್ಮಿಕ ನಾಯಕನಾಗಲು ಆಕೆಯು ಇನ್ನೂ ಹೆಚ್ಚು ಶ್ರಮಿಸಬೇಕಾಗಿದೆ.

ಈಗ ಒಂದು ಅದ್ಭುತವಾದ ಅವಕಾಶವು ಒದಗಿ ಬಂದಿದೆ. ಆದರೆ .....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/352–53**

ಚೇತನದ ಜ್ಞಾನವನ್ನು ಭಾರತವು ಹೊಂದಿದೆ ಅಥವಾ ಹೊಂದಿತ್ತು. ಆದರೆ ಆಕೆಯು ಭೌತಿಕತೆಯನ್ನು ಉಪೇಕ್ಷಿಸಿದಳು ಮತ್ತು ಅದರಿಂದ ನೋವನ್ನು ಸಹ ಅನುಭವಿಸಿದಳು.

ಭೌತಿಕತೆಯ ಜ್ಞಾನವನ್ನು ಪಾಶ್ಚಾತ್ಯರು ಹೊಂದಿರುವರು. ಆದರೆ ಆಧ್ಯಾತ್ಮವನ್ನು ತಿರಸ್ಕರಿಸಿದರು. ಇದರಿಂದ ಅವರು ವ್ಯಥೆಪಡಬೇಕಾಗುವದು.

ಕೆಲವು ವ್ಯತ್ಯಾಸಗಳೊಂದಿಗಿನ ಒಂದು ಸಮಗ್ರ ಶಿಕ್ಷಣವನ್ನು ಪ್ರಪಂಚದ ಎಲ್ಲಾ ರಾಷ್ಟ್ರಗಳು ಅಂಗೀಕರಿಸಬೇಕು. ಇದರಿಂದ ಪೂರ್ತಿಯಾಗಿ ಅಭಿವೃದ್ಧಿ ಹೊಂದಿದ ಮತ್ತು ಉಪಯೋಗಕರವಾದ ಭೌತಿಕತೆಯ ಮೇಲೆ ನ್ಯಾಯಬದ್ಧವಾದ ಅಧಿಕಾರವನ್ನು ಚೇತನವು ಪುನಃಸ್ಥಾಪಿಸಲು ಸಾಧ್ಯವಾಗುವದು.

ಸಂಕ್ಷಿಪ್ತವಾಗಿ ನಾನು ಹೇಳಬೇಕೆಂದಿದ್ದುದು ಇಷ್ಟು ಮಾತ್ರ.

ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/361**

ಭಾರತವು ತನ್ನ ಆತ್ಮವನ್ನು ಪುನಃ ಕಂಡುಕೊಂಡು ಅಭಿವ್ಯಕ್ತಗೊಳಿಸಬೇಕು.

*

ನಿಮ್ಮ ಸಂದೇಶಗಳೊಂದರಲ್ಲಿ ಹೀಗೆ ಹೇಳಿರುವಿರಿ

*"ಭಾರತದ ಪ್ರಪಥಮ ಸಮಸ್ಯೆ ಆಕೆಯ ಆತ್ಮವನ್ನು ಪುನಃ ದರ್ಶಿಸಿ ಪ್ರಕಟಪಡಿಸುವದು."*

*ಭಾರತದ ಆತ್ಮವನ್ನು ಹೇಗೆ ಪುನಃ ದರ್ಶಿಸುವದು?*

ನಿನ್ನ ಚೈತ್ಯ ಪುರುಷನ ಬಗ್ಗೆ ಜಾಗೃತನಾಗು. ನಿನ್ನ ಚೈತ್ಯ ಪುರುಷನು ಭಾರತದ ಆತ್ಮದ ಬಗ್ಗೆ ತೀವ್ರವಾದ ಆಸಕ್ತಿಯನ್ನು ತೋರಿಸಲು ಮತ್ತು ಅಭೀಪ್ಸೆಯನ್ನು ಹೊಂದಲಿ. ಈ ಕಾರ್ಯವು ಸೇವಾ ಮನೋಭಾವದಿಂದ ನೆರವೇರಲಿ. ನೀನು ಪ್ರಾಮಾಣಿಕನಾಗಿದ್ದರೆ ಸಫಲನಾಗುವೆ.

*

ಚೈತ್ಯ ನಿಯಮಗಳು ಭಾರತ ದೇಶದಲ್ಲಿ ಅಧಿಕಾರ ನಡೆಸುವ ಸಾಧ್ಯತೆ ಇದೆ ಮತ್ತು ನಡೆಸಬೇಕು. ಈಗ ಅದು ನೆರವೇರುವ ಸಕಾಲ ಒದಗಿ ಬಂದಿದೆ. ಪರಕೀಯ ರಾಷ್ಟ್ರವು ಪ್ರಭಾವ ಬೀರಿ ಆಡಳಿತ ನಡೆಸಿದ್ದರಿಂದ ಭಾರತದ ಪ್ರಜ್ಞೆಯು ದುರದೃಷ್ಟವಶಾತ್ ಕುಂಠಿತಗೊಂಡಿದೆ. ಆದುದರಿಂದ ಇದು ಮಾತ್ರವೇ ಭಾರತಕ್ಕೆ ಸಂರಕ್ಷಣಾ ಮಾರ್ಗವೆಂದು ಹೇಳಬಹುದು. ಆದರೆ ಏನೇ ಆದರೂ ಭಾರತವು ಒಂದು ಅನನ್ಯ ಆಧ್ಯಾತ್ಮಿಕ ಸ್ವತ್ತನ್ನು ಹೊಂದಿದೆ.

ಆಶೀರ್ವಾದಗಳು.

*(ಪುದುಚೆರಿ ಆಕಾಶವಾಣಿಯಿಂದ ಪ್ರಸಾರವಾಗಲು ನೀಡಿದ ಸಂದೇಶ)*

ನಾವು ಸತ್ಯ ಮತ್ತು ಪ್ರಕಾಶದ ದೂತರಾಗಲು ಬಯಸುತ್ತಿದ್ದೇವೆ. ಒಮ್ಮೆಲೇ ಪ್ರಪಂಚದಲ್ಲಿ ಘೋಷಿತವಾಗಬೇಕೆಂದು ಸಾಮರಸ್ಯದ ಭವಿಷ್ಯವು ತನ್ನನ್ನು ತಾನು ಅರ್ಪಿಸಿಕೊಳ್ಳುತ್ತದೆ.

ಭಯದ ಮೂಲಕ ಆಡಳಿತ ನಡೆಸುವ ಹಳೆಯ ಅಭ್ಯಾಸವನ್ನು ಕಿತ್ತೊಗೆದು ಪ್ರೇಮದಿಂದ ಆಡಳಿತ ನಡೆಸುವ ಕಾಲವು ಈಗ ಕೂಡಿ ಬಂದಿದೆ.

*

*(ಶ್ರೀಮಾತೆಯವರ ಜನ್ಮದಿನ 21 ಫೆಬ್ರವರಿ 1971 ರಂದು,*
*ಆಶಾಶವಾಣಿ ಪುದುಚೆರಿ ಪ್ರಸಾರ ಮಾಡಲು ನೀಡಿದ ಸಂದೇಶ)*

ಆರೋಹಣದ ಚಲನೆಯಾಗಿದೆ ನೈಜ ಸ್ವಾತಂತ್ರ್ಯ. ಅದು ನಿಮ್ನ ಸ್ವಭಾವಗಳಿಗೆ ತಲೆ ಬಾಗುವದಿಲ್ಲ.

ನೈಜ ಸ್ವಾತಂತ್ರ್ಯವು ಒಂದು ದೈವೀ ಪ್ರಕಟಣೆಯಾಗಿದೆ.

ಭಾರತಕ್ಕೆ ನಾವು ಒಂದು ನೈಜ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತೇವೆ. ಏಕೆಂದರೆ ಅದರಿಂದ ಪ್ರಪಂಚಕ್ಕೆ ಆಕೆಯು ಮಾನವ ಜನಾಂಗವು ಮುಂದೆ ಏನಾಗಬೇಕೆಂಬುದರ ಒಂದು ಬಹಿರಂಗ ಪ್ರದರ್ಶನವಾಗುವಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/369–70**

ಭಾರತವು ಕಾದಾಡುತ್ತಿರುವದು ಸತ್ಯಕ್ಕಾಗಿ ಮತ್ತು ಸತ್ಯವು ವಿಜಯವನ್ನು ಪಡೆಯಲೆಂದು. ಭಾರತ ಮತ್ತು ಪಾಕಿಸ್ತಾನಗಳು ಮತ್ತೊಮ್ಮೆ ಜೊತೆಗೂಡುವವರೆಗೂ ಭಾರತವು ಕಾದಾಡುತ್ತಲೇ ಇರಬೇಕು. ಏಕೆಂದರೆ ಅವುಗಳ ಸತ್ತೆಯ ಸತ್ಯವು ಅದೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/262**

*ಶ್ರೀಮಾತೆ, ಭಾರತದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿನ ಅಸಂಬದ್ಧತೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ದಯವಿಟ್ಟು ಭಾರತೀಯರಿಂದ ಭಾರತವನ್ನು ಕಾಪಾಡು ಮತ್ತು ನಿನ್ನ ಅನುಗ್ರಹಕ್ಕೆ ನಾವು ಪಾತ್ರರಾಗುವಂತೆ ಮಾಡು.*

ಅದ್ಭುತ ಮತ್ತು ಅತ್ಯಂತ ಬಲಶಾಲಿಯಾದುದು ದೈವೀ ಅನುಗ್ರಹ.

ಮತ್ತು ಭಗವಂತನ ಕಾರ್ಯ ವಿಧಾನಗಳು ಮಹದಾನಂದಭರಿತ ವಿನೋದಪ್ರಿಯತೆಯಿಂದ ತುಂಬಿವೆ.

ಪ್ರೀತಿಪೂರ್ವಕ ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/278**

ಯೋಗ ಜ್ಞಾನದ ರಕ್ಷಕನಾಗಿದೆ ಭಾರತ. ಆದರೆ ಭೌತಿಕತೆಯಿಂದ ಇದು ಆಚ್ಛಾದಿತವಾಗಿತ್ತು. ಶ್ರೀ ಅರೊವಿಂದೋ ಅದನ್ನು ಜಾಗೃತಗೊಳಿಸಿರುವರು. ಈಗ ಅದನ್ನು ಹರಡಬೇಕಾಗಿದೆ ಅಷ್ಟೇ.

*

*(ಬಾಂಗ್ಲಾ ದೇಶದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ,*
*ಶ್ರೀಮಾತೆಯವರು ಕೆಳಗಿನ ನಾಲ್ಕು ವಾಕ್ಯಗಳನ್ನು ಘೋಷಿಸಿದರು)*

ಪರಿಸ್ಥಿತಿಯು ಗಂಭೀರವಾಗಿದೆ. ಒಂದು ಬಲಿಷ್ಠ ಮತ್ತು ಜ್ಞಾನಭರಿತ ಕ್ರಿಯೆ ಮಾತ್ರ ದೇಶವನ್ನು ಅದರಿಂದ ಹೊರಗೆ ತರಲು ಸಾಧ್ಯ.

ಆಶೀರ್ವಾದಗಳು.

*("ಈಗಿನ ಬಿಕ್ಕಟ್ಟಿಗೆ ದೇಶದ ಎಲ್ಲಾ ಜನರಿಗೆ ಶ್ರೀಮಾತೆಯವರು ನೀಡಿರುವ ಒಂದು ಮಂತ್ರ". ಈ ಮುನ್ನುಡಿಯೊಂದಿಗೆ ಕೆಳಗಿನ ಸಂದೇಶವನ್ನು ಆಶ್ರಮದಲ್ಲಿ ಹಂಚಲಾಯಿತು.)*

ಪರಮೋತ್ತಮ ಭಗವಂತನೇ, ನಿರಂತರವಾದ ಸತ್ಯವೇ
ನಾವು ನಿನ್ನ ಆಜ್ಞೆಯನ್ನು ಮಾತ್ರ ಪಾಲಿಸುವಂತಾಗಲಿ
ಮತ್ತು ಸತ್ಯಕ್ಕೆ ಅನುಗುಣವಾಗಿ ಜೀವಿಸಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/371–72 – ಶ್ರೀಮಾತೆ**

ಸಮಗ್ರವಾಗಿ ದೈವೀ ಜೀವನದ ದೂತಳಾದಾಗ ಮಾತ್ರ ಭಾರತವು ಜಗತ್ತಿನಲ್ಲಿ ತನ್ನ ನೈಜ ಸ್ಥಾನವನ್ನು ಪಡೆಯುವದು.

*(ಆಶ್ರಮದಲ್ಲಿ ಭೇಟಿ ಮಾಡಿದ ಭಾರತ ಸರ್ಕಾರದ ಒಂದು ಶಿಕ್ಷಣ ಆಯೋಗಕ್ಕೆ ನೀಡಿದ ಸಂದೇಶ)*

ಭಾರತ ಸರ್ಕಾರವು ಒಂದು ವಿಷಯದ ಬಗ್ಗೆ ಪರ್ಯಾಲೋಚಿಸಬೇಕು. ಅದೇನೆಂದರೆ ಅದು ಹಿಂದಿನದಕ್ಕೆ ಬಿಡದೆ ಅಂಟಿಕೊಳ್ಳಬಯಸುತ್ತದೆಯೇ ಅಥವಾ ಭವಿಷ್ಯತ್ತಿಗಾಗಿ ಜೀವಿಸಬಯಸುತ್ತದೆಯೇ?

*(ಪುದುಚೆರಿ ಆಕಾಶವಾಣಿಯ ಪ್ರಾರಂಭೋತ್ಸವದ ದಿನ ನೀಡಿದ ಸಂದೇಶ)*

ಓ ಭಾರತ, ಪ್ರಕಾಶ ಮತ್ತು ಆಧ್ಯಾತ್ಮಿಕ ಜ್ಞಾನದ ಭೂಮಿಯೇ! ಪ್ರಪಂಚದಲ್ಲಿ ನಿನ್ನ ನೈಜ ಧ್ಯೇಯಕ್ಕೆ ಜಾಗೃತಳಾಗು, ಸಮಗ್ರತೆ ಮತ್ತು ಸಾಮರಸ್ಯದ ಹಾದಿಯನ್ನು ತೋರಿಸು.

ಭಾರತೀಯರಿಂದ ಭಾರತವನ್ನು ರಕ್ಷಿಸೆಂದು ನಾನು ನಿಮ್ಮನ್ನು ಪ್ರಾರ್ಥಿಸುತ್ತಿರುವೆ.

ಹೌದು. ಅದು ಈಗ ಅವಶ್ಯಕವಾಗಿದೆ.

ಭಾರತವು ಈಗ ದುಃಖದಲ್ಲಿ ಮುಳುಗಿದ್ದರೂ ಆಕೆಯ ಭವಿಷ್ಯತ್ಕಾಲವು ಪ್ರಕಾಶಮಾನವಾಗಿದೆ.

ಜೀವನವನ್ನು ತ್ಯಾಗ ಮಾಡುವುದು ನೈಜ ಆಧ್ಯಾತ್ಮಿಕತೆಯಲ್ಲ, ಆದರೆ ದೈವೀ ಪರಿಪೂರ್ಣತೆಯಿಂದ ಜೀವನವನ್ನು ಪರಿಪೂರ್ಣ ಮಾಡುವದಾಗಿದೆ.

ಈಗ ಜಗತ್ತಿಗೆ ಭಾರತವು ಅದನ್ನೇ ತೋರ್ಪಡಿಸಬೇಕಾಗಿದೆ. (26 ಜನವರಿ 1963)

ಈಗಿನ ತುರ್ತು ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾದರೂ ಏನು?

ನಿನ್ನ ಚಿಕ್ಕ ಅಹಂಕಾರಭರಿತ ವ್ಯಕ್ತಿತ್ವವನ್ನು ದಾಟಿ ಮುನ್ನಡೆದು ನಮ್ಮ ಭಾರತ ಮಾತೆಯ ಅರ್ಹ ಪುತ್ರನಾಗು. ಸತ್ಯಸಂಧತೆ ಮತ್ತು ಧರ್ಮಶೀಲತೆಯೊಂದಿಗೆ ನಿನ್ನ ಕರ್ತವ್ಯಗಳನ್ನು ನೆರವೇರಿಸು. ಯಾವಾಗಲೂ ದೈವೀ ಅನುಗ್ರಹದಲ್ಲಿ ನಿರಂತರವಾದ ನಂಬಿಕೆಯನ್ನು ಹೊಂದಿ ದಿಟ್ಟತನದೊಂದಿಗೆ ಉತ್ಸಾಹಪೂರ್ಣನಾಗಿರು.

ನಮ್ಮ ಗುರಿ ಭಾರತಕ್ಕೆ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಲ್ಲ ಪ್ರಪಂಚದ ಗುರುವಾಗುವದೇ ಭಾರತದ ನೈಜ ನಿಯತಿ ಆದರೆ ಇಡೀ ಪ್ರಪಂಚದ ಶಿಕ್ಷಣವಾಗಿದೆ.

ಭಾರತವು ಚೇತನದ ಜ್ಞಾನವನ್ನು ಹೊಂದಿದೆ ಅಥವಾ ಹೊಂದಿತ್ತು. ಆದರೆ ಆಕೆಯು ಭೌತಿಕತೆಯನ್ನು ಉಪೇಕ್ಷಿಸಿದಳು ಮತ್ತು ಅದರಿಂದ ತೊಂದರೆಗೆ ಈಡಾದಳು.

ಪಾಶ್ಚಾತ್ಯರು ಭೌತಿಕತೆಯ ಜ್ಞಾನವನ್ನು ಹೊಂದಿರುವರು. ಆದರೆ ಚೇತನವನ್ನು ತಿರಸ್ಕರಿಸಿದರು. ಅದರಿಂದ ಅವರು ಅತಿಯಾದ ದುಃಖವನ್ನು ಅನುಭವಿಸಬೇಕಾಗಿದೆ.

ಪ್ರಪಂಚದ ಎಲ್ಲಾ ರಾಷ್ಟ್ರಗಳು ಕೆಲವು ವ್ಯತ್ಯಾಸಗಳೊಂದಿಗಿನ ಸಮಗ್ರ ಶಿಕ್ಷಣವನ್ನು ಅಂಗೀಕರಿಸಬೇಕು. ಇದರಿಂದ ಚೇತನವು ಪೂರ್ತಿಯಾಗಿ ಅಭಿವೃದ್ಧಿ ಹೊಂದಿದ ಮತ್ತು ಉಪಯೋಗಕರವಾದ ಭೌತಿಕತೆಯ ಮೇಲೆ ನ್ಯಾಯ ಸಮ್ಮತವಾದ ಅಧಿಕಾರವನ್ನು ಪಡೆಯುವಂತೆ ಆಗಬೇಕು.

ಭಾರತವು ಸತ್ಯಕ್ಕೆ ಮತ್ತು ಸತ್ಯದ ಜಯಕ್ಕಾಗಿಯೇ ಯುದ್ಧ ಮಾಡುತ್ತಿರುವದು ಮತ್ತು ಭಾರತ ಮತ್ತು ಪಾಕಿಸ್ತಾನಗಳು ಪುನಃ ಒಂದಾಗುವವರೆಗೂ ಈ ಯುದ್ಧವು ಮುಂದುವರೆಯಬೇಕು. ಏಕೆಂದರೆ ಅದೇ ಅವುಗಳ ಸತ್ತೆಯ ನೈಜತೆಯಾಗಿದೆ.

ಭಾರತದ ಭವಿಷ್ಯವು ಬಹಳ ಸ್ಪಷ್ಟವಾಗಿದೆ. ಪ್ರಪಂಚದ ಗುರುವು ಭಾರತ. ಪ್ರಪಂಚದ ಭವಿಷ್ಯದ ರಚನೆಯು ಭಾರತವನ್ನು ಅವಲಂಬಿಸಿದೆ.

ಭಾರತವೇ ಜೀವಂತ ಆತ್ಮ. ಜಗತ್ತಿನಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ಭಾರತವು ಮೂರ್ತೀಕರಿಸುತ್ತಿದೆ. ಭಾರತದ ಮರ್ಮವನ್ನು ಈ ಕ್ಷೇತ್ರದ ಮೂಲಕ ಗುರುತಿಸಿ ಭಾರತ ಸರ್ಕಾರವು ಅದಕ್ಕೆ ಅನುಗುಣವಾಗಿ ತನ್ನ ಕ್ರಿಯೆಗಳನ್ನು ಯೋಜಿಸಬೇಕಾಗಿದೆ.

ಭಾರತವು ಮಾರಣಾಂತಿಕ ಯುದ್ಧದಲ್ಲಿ ವಿಜಯಿಯಾದಾಗ, ತನ್ನ ಪ್ರಾದೇಶಿಕ ಭದ್ರತೆಯನ್ನು ಪುನಃ ಪಡೆಯುವದು. ಇನ್ನೂ ಹೆಚ್ಚು ಭಯಂಕರವಾದ ನೈತಿಕ ಸಮಸ್ಯೆಗಳಲ್ಲೂ ಆಕೆಯು ವಿಜಯಿಯಾಗಿ ಹೊರಹೊಮ್ಮಬೇಕು. ಏಕೆಂದರೆ ಅದು ದೇಹವನ್ನು ಕೊಲ್ಲುವ ಬದಲಾಗಿ ಆತ್ಮ ಸಂಪರ್ಕವನ್ನೇ ನಾಶಪಡಿಸುವದು. ಭಾರತಕ್ಕೆ ಇದು ದೊಡ್ಡ ಹೊಡೆತ. ಇವುಗಳನ್ನು ಜಯಿಸಿದ ಭಾರತವು ಪ್ರಪಂಚದಲ್ಲಿ ತನ್ನ ನೈಜ ಸ್ಥಾನವನ್ನು ಅಲಂಕರಿಸಿ ಗುರಿಯತ್ತ ಮುನ್ನಡೆಯುವದು. ವೈಯಕ್ತಿಕ ಆಸೆ, ಆಕಾಂಕ್ಷೆ ಮತ್ತು ಗುರಿಗಳನ್ನು ಮಾತ್ರ ಈ ಚಿಕ್ಕ ಸಣ್ಣ ಪುಟ್ಟ ಸರ್ಕಾರೀಯ ಮತ್ತು ರಾಜಕೀಯ ದ್ವೇಷದ ಜಗಳಗಳು ಒಳಗೊಂಡಿವೆ. ಇವುಗಳು ನ್ಯಾಯವಾದ ಮತ್ತು ಜಾಗೃತವಾದ ಸಮನ್ವಯದಲ್ಲಿ ತನ್ನಂತೆ ತಾನೆ ಪರಿಹಾರವನ್ನು ಕಂಡುಕೊಳ್ಳುವವು.

*(1954ನೇ ಇಸವಿ ನವೆಂಬರ್ ಒಂದನೇ ತಾರೀಖು ಭಾರತದಲ್ಲಿನ ಪುದುಚೆರಿ ಮತ್ತು ಇತರ ಫ್ರೆಂಚ್ ವಸಾಹತುಗಳು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾದವು. ಈ ಸಂದರ್ಭವನ್ನು ಸಂಭ್ರಮಿಸಲು, ಮಧ್ಯದಲ್ಲಿ ಶ್ರೀಮಾತೆಯವರ ಸಂಕೇತವಿರುವ ಧ್ವಜವನ್ನು ಆಶ್ರಮದಲ್ಲಿ ಮೇಲೇರಿಸಲಾಯಿತು. ಬೆಳಿಗ್ಗೆ 6.20 ರಲ್ಲಿ ಧ್ವಜವನ್ನು ಮೇಲೇರಿಸಿದಾಗ ಶ್ರೀಮಾತೆಯವರು ಕೆಳಗಿನ ಸಂದೇಶವನ್ನು ಓದಿದರು.)*

ನಮಗೆ ನವೆಂಬರ್ ಒಂದನೇ ತಾರೀಖು ಬಹಳ ಆಳವಾದ ಅರ್ಥಪೂರ್ಣತೆಯನ್ನು ಹೊಂದಿದೆ. ಶ್ರೀ ಅರೊವಿಂದೋ ಒಗ್ಗೂಡಿದ ಭಾರತದ ಆಧ್ಯಾತ್ಮಿಕ ಧ್ವಜವೆಂದು ಯಾವುದನ್ನು ಕರೆದರೋ ಅದನ್ನು ನಾವು ಹೊಂದಿದ್ದೇವೆ. ಅದರ ಚೌಕಟ್ಟಿನ ರೂಪ, ಅದರ ಬಣ್ಣ ಮತ್ತು ಅದರ ರಚನೆಯ ಪ್ರತಿಯೊಂದು ವಿವರಣೆಯು ಸಾಂಕೇತಿಕ ಅರ್ಥವನ್ನು ಹೊಂದಿದೆ. 1947ನೇ ಇಸವಿ ಆಗಸ್ಟ್ 15 ರಂದು ಭಾರತ ಸ್ವತಂತ್ರವಾದಾಗ ಅದನ್ನು ಮೇಲೇರಿಸಲಾಗಿತ್ತು. ಇಂದು 1954ನೇ ಇಸವಿ ನವೆಂಬರ್ ಒಂದರಂದು, ಭಾರತದ ಒಕ್ಕೂಟದೊಂದಿಗೆ ಈ ವಸಾಹತುಗಳು ಸೇರ್ಪಡೆಯಾದಾಗ ಅದನ್ನು ಮೇಲೇರಿಸಲಾಗುತ್ತಿದೆ. ಮುಂದೆ ಭಾರತವು ತನ್ನ ಇತರ ಭಾಗಗಳನ್ನು ಹಿಂದಕ್ಕೆ ಪಡೆದಾಗಲೆಲ್ಲಾ ಅದನ್ನು ಮೇಲೇರಿಸಲಾಗುವದು. ಪ್ರಪಂಚದಲ್ಲಿ ಒಂದು

ವಿಶಿಷ್ಟ ಧ್ಯೇಯವನ್ನು ಭಾರತ ಒಕ್ಕೂಟವು ಪೂರ್ಣಗೊಳಿಸಬೇಕಾಗಿದೆ. ಶ್ರೀ ಅರೊವಿಂದೋ ತಮ್ಮ ಜೀವನವನ್ನೇ ಅದಕ್ಕಾಗಿ ನೀಡಿದರು ಮತ್ತು ನಾವು ಸಹ ಅದನ್ನೇ ಮಾಡಲು ಸಿದ್ಧವಾಗಿದ್ದೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/354**

*(ಆಶ್ರಮವನ್ನು ಭೇಟಿ ಮಾಡಿದ ಭಾರತದ ಅಧ್ಯಕ್ಷರಾಗಿದ್ದ ಡಾ॥ ರಾಜೇಂದ್ರ ಪ್ರಸಾದರಿಗೆ ನೀಡಿದ ಸಂದೇಶ)*

ಭಾರತವು ಆಕೆಯ ಧ್ಯೇಯದ ಔನ್ನತ್ಯಕ್ಕೆ ಏರಬೇಕು ಮತ್ತು ಪ್ರಪಂಚಕ್ಕೆ ಸತ್ಯವನ್ನು ಘೋಷಿಸಬೇಕು.

*

## ಭವಾನಿ ಭಾರತೀ

**– ಅನು: ಪುಟ್ಟು ಕುಲಕರ್ಣಿ**

**ಭವಾನಿ ಭಾರತೀ**

॥ ಓಂ ಚಂಡಿಕಾಯ್ಯೆ ॥

ನಮ್ಮೆಲ್ಲರಿಗೂ ತಾಯಿಯಾಗಿರುವ ದೇವಿ ಭವಾನಿಗಾಗಿ, ಉತ್ತುಂಗ–ಶೃಂಗಗಳ ಸಾಲಿನಲ್ಲಿ ಒಂದು ದೇವಾಲಯವನ್ನು ಉತ್ಥಾನಗೊಳಿಸಿ, ಮತ್ತೆ ಪ್ರತಿಷ್ಠಾಪಿಸಬೇಕಾಗಿದೆ. ಹೀಗಾಗಿ ಈ ಪವಿತ್ರ ಕಾರ್ಯಕ್ಕೆ ಸಹಾಯ ಮಾಡಲು, ಮಾತೆಯ ಸರ್ವ ಪುತ್ರರಿಗೂ ಕರೆಯೊಂದನ್ನು ಕಳಿಸಲಾಗಿದೆ.

**ಭವಾನಿ ಎಂದರೆ ಏನು?**

*ಯಾರು ಈ ಭವಾನಿ? ಯಾರು ಈ ಮಾತೆ? ಏತಕ್ಕಾಗಿ ಅವಳಿಗೆ ಈಗ ದೇವಾಲಯದ ಅವಶ್ಯಕತೆ ಇದೆ?*

– ಭವಾನಿ ಎಂದರೆ ಅನಂತಾನಂತವಾದ ಶಕ್ತಿ.

ಮುಕ್ತಾಯವೇ ಇರದ ಈ ಜಗತ್ತಿನ ಪರಿವರ್ತನೀಯ ಆವರ್ತಗಳಲ್ಲಿ, ಶಾಶ್ವತದ ಕಾಲಚಕ್ರವದು ತನ್ನ ನಿಯತಿಯುತ ಉದ್ದೇಶಕ್ಕಾಗಿ ಚಲಿಸುತ್ತಲೇ ಇರಲು,

ಆ ಅನಂತಾನಂತ ಶಕ್ತಿಯು ಶಾಶ್ವತದ ನೆಲೆಯಿಂದ ಪ್ರವಾಹದ ರೂಪದಲ್ಲಿ ಆಗಮಿಸುತ್ತಲೇ ಇರುತ್ತದೆ. ಜೊತೆಗೆ ಈ ಕರ್ತವ್ಯದ ಚಕ್ರಕ್ಕೆ ನಿಗದಿತದ ಪಥಗಳನ್ನೂ ಸೃಷ್ಟಿಸುತ್ತಾ (ರೂಪಿಸುತ್ತಾ) ಮಾನವನ ಮನೋದರ್ಶನದಲ್ಲಿ ತಾನು ನೇಯ್ದುಗೊಳ್ಳುತ್ತ, ಅದೂ ವಿವಿಧ ವಿಷಯಗಳ ಕುರಿತು ವೈವಿಧ್ಯಮಯವಾದ ಹಾಗೂ ಅನಂತಾನಂತ ರೂಪಗಳಲ್ಲಿ ಪ್ರಕಟಗೊಳ್ಳುತ್ತದೆ. ಇಂತಹ ಪ್ರತಿಯೊಂದೂ ಘಟಿತವು ಒಂದೊಂದು 'ಯುಗವನ್ನು' ಸೃಷ್ಟಿಸಿ, ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಕೆಲವೊಮ್ಮೆ ಅವಳು (ಈ ಶಕ್ತಿಯು) ಪ್ರೇಮವಾಗಿ, ಕೆಲವೊಮ್ಮೆ ಜ್ಞಾನವಾಗಿ, ಕೆಲವೊಮ್ಮೆ ತ್ಯಾಗಮಯಿಯಾಗಿ (Renunciation), ಮತ್ತೆ ಕೆಲವೊಮ್ಮೆ ದಯಾಪೂರಿತ ಕರುಣೆಯಾಗಿ ಅವಳು (ಶಕ್ತಿ) ಅಭಿವ್ಯಕ್ತಗೊಂಡಿದ್ದಾಳೆ. ಇಂತಹ ಅನಂತಾನಂತ ಶಕ್ತಿ ಸ್ವರೂಪವೇ ಭವಾನಿ. ಇವಳು ದುರ್ಗೆಯೂ ಹೌದು; ಕಾಳಿಯೂ ಹೌದು; ಪ್ರೇಮಮಯಿ ರಾಧೆಯೂ ಹೌದು; ಇವಳೇ ಲಕ್ಷ್ಮೀ. ಇವಳು ನಮ್ಮ ತಾಯಿಯಾಗಿದ್ದು, ನಮ್ಮೆಲ್ಲರ ಸೃಷ್ಟಿಕರ್ತೆಯಾಗಿದ್ದಾಳೆ.

**ಭವಾನಿ ಶಕ್ತಿ**

ಪ್ರಚಲಿತ ಯುಗದಲ್ಲಿ (ಅವಧಿಯಲ್ಲಿ) ಈ ಮಾತೆಯು "ಶಕ್ತಿಮಾತೆ"ಯಾಗಿ ತನ್ನನ್ನು ತಾನೇ ಪ್ರಕಟಗೊಳಿಸಿಕೊಂಡಿದ್ದಾಳೆ. ಇವಳೇ "ಪರಿಪೂರ್ಣ ಪರಿಶುದ್ಧ ಶಕ್ತಿ"ಯಾಗಿದ್ದಾಳೆ.

**ಜಗತ್ತೆಲ್ಲವೂ ಪ್ರಗತಿಗೊಳ್ಳುತ್ತಿರುವದು ಈ ಮಾತೆಯ ಶಕ್ತಿಯೇ ಆಗಿದೆ**

ನಾವೀಗ ನಮ್ಮ ಕಣ್ಣುಗಳನ್ನು ತೆರೆದು, ನಮ್ಮ ಸುತ್ತಲೂ ಇರುವ ಜಗತ್ತಿನ ಮೇಲೆಯೇ ಕೇಂದ್ರೀಕರಿಸಿ ದೃಷ್ಟಿಸಿದರೆ, ನಮ್ಮ ದೃಷ್ಟಿ ಎತ್ತೆತ್ತ ಸಾಗುತ್ತದೆಯೋ ಅಲ್ಲೆಲ್ಲವೂ ಈ ಬೃಹತ್–ಶಕ್ತಿ ಮೂಲಗಳೇ(ಆಗರಗಳೇ) ನಮಗೆ ಗೋಚರಿಸುತ್ತಿವೆ. ಅದೂ ಅತೀ ಬೃಹತ್ ಆದ ಮಹಾವೇಗವನ್ನೂ ಹೊಂದಿ ಜೊತೆಗೆ ಅನನುನೇಯ (ಇನ್‌ಎಕ್ಷೋರೆಬಲ್) ಬಲಗಳಿಂದ, ಸೀಮಾತೀತವಾದ ಮಹತ್‌ಶಕ್ತಿಯ ಆಕೃತಿಗಳಾಗಿ ಹಾಗೂ ಭಯಾವಹ ಬಲದ ವ್ಯಾಪ್ತ ಮಾತೃಕೆಗಳ ರೂಪದಲ್ಲಿ ಗೋಚರಿಸುತ್ತಿವೆ. ಪ್ರತಿಯೊಂದೂ, ಅಂದರೆ ಸರ್ವಸ್ವವೂ ಬೃಹತ್ ಆಗಿಯೇ ಹಾಗೂ ಸಾಮರ್ಥ್ಯಪೂರ್ಣವಾಗಿಯೇ ಪ್ರಗತಿಗೊಳ್ಳುತ್ತಿದೆ. ಯುದ್ಧದ ಶಕ್ತಿ,

ಸಂಪತ್ತಿನ ಶಕ್ತಿ, ವಿಜ್ಞಾನ ಶಕ್ತಿಗಳೆಲ್ಲ ಮೊದಲಿಗಿಂತ ಹತ್ತುಪಟ್ಟು ಹೆಚ್ಚಿನ ಸಾಮರ್ಥ್ಯದಲ್ಲಿ ಹಾಗೂ ಬೃಹದಾಕಾರಗಳಲ್ಲಿ ಅವತರಿಸಿವೆ. ನೂರ್ಮಡಿಗಿಂತಲೂ ಅಧಿಕವಾಗಿ, ಭಯಂಕರವಾಗಿ ತೀವ್ರಾತಿತೀವ್ರ ಗತಿಯಲ್ಲಿ ಹಾಗೂ ಸದಾ ಕಾರ್ಯಪ್ರವೃತ್ತವಾಗಿ, ಸಾವಿರ ಪಟ್ಟು ಅಧಿಕವಾಗಿ ಫಲದಾಯಕವಾಗಿ, ಸಂಸಾಧನಗಳಲ್ಲಿ, ಯುದ್ಧಾಸ್ತ್ರಗಳಲ್ಲಿ ಹಾಗೂ ಉಪಕರಣಗಳಲ್ಲಿ, ಈ ಮೊದಲಿನ ಇತಿಹಾಸದಲ್ಲಿ ದಾಖಲಾಗಿರುವ ಸಂಗತಿಗಳಿಗಿಂತ ಎಷ್ಟೋ ಪಟ್ಟು ಅಧಿಕವಾಗಿ ಪ್ರಗತಿಯಾಗಿರುವ ಸಂಗತಿ ಕಾಣುತ್ತಿದೆ.

ಇಲ್ಲಿ ಎಲ್ಲೆಡೆಗೂ ಈ ತಾಯಿಯೇ ಕಾರ್ಯಪ್ರವೃತ್ತಳಾಗಿದ್ದಾಳೆ; ಸಾಮರ್ಥ್ಯಶೀಲಗೊಳಿಸುವ ಹಾಗೂ ನೇರ್ಪುಗೊಳಿಸುವ ಅವಳ ಹಸ್ತಗಳಿಂದ, ಈ ಜಗತ್ತಿನ ಈ ಕರ್ಮ ಕ್ಷೇತ್ರದಲ್ಲಿ ರಾಕ್ಷಸರ, ಅಸುರರ ಹಾಗೂ ದೇವತೆಗಳ ಹಲವು ರೂಪುಗಳು ಪುಟಿದೆದ್ದು ರೂಪುಗೊಂಡಿವೆ. ನಿಧಾನವಾಗಿಯಾದರೂ, ಮಹತ್–ಬಲಶಾಲಿಯಾಗಿರುವ ಚಕ್ರವರ್ತಿಗಳ ಏಳ್ಗೆಯನ್ನೂ ನಾವು ಪಶ್ಚಿಮದಲ್ಲಿ ಕಾಣುತ್ತೇವೆ. ಅದೇ ರೀತಿಯಲ್ಲಿ ಅವು ಸರಿದು ಮರೆಯಾಗಿರುವದನ್ನೂ ಕಂಡಿದ್ದೇವೆ. ಜಪಾನಿನ ಅಪ್ರತಿರೋಧ್ಯ, ದುರ್ದಮನೀಯ ಪ್ರಗತಿಯನ್ನೂ ಕಂಡಿದ್ದೇವೆ. ಇವುಗಳಲ್ಲಿ ಕೆಲವು ಮ್ಲೇಚ್ಛಶಕ್ತಿಯ ಆವರಣದಲ್ಲಿ ಸಾಮರ್ಥ್ಯಗೊಂಡಿವೆ. ಕಪ್ಪು ಅಥವಾ ಕಡುರಕ್ತ ಕೆಂಪಿನಲ್ಲಿ ತಮಸ್ಸು ಅಥವಾ ರಜಸ್ಸಿನಲ್ಲಿ ಕೆಲವು ಇದ್ದರೆ, ಮತ್ತೆ ಕೆಲವು ಆರ್ಯ ಶಕ್ತಿಗಳಾಗಿದ್ದು, ಎಲ್ಲವೂ ಆತ್ಮ ಸಮರ್ಪಣೆಯ ಪರಿಶುದ್ಧವಾದ ಜ್ವಾಲೆಗಳಾಗಿ ಮತ್ತು ಸ್ವಯಂ ಬಲಿದಾನದ ರೀತಿಯಲ್ಲಿವೆ; ಆದರೆ ಇವೆಲ್ಲವೂ ಅವುಗಳ ನವನವೀನ ಹಂತದಲ್ಲಿ ಮಾತೆಯ ಸ್ವರೂಪವೇ ಆಗಿದ್ದು, ಪುನರ್–ಎರಕದಲ್ಲಿ ಸೃಷ್ಟಿಗೊಳಿಸಲ್ಪಟ್ಟಿವೆ. ಈ ಎಲ್ಲ ಪ್ರಾಚೀನಕ್ಕೂ ಅವಳು ತನ್ನ ಆತ್ಮ(ಶಕ್ತಿ)ಯನ್ನು ಧಾರೆ ಎರೆಯುತ್ತಿದ್ದಾಳೆ. ಜೀವನ ನವೀನ ಹಂತಕ್ಕಾಗಿ ಅವಳೀಗ ಆವರ್ತಗೊಳ್ಳುತ್ತಿದ್ದಾಳೆ.

### ಶಕ್ತಿಯ ಪ್ರಾಪ್ತಿಯಲ್ಲಿ ನಾವು ಭಾರತೀಯರು ಸರ್ವ ರಂಗದಲ್ಲಿಯೂ ವಿಫಲರಾಗಿದ್ದೇವೆ

ಆದರೆ ಭಾರತದಲ್ಲಿ ಮಾತ್ರ, ಈ ರೀತಿಯ ಸ್ಪಂದನವು (ಉಸಿರು) ತೀರ ಮಂದಗತಿಯಲ್ಲಿ ಚಲಿಸುತ್ತಿದೆ. ಈ ಅಂತಃಪ್ರೇರಣೆಯು ಸಹಿತ ಬರುವದು ಬಲು ದೂರದಲ್ಲಿಯೇ ಇದ್ದಂತೆ ತೋರುತ್ತಿದೆ. ಈ ಭಾರತವು, ನಮ್ಮೆಲ್ಲರ ಆದಿಮಾತೆಯಾಗಿದ್ದು, ಅವಳೀಗ ಬಹುತೇಕವಾಗಿ ಮರುಜನ್ಮ ಪಡೆದುಕೊಳ್ಳಲು

ಪ್ರಯಾಸಪಡುತ್ತಿದ್ದಾಳೆ, ವ್ಯಥೆಯಿಂದಲೂ, ದುಃಖಾಶ್ರುವಿನಿಂದ ಘಾಸಿಗೊಳ್ಳುತ್ತಿದ್ದಾಳೆ. ಆದರೆ ಅವಳ ಹೋರಾಟವೆಲ್ಲವೂ ವ್ಯರ್ಥವಾಗುತ್ತಿವೆ. ಅವಳು ಸರ್ವ–ಸಮರ್ಥ ಬಲಶಾಲಿಯಾಗಿದ್ದರೂ ಸಹಿತ, ಅದಾವ ಕಷ್ಟವು ಅವಳನ್ನು ಕಾಡುತ್ತಿದೆ? ಇವೆಲ್ಲ ಘಟನೆಯನ್ನು ನೋಡಿದರೆ, ಬಹು ದೊಡ್ಡ ಪ್ರಮಾದವೊಂದು ಖಂಡಿತವಾಗಿಯೂ ಘಟಿಸಿದೆ ಎನ್ನುವದು ಕಾಣುತ್ತದೆ. ಅದು ಪ್ರಾಣಕ್ಕೆ (ಪ್ರಾಣಮಯ–ಜೀವಂತ) ಸಂಬಂಧಿಸಿದ ವಿಷಯವಾಗಿದ್ದು, ಅದರ ಅವಶ್ಯಕತೆಯು ನಮಗೆ ಖಂಡಿತವಾಗಿಯೂ ಈಗ ಇದೆ. ಅದನ್ನು ನಿಖರವಾಗಿ ಗುರುತಿಸುವದೂ ಸಹಿತ ಅಷ್ಟೇನೂ ಕಷ್ಟದ ವಿಷಯವಲ್ಲ. ನಾವು ಸರ್ವ ವಸ್ತು–ವಿಷಯಗಳಿಂದ ಆವೃತವಾಗಿದ್ದರೂ, ಸಾಮರ್ಥ್ಯದಲ್ಲಿ ಮಾತ್ರ ಸಂಪೂರ್ಣ ಖಾಲಿಖಾಲಿಯಾಗಿದ್ದೇವೆ. ಬಲದಿಂದಲೂ ಸಹಿತ ಕ್ಷೀಣರಾಗಿದ್ದೇವೆ. ನಾವು ಶಕ್ತಿಯನ್ನು ತ್ಯಜಿಸಿಬಿಟ್ಟಿದ್ದೇವೆ. ಹೀಗಾಗಿಯೇ ನಾವು ಶಕ್ತಿಯಿಂದಲೂ ತ್ಯಜಿತರಾಗಿದ್ದೇವೆ. ಈ ಮಾತೆಯು ಈಗ ನಮ್ಮ ಹೃದಯದಲ್ಲಿ ಇಲ್ಲವೇ ಇಲ್ಲ. ನಮ್ಮ ಬುದ್ಧಿಶಕ್ತಿಯಲ್ಲಿಯೂ ಇಲ್ಲ. ನಮ್ಮ ಬಾಹುಗಳಲ್ಲಿ ಇಲ್ಲ.

ಆದರೆ ನಮಗೆ ಮರಳಿ ಮರಳಿ ಮರುಜನ್ಮ ಪಡೆದು ಬರುವ ಅದಮ್ಯ ಬಯಕೆಯಂತೂ ಇದೆ, ಅದರಲ್ಲಿ ಮಾತ್ರ ಕಿಂಚಿತ್ತೂ ಊನತೆಯನ್ನು ತಂದುಕೊಂಡಿಲ್ಲ. ಎಷ್ಟು ಸಾರಿ ಇದರ ಪುನರಾವರ್ತನೆಯಾಗಿದೆಯೋ, ಎಷ್ಟೊಂದು ಸಂಚಲನಗಳು ಘಟಿಸಿವೆಯೋ? ಅದೂ ಮತದ ವಿಷಯದಲ್ಲಂತೂ ಸಮಾಜದಲ್ಲಿ, ರಾಜಕೀಯದಲ್ಲಿ ಎಷ್ಟೊಂದು ಸಂಚಲನಗಳು ಘಟಿಸಿವೆಯೋ? ಎಲ್ಲೆಡೆಗೂ ಪುನಃ ಪುನಃ ಘಟಿಸುತ್ತಲೇ ಇದೆ. ಆದರೆ ಅದೇ ಅದೇ ದೃಶ್ಯವೇ (ಸ್ಥಿತಿಯೇ) ಮುಂದುವರೆದು ಸರ್ವಸ್ವವನ್ನೂ ಆವರಿಸಿಕೊಳ್ಳಲು ಸಿದ್ಧಗೊಳ್ಳುತ್ತಿದೆ. ಆ ಒಂದು ಕ್ಷಣದಲ್ಲಿ ಅವು ಮಿಂಚಿ, ಕಣ್ಣು ಕೋರೈಸಿದಂತೆ ಕಾಣುತ್ತವೆ. ಆದರೆ ಮುಂದಿನ ಕ್ಷಣಕ್ಕೆ ಆ ಸ್ಪಂದನವು ಕ್ಷೀಣಗೊಳ್ಳುತ್ತದೆ. ಜ್ವಲನಶೀಲವಾಗಿ ಪ್ರಜ್ವಲನಗೊಳ್ಳಬೇಕಿದ್ದ ಅಗ್ನಿಯು ತಣ್ಣಗಾಗಿ ಬಿಡುತ್ತದೆ. ಒಂದು ವೇಳೆ ಅವು ಹೊಳೆದಂತೆ ಕಂಡುಬಂದರೂ, ಬರೀ ಪೊಳ್ಳು–ಪೊಳ್ಳು ಕೋಶದಿಂದ ಕೂಡಿರುತ್ತವೆ. ಅಂದರೆ, ಬ್ರಹ್ಮನ ಅಸ್ತಿತ್ವವೇ ಇರದ ಆಕಾರಗಳಲ್ಲಿ ಅಥವಾ ತಮಸ್ಸು ಮತ್ತು ನಿಷ್ಕ್ರಿಯತೆಯೇ ಅಧಿಕವಾಗಿರುವ ಹಂತದಲ್ಲಿರುತ್ತವೆ. ನಮ್ಮ ಪ್ರಾರಂಭವೇನೋ ಸಾಮರ್ಥ್ಯಪೂರ್ಣತೆಯಿಂದಲೇ ಕೂಡಿದ್ದರೂ, ಅವು ಎಂದಿಗೂ ಫಲಪ್ರದವಾಗಿ ಪರಿಣಾಮಕಾರಿಯಾಗಿಲ್ಲ.

ನಾವೀಗ ಇನ್ನೊಂದು ಆಯಾಮದಿಂದ ಆರಂಭಿಸುತ್ತಿದ್ದೇವೆ. ನಾವೀಗ ಒಂದು ಬೃಹತ್–ಔದ್ಯೋಗಿಕ ಸಂಚಲನ(ಚಳುವಳಿ)ವನ್ನು ಪ್ರಾರಂಭ ಮಾಡಿದ್ದೇವೆ. ಈ ಮೂಲಕ ಭೂಮಿಯನ್ನು ಮತ್ತೂ ಬರಡಾಗಿಸುವ ಹಾಗೂ ಆ ಬರಡನ್ನೇ ಅಧಿಕಗೊಳಿಸುವ ಕ್ರಿಯೆಯನ್ನೂ ಹಮ್ಮಿಕೊಂಡಿದ್ದೇವೆ. ಈ ಹಿಂದೆ ಯಾವುದೇ ಅನುಭವದಿಂದ ನಾವೇನನ್ನೂ ಕಲಿಯಲಿಲ್ಲ. ಹಾಗೆಂದು ಈ ರೀತಿಯ ಸಂಚಲನದಿಂದಲೇ ಎಲ್ಲವೂ ಇದೇ ಹಂತದಲ್ಲಿಯೇ ಎಲ್ಲ ಕಡೆಗೂ ಹೋಗಿಬಿಡಬೇಕೆನ್ನುವ ಗ್ರಹಿಕೆಯೂ ನಮಗಿಲ್ಲ. ಎಲ್ಲಿಯವರೆಗೂ ನಮ್ಮ ಅತ್ಯಾವಶ್ಯಕವಾಗಿರುವ ವಸ್ತುಗಳ–ವಿಷಯಗಳ ಬಗೆಗೆ ನಾವು ಮೊದಲೇ ಅರಿತುಕೊಳ್ಳುವದಿಲ್ಲವೋ, ಎಲ್ಲಿಯವರೆಗೂ ನಾವು ಸೂಕ್ತ ಸಾಮರ್ಥ್ಯವನ್ನು ಪಡೆಯುದಿಲ್ಲವೋ, ಅಲ್ಲಿಯವರೆಗೂ ಇದೆಲ್ಲವೂ ಸಾಧ್ಯವೇ ಇಲ್ಲ.

**ಶಕ್ತಿಯ ಬಯಕೆಗಾಗಿ ಇರುವ ನಮ್ಮ ಜ್ಞಾನ ಜಡಗೊಂಡಿದೆ**

ನಾವು ಈ ರೀತಿಯ ಜ್ಞಾನವನ್ನು ಬೇಕೆಂದು ಬಯಸಿ ಬಯಸಿ ಪಡೆದು–ಕೊಳ್ಳುತ್ತಿದ್ದೇವೆಯೇ? ನಾವೂ ಇಲ್ಲಿ ಜನಿಸಿದ್ದೂ ಅಲ್ಲದೇ ನಮ್ಮ ಸಂತತಿಯನ್ನೂ ಇಲ್ಲಿಯೇ ಬೆಳೆಸುತ್ತಿದ್ದೇವೆ. ಆದರೆ ಮಾನವನ ಜನ್ಮಕ್ಕಿಂತ ಮೊದಲೇ ಇಲ್ಲಿ ಜ್ಞಾನವು ಸಂಗ್ರಹಿತವಾಗಿ ಸ್ಥಾಪಿತಗೊಂಡಿತ್ತು; ರಕ್ಷಿಸಲ್ಪಟ್ಟಿತ್ತು. ಅದನ್ನೇ ನಾವು ವಂಶ–ಪರಂಪರೆಯ ಮೂಲಕ ಪಡೆದುಕೊಳ್ಳುತ್ತಲೇ ಬಂದಿದ್ದೇವೆ. ಅದೂ ಸಾವಿರಾರು ವರ್ಷಗಳ ಕಾಲದಿಂದ ಪರಿಪಕ್ವವಾಗಿರುವ ಜ್ಞಾನವನ್ನು ಪಡೆದುಕೊಳ್ಳುತ್ತಾ ಬಂದಿದ್ದೇವೆ. ನಮ್ಮ ಅವಧಿಯಲ್ಲಿಯೇ ಆ ಮಹಾನ್ ಶಕ್ತಿಗಳು ಅವತರಿಸಿ, ಅವರ ವಿಶಿಷ್ಟ ಕಾರ್ಯಗಳ ಮೂಲಕ ಆ ಜ್ಞಾನವನ್ನು ಮತ್ತೂ ಮತ್ತೂ ಸಮೃದ್ಧಗೊಳಿಸುತ್ತ ಬಂದಿದ್ದಾರೆ. ನಮ್ಮ ಧಾರಣಾ ಶಕ್ತಿಯೂ ಸಹಿತ ಎಂದಿಗೂ ಬತ್ತಿಲ್ಲ. ನಮ್ಮ ಜ್ಞಾನದ ತೀಕ್ಷ್ಣತೆ ಎಂದಿಗೂ ಕುಂಠಿತಗೊಂಡಿಲ್ಲ. ಅಲ್ಲದೇ ಮಂದಗೊಳ್ಳುತ್ತ ಸ್ಥಗಿತಗೊಳ್ಳುತ್ತಿಲ್ಲ. ಪ್ರಾಚೀನ ಕಾಲದಿಂದಲೂ ಸಹಜವಾಗಿಯೇ ಇರುವ “ಸ್ವೀಕಾರ ಗುಣದ” ಹಾಗೂ ಸ್ಥಿತಿಸ್ಥಾಪಕತ್ವ ಗುಣವನ್ನೂ ಕಡಿಮೆ ಮಾಡಿಕೊಂಡಿಲ್ಲ.

ಆದರೆ ಯಾವಾಗ ನಮ್ಮತನವನ್ನು ನಾವೇ ನಮ್ಮ ಕೈಯಾರೇ ಕಳೆದುಕೊಂಡು, ದಾಸರಾಗಿ ಬದುಕಲು ಪ್ರಾರಂಭಿಸಿದೆವೋ, ಬಾಗಿ ನಡೆಯುವ ಗುಲಾಮತನವನ್ನು ಒಪ್ಪಿಕೊಂಡೆವೋ, ಆಗಿನಿಂದಲೇ ನಮ್ಮ ಆ ‘ಜ್ಞಾನವು’ ಮೃತಪ್ರಾಯವಾಗಿದೆ.

“ಆ ಜ್ಞಾನವು” ವಜ್ರದೋಪಾದಿಯಲ್ಲಿ ಇದ್ದು, ನಮ್ಮ ಹೆಜ್ಜೆಗಳಿಗೆ ಸೂಕ್ತವಾದ ಆಧಾರ–ಪಥವನ್ನು ಒದಗಿಸುವದರ ಬದಲಾಗಿ, ವಿಷಕಾರಕವಾಗಿ ನಮ್ಮನ್ನು ನಾಶಗೊಳಿಸುತ್ತದೆ. ನಮ್ಮ ರಕ್ಷಣೆಯ ಅಸ್ತ್ರವಾಗಿರಬೇಕಿದ್ದ ಅದು ನಿಷ್ಪ್ರಯೋಜಕ ವಸ್ತುವಿನಂತಾಗಿದೆ. ಯಾವುದೇ ವಸ್ತು–ವಿಷಯವಿರಲಿ, ಅವು ಎಷ್ಟೇ ಶ್ರೇಷ್ಠವಾಗಿದ್ದರರೂ ಸಹಿತ ಅದನ್ನು ಸೂಕ್ತವಾಗಿ ಉಪಯೋಗಿಸದಿದ್ದರೆ, ಆಗ ಅದು ಸಹಜವಾಗಿಯೇ ತನ್ನನ್ನು ಹೊಂದಿರುವವರ ಮೇಲೆಯೇ ಎರಗಿ ಅವನನ್ನು ನಾಶ ಮಾಡುತ್ತದೆ.

ಇವೆಲ್ಲವುಗಳಿಗಿಂತ ಮಿಗಿಲಾಗಿ, ನಮ್ಮ ಜ್ಞಾನವು ತಮಸ್ಸಿನ ಘನ ಭಾರದಿಂದ ನಮ್ಮ ಮೇಲೇಯೇ ಸವಾರಿ ಮಾಡುತ್ತಿದೆ. ಅಸಮರ್ಥತೆ ಹಾಗೂ ಜಡತ್ವದಿಂದಾಗಿ ಇದು ನಮಗೆ ಶಾಪ ಸ್ವರೂಪದಲ್ಲಿ ಉಳಿದುಕೊಂಡಿದೆ. ನಾವು ಸದಾ ಸದಾ ಅಲಂಕಾರಿಕ ವ್ಯವಸ್ಥೆಯಲ್ಲಿಯೇ ಇರಲು ಬಯಸುತ್ತಿದ್ದರೂ, ಅದರಲ್ಲೂ ಪ್ರಚಲಿತದ ದಿನಗಳಲ್ಲಿ, ಒಂದು ವೇಳೆ ನಾವು ಸೂಕ್ತವಾಗಿ ವಿಜ್ಞಾನವನ್ನು ಅಳವಡಿಸಿಕೊಂಡರೆ ಪ್ರತಿ ವಿಷಯವೂ ಸುಗಮವಾಗಬಹುದು.

ಇದೆಲ್ಲವನ್ನೂ ಮಾಡುವದಕ್ಕಿಂತ ಮೊದಲೇ, ನಾವು ನಮ್ಮಲ್ಲಿಯೇ ನಮಗೆ ನಾವೇ ಪ್ರಶ್ನೆ ಕೇಳಿಕೊಳ್ಳಬೇಕಾಗಿದೆ – ಅದೆಂದರೆ, ನಾವು ಈಗಾಗಲೇ ಪಡೆದುಕೊಂಡಿರುವ ಜ್ಞಾನದಿಂದ ಏನನ್ನು ಸಾಧಿಸಿಕೊಂಡಿದ್ದೇವೆ? ಒಂದು ವೇಳೆ ಏನಾದರೂ ಸಾಧಿತವಾಗಿದ್ದೇ ಹೌದಾದಲ್ಲಿ ಅದು ಏನು? ಅವುಗಳಲ್ಲಿ ವಿಜ್ಞಾನವು ಅಳವಟ್ಟುಕೊಂಡಿದೆಯೇ? ಇವೆಲ್ಲವೂ ಭಾರತಕ್ಕೆ ಏನನ್ನಾದರೂ ಅನುಕೂಲಿಸಲು ಸಮರ್ಥವಾಗಿವೆಯೇ? ಅನುಕರಣೆಯಲ್ಲಿ ಮತ್ತು ಅಸಮರ್ಥತೆಯಿಂದಲೇ ಪ್ರಾರಂಭಿಸಲ್ಪಡುವ ಉಪಕ್ರಮಗಳಾಗಲೀ, ಎಲ್ಲದರಲ್ಲಿಯೂ ನಾವು ಇಂಗ್ಲೆಂಡಿನ ವಿನ್ಯಾಸಗಳನ್ನೇ ನಕಲು ಮಾಡುತ್ತಿದ್ದೇವೆ. ಮತ್ತೆ, ನಾವು ಇದರಿಂದಲೂ ಸಾಮರ್ಥ್ಯವನ್ನು ಪಡೆದುಕೊಳ್ಳಲಿಲ್ಲ, ಎಲ್ಲ ವಿಷಯಗಳಲ್ಲಿಯೂ ನಾವು ಅವರಿಗಿಂತ ನಿಜವಾಗಿಯೂ ಸಾಮರ್ಥ್ಯಶಾಲಿಯಾಗಿದ್ದರೂ ಸಹಿತ ಏನನ್ನೂ ಪಡೆದುಕೊಳ್ಳಲಿಲ್ಲ. ನಾವು ಇದರಿಂದ ಏನನ್ನಾದರೂ ಸಾಧಿಸಿಕೊಂಡು ಪ್ರಗತಿಶೀಲರಾಗಿದ್ದೇವೆಯೇ? ಜ್ಞಾನದ ಬೃಹದ್ಬಲವಾಗಿ ಯುರೋಪ ಖಂಡವು, ಆ ಜ್ಞಾನವನ್ನು ಒಂದು ಅಸ್ತ್ರದಂತೆ ಬಳಸುತ್ತಿದೆ, ಅದೂ ಓರ್ವ ದೈತ್ಯ ಶಕ್ತಿಯನ್ನು ಹೊಂದಿದ ವ್ಯಕ್ತಿಯ ಕೈಯಲ್ಲಿರುವ ಅಸ್ತ್ರದಂತೆಯೇ ಇದೆ. ಇದು ಭೀಮಸೇನನ ಕೈಯಲ್ಲಿ ಇರುವ ಗದೆಯ ಹಾಗೆ ಇದೆ.

ಅದನ್ನು ಪ್ರಯೋಗಿಸುವಲ್ಲಿ ಒಂದು ಸಮಸ್ಯೆ ಎಂದರೆ, ಅದು ಅಪ್ಪಳಿಸುವ ಮುನ್ನವೇ ಅದರ ಮೇಲೆ ಹೊಂದಿರುವ ನಿಯಂತ್ರಣವನ್ನೇ ವಿಚಲನಗೊಳಿಸಿರುತ್ತದೆ.



(ಶ್ರೀಮಾತೆಯವರು ರೂಪಿಸಿರುವ ಈ “ಭಾರತದ ನಕಾಶೆ’ಯಲ್ಲಿ ಪಾಕಿಸ್ತಾನ, ನೇಪಾಳ, ಸಿಕ್ಕಿಂ, ಭೂತಾನ, ಬಾಂಗ್ಲಾದೇಶ, ಬರ್ಮಾ (ಮ್ಯಾನ್ಮಾರ್) ಮತ್ತು ಶ್ರೀಲಂಕಾಗಳನ್ನು ಒಳಗೊಂಡಿದೆ. ಈ ಕೆಳಗೆ ವಿವರಿಸಿದ ಸಾಲುಗಳಲ್ಲಿ “ವಿಭಜನೆ” ಎಂದು ನಮೂದಿತವಾಗಿರುವದು ಪಾಕಿಸ್ತಾನ ಮತ್ತು ಭಾರತ ಎಂದಾಗಿದೆ.)

ಈ ನಕಾಶೆಯನ್ನು “ವಿಭಜನೆಯ” ನಂತರದಲ್ಲಿ ರೂಪಿಸಲಾಗಿದೆ.

ಇದೇ ಭಾರತದ ನಿಜವಾದ ನಕಾಶೆಯಾಗಿದ್ದು, ತದನಂತರದ ಅವಧಿಯಲ್ಲಿ ಅದು ಯಾವುದೇ ಹಂತದಲ್ಲಿ ಸಾಗಿ ಬಂದಿದ್ದರೂ ಸಹಿತ, ಈ ನಕಾಶೆಯೇ ಭಾರತದ ನೈಜ ಸ್ವರೂಪವಾಗಿರುತ್ತದೆ. ಈ ವಿಷಯವಾಗಿ ಜನತೆ ಯಾವುದೇ ಅಭಿಪ್ರಾಯವನ್ನು ಹೊಂದಿದ್ದರೂ ಸಹಿತ, ಇದೇ “ಭಾರತದ ನಿಜವಾದ ನಕಾಶೆ”.

**29–ಜುಲೈ 1964**

## ನಮ್ಮ ಭಕ್ತಿ ಮತ್ತು ಕರ್ಮಗಳು ಶಕ್ತಿಯ ಬೇಡಿಕೆಗಾಗಿ ಅನುಷ್ಠಾನಗೊಳ್ಳುತ್ತಿಲ್ಲ

ಭಕ್ತಿಯ ಮೂಲಕ ಬೇಡಿಕೊಳ್ಳುತ್ತಿರುವದು ಪ್ರೇಮವೇ? ಅದು ಉತ್ಸಾಹವನ್ನೇ? ಇವೆಲ್ಲವೂ ಭಾರತೀಯ ಸಂಸ್ಕೃತಿಯಲ್ಲಿ ದೀರ್ಘ ಕಾಲದಿಂದಲೂ ಅಂತರ್ನಿಹಿತವಾಗಿವೆ. ಆದರೆ ಶಕ್ತಿಯು ಇಲ್ಲದಿದ್ದರೆ, ನಾವು ನಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಲು ಸಾಧ್ಯವಾಗುವದಿಲ್ಲ. ನಾವು ಅದನ್ನು ನಿಯಂತ್ರಿಸಲು, ನಿರ್ದೇಶಿಸಲು ಆಗುವದಿಲ್ಲ. ಅಷ್ಟೇ ಅಲ್ಲದೇ, ನಮಗೆ ಅದನ್ನು ರಕ್ಷಿಸಿಕೊಳ್ಳಲಿಕ್ಕೂ ಸಾಧ್ಯವಾಗುವದಿಲ್ಲ. ಭಕ್ತಿಯೆನ್ನುವದು ಒಂದು ಸದಾ ಪುಟಿದೆದ್ದು ಕಾಣುತ್ತಿರುವ ಜ್ವಾಲೆಯಾಗಿದ್ದರೆ, ಶಕ್ತಿಯು ಮಾತ್ರ ಅದರ ಮೂಲ ಇಂಧನವಾಗಿರುತ್ತದೆ. ಒಂದು ವೇಳೆ ಮೂಲ ಇಂಧನವೇ ಕೊರತೆಯಲ್ಲಿದ್ದರೆ, ಅದು ಹೇಗೆ ತಾನೆ ಜ್ವಾಲೆಯು ಪ್ರಜ್ವಲಿಸಿ ಪುಟಿದೇಳುತ್ತದೆ?

ಯಾವಾಗ ಶಕ್ತಿಯಶಾಲಿಯಾದ ಸ್ವಭಾವವು ಜ್ಞಾನದಿಂದ ಪ್ರಬುದ್ಧ-ಗೊಳ್ಳುತ್ತದೆಯೋ, ಶಿಸ್ತುಬದ್ಧವಾದ ಮಹದ್ಬಲದ ಜೊತೆಗೆ ಕರ್ಮದೊಡನೆ ಪ್ರಕಟಗೊಂಡಾಗ, ತಾನಾಗಿಯೇ ಅದು ದೇವರ ಬಗೆಗೆ ಪ್ರೇಮ ಹಾಗೂ ಆರಾಧನೆಯನ್ನು ಉನ್ನತ ಹಂತಕ್ಕೆ ಏರಿಸುತ್ತದೆ. ಇದೇ ಭಕ್ತಿಯಾಗಿದ್ದು, ಇದು ಆತ್ಮವನ್ನು ಸದಾ ಆ ದೈವದೊಡನೆ ಸಮನ್ವಯಗೊಳ್ಳುವಂತೆ ಮತ್ತು ಅಲ್ಲಿ ಸ್ಥಾಯಿಯಾಗುವಂತೆ ಮಾಡುತ್ತದೆ.

ಆದರೆ ಅಶಕ್ತ ಸ್ವಭಾವದ, ಅತ್ಯಂತ ದುರ್ಬಲತೆಯಿಂದ ಕೂಡಿದ ಹಂತವು, ಆ ಮಹತ್ವದ ವಿಷಯವಾಗಿರುವ ಪರಿಪೂರ್ಣ ಭಕ್ತಿಯ ಪ್ರೇರಣೆಯನ್ನು ಸಹಿಸಿಕೊಳ್ಳುವ, ಒಂದರೆಚಣವೂ ಸಹಿಸಿಕೊಳ್ಳಲು ಧಾರಣಾ ಶಕ್ತಿಯನ್ನು ಹೊಂದಿರುವದಿಲ್ಲ. ಒಂದು ಕ್ಷಣ ಅದನ್ನು ಎತ್ತಿ ಹಿಡಿದಂತೆ ತೋರಿಬಂದರೂ, ನಂತರದ ಕ್ಷಣದಲ್ಲಿಯೇ ಆ ಅಗ್ನಿ ಜ್ವಾಲೆಗಳು ಮಾತ್ರ ಊರ್ಧ್ವದೆಡೆಗೆ ಸ್ವರ್ಗದತ್ತ ಚಿಮ್ಮಿ ನೆಗೆದು, ಅವನನ್ನು ಮಾತ್ರ ಹಿಂದೆಯೇ ಬಿಟ್ಟುಬಿಡುತ್ತವೆ. ಆ ಹಂತದಲ್ಲಂತೂ ಅವನು ಮೊದಲಿಗಿಂತಲೂ ತುಂಬ ದುರ್ಬಲ ಸ್ಥಿತಿಯಲ್ಲಿ ಇರಬೇಕಾಗುತ್ತದೆ, ಇಂತಹ ಜೀವನದ ಸ್ಥಿತಿಯ ಉತ್ಸಾಹದಿಂದಾಗಲೀ ಅಥವಾ ಆರಾಧನೆಯಿಂದಾಗಲೀ ಮಾಡಿದ ಯಾವುದೇ ಪ್ರಯತ್ನಗಳೂ ಸಹಿತ ಖಂಡಿತವಾಗಿಯೂ ವಿಫಲವಾಗುತ್ತವೆ. ಅಷ್ಟೇ ಬೇಗ ಭಸ್ಮೀಭೂತವಾಗುತ್ತವೆ. ಏಕೆಂದರೆ ಮಾನವನು ಭೌತಿಕವಾಗಿ ರೂಪಿಸಿಕೊಂಡಿರುವ ಈ ರೀತಿಯ ಸಾಧನಾ ಪ್ರಕ್ರಿಯೆಯು ಕೇವಲ ತೋರಿಕೆಯ ಪೇಲವವಾದ ಸ್ಥಿತಿಯಲ್ಲಿ ಇರುತ್ತವೆ.

**ಭಾರತವು ಈಗ ಬಯಸುತ್ತಿರುವದು ಕೇವಲ “ಶಕ್ತಿ”ಯನ್ನು ಮಾತ್ರ**

ನಾವು ಹೆಚ್ಚು ಹೆಚ್ಚು ಗಂಭೀರವಾಗಿ, ಸೂಕ್ಷ್ಮವಾಗಿ ಗಮನಿಸುತ್ತಾ ಹೋದಲ್ಲಿ, ನಮಗೆ ಮನವರಿಕೆಯಾಗುತ್ತಿರುವ ಸಂಗತಿ ಎಂದರೆ – ನಮ್ಮೆಲ್ಲರಿಗೂ ಅವಶ್ಯವಾಗಿರುವ, ನಾವೆಲ್ಲ ಆಶಿಸುತ್ತಿರುವ, ಇನ್ನುಳಿದ ಎಲ್ಲವನ್ನೂ ಪಡೆದುಕೊಳ್ಳುವದಕ್ಕಿಂತ ಮೊದಲೇ ನಾವು ಪಡೆದುಕೊಳ್ಳಬೇಕಾದುದು – ಈ ಬಲ ಮತ್ತು ಸಾಮರ್ಥ್ಯ ಎನ್ನುವದು ನಿಶ್ಚಿತ. ಭೌತಿಕ ಬಲ (ಸದೃಢ ಶರೀರ), ಮನೋಬಲ, ನೈತಿಕ ಬಲ, ಇವೆಲ್ಲವುಗಳಿಗಿಂತ ಮಿಗಿಲಾಗಿರುವ ಅಧ್ಯಾತ್ಮಿಕ ಬಲವನ್ನು ಪಡೆದುಕೊಳ್ಳಬೇಕಾಗಿದೆ. ಅದರಲ್ಲೂ ಅಧ್ಯಾತ್ಮಿಕ ಬಲವು ಎಂದಿಗೂ ಕರಗಿಹೋಗದ, ಕುಂಠಿತಗೊಳ್ಳದ, ಖಾಲಿಯಾಗದ ಶಕ್ತಿಯ ಆಗರವಾಗಿ, ಉಳಿದೆಲ್ಲ ಬಲಗಳಿಗೂ ಆಧಾರವಾಗಿದೆ. ಒಂದು ವೇಳೆ ನಾವು ಈ ಸಾಮರ್ಥ್ಯವನ್ನು ಹೊಂದಿದಲ್ಲಿ, ಉಳಿದೆಲ್ಲವೂ ತಾವೇ ತಾವಾಗಿ ಸರಳವಾಗಿ, ಸ್ವಾಭಾವಿಕವಾಗಿ ಆಗಮಿಸುತ್ತವೆ. ಈ ಯಾವುದೇ ಬಲವಿಲ್ಲದೇ ಇದ್ದಲ್ಲಿ ಆಗ, ಕರಗಳಿದ್ದೂ ಎತ್ತದ, ಉಪಯೋಗಿಸದ, ಕಾಲುಗಳಿದ್ದೂ ಚಲಿಸಲಾಗದ, ಕೇವಲ ಭ್ರಮಾಧೀನ ಮಾನವರಂತಾಗಿ ಬಿಡುತ್ತೇವೆ.

**ಭಾರತವು ತನ್ನ ಆತ್ಮ ಶಕ್ತಿಯಲ್ಲಿ ಕುಸಿತಗೊಂಡ, ವಯಸ್ಸಾದಂತೆ ಇದೆ; ಇದೀಗ ಅದು ಮರುಜನ್ಮವನ್ನು ತಾಳಬೇಕಾಗಿದೆ**

ನಾವು ಏನನ್ನಾದರೂ ಮಾಡಲು ಹೋರಾಟ ಮಾಡುತ್ತಿದ್ದಲ್ಲಿ, ಉತ್ಸಾಹವು ಉಕ್ಕಿದ ಪ್ರಥಮ ಅನುಭವವೂ ಕಳೆದುಹೋದ ನಂತರದಲ್ಲಿ, ಅಸಹಾಯಕತೆಯ ಪರಮಾವಧಿಯಾಗಿರುವ ಶಕ್ತಿಹೀನತೆಯು ನಮ್ಮ ಮೇಲೆ ಆಕ್ರಮಣ ಮಾಡುತ್ತದೆ, ಇಂತಹ ಅನೇಕ ಪ್ರಸಂಗಗಳನ್ನು ವಯೋವೃದ್ಧರಲ್ಲಿ, ಅವರಲ್ಲಿದ್ದ ಅಪ್ರತಿಮ ಜ್ಞಾನ, ಅನುಭಾವವು ಸಹಿತ ಅವರ ಶಕ್ತಿಗಳನ್ನು ಬಳಸಿಕೊಳ್ಳುವಲ್ಲಿ ಮತ್ತು ಕ್ರಿಯೆಗೆ ಇಳಿಸುವಲ್ಲಿ ಅಶಕ್ತವಾಗಿರುತ್ತವೆ. ಅದು ಬಲಗಳ ಅಭೀಪ್ಸೆಯನ್ನು ತಣಿಸುವಲ್ಲಿ ಸಶಕ್ತವಾಗಿರುವದಿಲ್ಲ. ಯಾವಾಗ ಒಂದು ಮಹತ್ ಅನುಭವವು ಅಥವಾ ಮಹದ್ಬಯಕೆಯೊಂದು ಅವುಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡು, ಜೊತೆಗೆ ಅವುಗಳು ಕ್ರಿಯೆಯಲ್ಲಿಯೂ ಸೂಕ್ತವಾಗಿರುವಂತೆ, ಅವುಗಳನ್ನು ಮುಂದಕ್ಕೆ ಒಯ್ಯುವದು ಅವಶ್ಯಕವಾಗಿರುತ್ತದೆ. ಈ ಸಂದರ್ಭದಲ್ಲಿ ಅವುಗಳು ನಿರಾಕರಿಸುತ್ತಿದ್ದರೂ ಸಹಿತ, ವಿಚಾರ–ವಿಮರ್ಶೆಯಲ್ಲಿದ್ದರೂ ಸಹಿತ,

ತಾತ್ಕಾಲಿಕವಾಗಿದ್ದರೂ ಸಹಿತ, ಅದಕ್ಕಾಗಿ ಪರ್ಯಾಯ ಪ್ರಯತ್ನಗಳನ್ನು ಮಾಡುತ್ತ ಮತ್ತು ಇವುಗಳನ್ನು ನಿವಾರಿಸಿಕೊಳ್ಳುತ್ತ, ಇಲ್ಲವೇ ಮತ್ತೂ ಸುರಕ್ಷಿತವಾಗಿರುವ ಹಾಗೂ ಸುಲಭವಾಗಿರುವ ಅದರ ಪಥವನ್ನು ಅದಕ್ಕೆ ನಿರ್ದೇಶಿಸುತ್ತಾ – ಬಹುತೇಕವಾಗಿ ನೇರವಾದ ನಿರ್ದೇಶನದಲ್ಲಿರುವದನ್ನು ಸೂಚಿಸುವದಕ್ಕಿಂತ – ಅವುಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕಾಗುತ್ತದೆ.

ನಮ್ಮ ಜನಾಂಗವು (ಕುಲವು) ಪ್ರಗತಿ ಹೊಂದಿದ್ದು, ಅದು ಜ್ಞಾನದಿಂದ ಕೂಡಿರುವ ಹಾಗೂ ಅದನ್ನು ಅನುಭವಿಸುವಲ್ಲಿ ಸಮರ್ಥವಾಗಿರುವ, ಅಂತಹ ಅಭೀಪ್ಸೆಯನ್ನು ಹೊಂದಿರುವ ವೃದ್ಧನಂತಾಗಿದೆ. ಆದರೆ ಕೊಂಚ ಪಕ್ಷಪಾತಗೊಂಡಂತೆ ನಿಷ್ಕ್ರಿಯವೂ ಆಗಿದೆ. ವೃದ್ಧಾವಸ್ಥೆಯ ಅಂಜುಗುಳಿತನ, ದುರ್ಬಲತೆಯಿಂದಾಗಿ ಬಳಲಿದೆ.

ಒಂದು ವೇಳೆ ಭಾರತವು ಮತ್ತೆ ಬದುಕಿ ಬಾಳಬೇಕೆಂದರೆ, ಭಾರತ ಮಾತೆಯನ್ನು ಮತ್ತೆ ತಾರುಣ್ಯದ ಶಕ್ತಿಯಿಂದ ಕಂಗೊಳಿಸುವಂತೆ ಮಾಡಬೇಕಿದೆ. ಶಕ್ತಿಯ ಪ್ರವಾಹದ ಲಹರಿಗಳನ್ನು ಅಲ್ಲಿ ಧುಮ್ಮಿಕ್ಕುವಂತೆ ಮಾಡಬೇಕಿದೆ. ಅಲ್ಲಿ ಧಾರಾಕಾರವಾಗಿ ಶಕ್ತಿಯ ಪ್ರವಾಹವು ಸುರಿಯುತ್ತಿರುವಂತೆ ಮಾಡಬೇಕಿದೆ. ಅವಳ (ಭಾರತ ಮಾತೆಯ) ಆತ್ಮವು, ಈ ಹಿಂದೆ – ಅಂದರೆ ಪ್ರಾಚೀನ ಸಮಯದಲ್ಲಿ ಯಾವ ಜಾಗ್ರದಾವಸ್ಥೆಯಲ್ಲಿತ್ತೋ, ಉತ್ಸಾಹದ ಹೆದ್ದೆರೆಯ ಉಬ್ಬರದಲ್ಲಿ ಇತ್ತೋ, ವ್ಯಾಪ್ತಗೊಂಡಿತ್ತೋ, ಕ್ಷಮತಾಶಾಲಿಯಾಗಿತ್ತೋ, ಪ್ರಶಾಂತತೆಯಿಂದ ಕೂಡಿತ್ತೋ, ಅಥವಾ ಪ್ರಸಂಗ ಬಂದಾಗ ಪ್ರಕ್ಷುಬ್ದಗೊಳ್ಳುತ್ತಿತ್ತೋ ಅಂತಹ ಮಹಾಸಾಗರದ ಶಕ್ತಿಯ ಕ್ರಿಯೆಯಾಗಿಸಬೇಕಾಗಿದೆ.

### ಭಾರತವು ಮತ್ತೆ ನವ ಜನ್ಮಧಾರಿಯಾಗುವದು

ನಮ್ಮಲ್ಲಿ ಬಹುತೇಕವಾಗಿ ತಮಸ್ಸಿನಿಂದಲೇ ಆವೃತರಾದವರಾಗಿದ್ದೇವೆ. ಆ ಘನ ಕಪ್ಪು ತಮದ ಜಡದ ಪ್ರತೀಕವಾಗಿರುವಂತೆಯೇ ಇದ್ದ ಸಮಯದಲ್ಲಿಯೂ ಹೇಳುತ್ತಿರುವದೇನೆಂದರೆ, ಈಗಿನ ದಿನಮಾನಗಳಲ್ಲಿ ಇದು ಅಸಾಧ್ಯವಾದ ಮಾತು. ಈಗಾಗಲೇ ಭಾರತವು ನಿರ್ಜೀವವಾಗಿದೆ. ರಕ್ತಹೀನವಾಗಿದೆ. ಕ್ಷಯಿಸಿಯೂ ಆಗಿದೆ. ಪುನರುಜ್ಜೀವನಗೊಳ್ಳಲು ಎಂದಿಗೂ ಸಾಧ್ಯವಿಲ್ಲದಷ್ಟು ದುರ್ಬಲಗೊಂಡಿದೆ. ನಮ್ಮ ಪೀಳಿಗೆಯು(ಕುಲವು) ಇಂತಹ ದಂಡನಾತ್ಮಕ ಸ್ಥಿತಿಯಿಂದಾಗಿ ಅವನತಿ ಹೊಂದಿ

ವಿಲುಪ್ತವಾಗಿದೆ, ಎಂದೇ ಅಭಿಪ್ರಾಯ ಹೊಂದಿದ್ದೇವೆ. ಆದರೆ ಇದೊಂದು ಮೂರ್ಖತನದ ಹಾಗೂ ನಿಷ್ಕ್ರಿಯಾತ್ಮಕ ಹೇಳಿಕೆಯಾಗಿದೆ. ಯಾವುದೇ ವ್ಯಕ್ತಿಯಾಗಲೀ ಅಥವಾ ದೇಶವೇ ಆಗಲಿ, ಅವನಾಗಿಯೇ ಆಯ್ಕೆ ಮಾಡಿಕೊಳ್ಳದ ವಿನಾ ಅಶಕ್ತನಾಗಲು ಸಾಧ್ಯವೇ ಇಲ್ಲ. ಯಾವುದೇ ದೇಶವಾಗಲಿ ಅಥವಾ ವ್ಯಕ್ತಿಯಾಗಲಿ, ಅವನಾಗಿಯೇ ಇಚ್ಛಿಸದೇ ನಶಿಸಿಹೋಗಲೂ ಸಾಧ್ಯವೇ ಇಲ್ಲ.

**ರಾಷ್ಟ್ರವೆಂದರೆ ಏನು? ಅದು ಕೋಟ್ಯಾಂತರ ಶಕ್ತಿಗಳ ಅಪೂರ್ವ ಸಂಗಮ!**

ಹಾಗಾದರೆ ರಾಷ್ಟ್ರವೆಂದರೆ ಏನು? ನಮ್ಮ ಮಾತೃ ಭೂಮಿ ಎಂದರೇನು? ಅದು ಕೇವಲ ಭೂಮಿಯ ಒಂದು ತುಣುಕು ಮಾತ್ರ ಖಂಡಿತ ಅಲ್ಲ ಅಥವಾ ಯಾವುದೇ ಅಲಂಕಾರಿಕ ವಿಶೇಷಣವು ಅಲ್ಲ. ಮನೋಕಲ್ಪನೆಯಲ್ಲಿ ಕಟ್ಟಲ್ಪಟ್ಟಿರುವ ಕಟ್ಟು–ಕಥಾನಕವೂ ಅಲ್ಲ. ಇದೊಂದು ಮಹಾಶಕ್ತಿಯಾಗಿದ್ದು, ಕೋಟ್ಯಾಂತರ ಜನ ಸಮುದಾಯದ ಶಕ್ತಿಯ ಸಂಗಮ(ಒಕ್ಕೂಟ)ವಾಗಿದೆ. ಒಂದು ಸಮಗ್ರ ರಾಷ್ಟ್ರ ನಿರ್ಮಾಣದ ಕೇಂದ್ರವಾಗಿದೆ. ದೇವಿ ಭವಾನಿಯು ಹೇಗೆ ಮಹಿಷ–ಮರ್ದಿನಿಯಾಗಿ ಹೇಗೆ ಸರ್ವ ದೇವತೆಗಳ ಶಕ್ತಿಯ ಒಕ್ಕೂಟವಾಗಿ (ಕೇಂದ್ರವಾಗಿ) ಸಂಯೋಜಿತಳಾಗಿ, ಒಂದೇ ಕೇಂದ್ರದಲ್ಲಿ ಎರಕ ಹೊಯ್ಯಲ್ಪಟ್ಟಳೋ ಹಾಗಿದೆ. ಅದನ್ನೇ – ಅಂದರೆ ಈ ಶಕ್ತಿಯನ್ನೇ ನಾವು "ಭಾರತ" ಎಂದು ಕರೆಯುತ್ತೇವೆ; ಭವಾನಿ ಭಾರತೀ ಎನ್ನುತ್ತೇವೆ. ಇದು ಮುವತ್ತು ಕೋಟಿ (ಇದೀಗ ನೂರಿಪ್ಪತ್ತು ಕೋಟಿ) ಜೀವ–ಚೈತನ್ಯಗಳ ಐಕ್ಯತೆಯ ತಾಣವಾಗಿ ಬದುಕುತ್ತಿರುವ ದೇವಿಯಾಗಿದ್ದಾಳೆ. ಇದೆಲ್ಲ ಇದ್ದರೂ ಸಹಿತ ಅವಳು ಈಗ ನಿಷ್ಕ್ರಿಯಳಾಗಿದ್ದಾಳೆ. ತಮಸ್ಸಿನ ಮಾಯಾಜಾಲದಲ್ಲಿ ಸಿಲುಕಿ ಬಂದಿಯಾಗಿದ್ದಾಳೆ. ಸ್ವಯಂ ತನಗೆ ತಾನೇ ಆವಾಹನೆ ಮಾಡಿಕೊಂಡ ಜಡತೆಯಲ್ಲಿ ಮತ್ತು ಅಜ್ಞಾನದಿಂದ ತುಂಬಿರುವ ಅವಳ ಮಕ್ಕಳಿಂದಾಗಿ ದುಃಖಿತಳಾಗಿದ್ದಾಳೆ. ಈ ತಮಸ್ಸಿನಿಂದ ಹೊರ ಬರಲು, ನಮ್ಮಲ್ಲಿಯೇ ಇರುವ ಬ್ರಹ್ಮನನ್ನು ಮತ್ತೆ ನಾವು ಜಾಗೃತಗೊಳಿಸಿಕೊಳ್ಳಬೇಕಿದೆ.

**ರಾಷ್ಟ್ರವನ್ನು ಕಟ್ಟುವ ಅಥವಾ ನಾಶಗೊಳಿಸುವ ಆಯ್ಕೆ ನಮ್ಮ ಕೈಯಲ್ಲೇ ಇದೆ**

ಆ ಸಾವಿರಾರು–ಸಾವಿರಾರು ಸಾಧು–ಸಂತರು–ಪವಿತ್ರಾತ್ಮರು–ಸನ್ಯಾಸಿಗಳು ತಮ್ಮ ಜೀವನ ಶೈಲಿಯ ಮೂಲಕ ಮೌನವಾಗಿಯೇ ಬೋಧಿಸಿದ್ದಾದರು ಏನನ್ನು?

ರಾಮಕೃಷ್ಣ ಪರಮಹಂಸರಂತಹ ಅಪೂರ್ವ ವ್ಯಕ್ತಿತ್ವದಿಂದ ವಿಸ್ಫುರಿತಗೊಂಡ ಆ ಸಂದೇಶವಾದರೂ ಏನು? ತಮ್ಮ ಸಿಂಹ–ಹೃದಯದ ಗರ್ಜನೆಯಲ್ಲಿ, ವಕ್ತೃತ್ವ ಶಕ್ತಿಯ ಕೇಂದ್ರದಲ್ಲಿ ಸ್ವಾಮಿ ವಿವೇಕಾನಂದರ ಆ ವಾಗ್ಸ್ಫುರಿಯ ಆಂತರ್ಯವಾದರೂ ಏನು? ಇವುಗಳಲ್ಲಿ ಇದ್ದದ್ದು ಈ ಮುವತ್ತು (ಇದೀಗ ನೂರಿಪ್ಪತ್ತು) ಕೋಟಿ ಧ್ವನಿಗಳಲ್ಲಿ ಇರುವ ಪ್ರತಿಯೊಬ್ಬ ಕಿರೀಟಧಾರಿಯ ರಾಜನಿಂದ ಮೊದಲ್ಗೊಂಡು ಶ್ರಮಾಧಿಕ್ಯದಿಂದ ದುಡಿಯುತ್ತಿರುವ ಕೂಲಿಯ ತನಕ, ಸಂಧ್ಯಾವಂದನೆಯ ಕ್ರಿಯೆಯಲ್ಲಿ ವೃತಧಾರಿಯಾಗಿ ತೊಡಗಿಕೊಂಡ ಬ್ರಾಹ್ಮಣನಿಂದ ಹಾಗೂ ಅತ್ಯಂತ ಕೆಳ ದರ್ಜೆಯಲ್ಲಿ ಕಾಣಲಾಗುತ್ತಿರುವ ಪರಯನ ಆ ದೂರ–ದೂರದ ಚಲನೆಯವರೆಗೂ, ಅಲ್ಲೆಲ್ಲ ಇರುವದು ಒಂದೇ ವಿಷಯ – ಅದೆಂದರೆ 'ದೇವ ಸದೃಶ ಜೀವನ' ಅಥವಾ 'ದಿವ್ಯ ಜೀವನ'ವೇ ಆಗಿದೆ. ನಾವೆಲ್ಲರೂ ದೇವತೆಗಳೇ ಆಗಿದ್ದೇವೆ, ಅಷ್ಟೇ ಅಲ್ಲ ಸೃಷ್ಟಿಕರ್ತರೂ ಹೌದು. ಏಕೆಂದರೆ ಆ ದೇವನಿಗೆ ಇರುವ ಶಕ್ತಿಯೇ ನಮ್ಮಲ್ಲಿಯೂ ಇದೆ. ಅಲ್ಲದೇ ನಮ್ಮ ಜೀವನವೆಲ್ಲವೂ ಸೃಷ್ಟಿಯೇ ಆಗಿದೆ. ಕೇವಲ ಹೊಸತು–ಹೊಸತು (ನವನವೀನ) ಆವಿಷ್ಕಾರಗಳನ್ನು, ರೂಪಗಳನ್ನು ಸೃಷ್ಟಿಸುತ್ತಿರುವದಷ್ಟೇ ಅಲ್ಲದೆ ಅವುಗಳನ್ನು ಕರ್ಷಿಸುವದೂ ಸಹಿತ ಸೃಷ್ಟಿಯೇ ಆಗಿದೆ. ಅದನ್ನು ಲಯಗೊಳಿಸುವದೂ ಸಹಿತ ಸೃಷ್ಟಿಯೇ ಆಗಿದೆ. ನಾವು ಏನನ್ನು ಸೃಷ್ಟಿಸುತ್ತೇವೆಯೋ ಅದರ ಫಲವನ್ನೂ ನಾವು ಪಡೆದುಕೊಳ್ಳುತ್ತೇವೆ. ಮಾಯೆ ಅಥವಾ ಅದೃಷ್ಟದ ಪ್ರಾಬಲ್ಯದಲ್ಲಿಯೇ ಸಿಲುಕಿ ಅಲ್ಲಿಯೇ ಉಳಿದುಕೊಳ್ಳಬೇಕಾದ ಸೂತ್ರದ ಗೊಂಬೆಗಳಂತೂ ನಾವಲ್ಲ. ಅದು ನಾವು ಬಯಸದ ವಿನಾ ಸಾಧ್ಯವೂ ಆಗುವದಿಲ್ಲ. ನಾವೆಲ್ಲ ಆ ಅಖಂಡ ಮಹದ್ಬಲದ ಹಲವು ಆಯಾಮಗಳಾಗಿದ್ದು (ಮುಖಗಳಾಗಿದ್ದು) ಅದೇ ರೀತಿಯಲ್ಲಿರುವ ಅಭಿವ್ಯಕ್ತಿಗಳಾಗಿದ್ದೇವೆ.

**ಭಾರತವು ಪುನರುತ್ಥಾನಗೊಳ್ಳಲೇಬೇಕಾಗಿದೆ, ಏಕೆಂದರೆ ಇದು ಭವಿಷ್ಯದ ಜಗತ್ತಿನ ಅಭೀಪ್ಸೆಯೂ ಹೌದು**

ಭಾರತವು ಎಂದಿಗೂ ನಶಿಸಿಹೋಗುವದಿಲ್ಲ. ನಮ್ಮ ಜನಾಂಗವು ಎಂದಿಗೂ ವಿಲುಪ್ತಗೊಳ್ಳುವದಿಲ್ಲ. ಜಗತ್ತಿನಾದ್ಯಂತ ಇರುವ ಎಲ್ಲ ಸಮುದಾಯಗಳ (ಮನುಕುಲದ) ಮಧ್ಯೆಯೂ 'ಉಚ್ಚತಮ' ಹಾಗೂ ಜೀವನದ ಪರಮೋಚ್ಚ ಗುರಿಯನ್ನು ಉಳಿಸಿಕೊಂಡು ಬಂದಿರುವದು ಭಾರತ. ಇದು ಮನುಕುಲದ ಭವಿಷ್ಯಕ್ಕೆ ಅತ್ಯಂತ ಅವಶ್ಯವಿರುವ ಸಂಗತಿಯೂ ಹೌದು. ಇಡೀ ಜಗತ್ತಿನ ಭವಿಷ್ಯದ

ಮತದ(ಧರ್ಮ) ಸಲುವಾಗಿ ಈ ಭಾರತ ಮಾತೆಯೇ ತನ್ನನ್ನು ತಾನು ತೊಡಗಿಸಿಕೊಳ್ಳುವದೂ ಅಲ್ಲದೇ ಅದನ್ನೇ ಜಗತ್ತಿನಾದ್ಯಂತವೂ ವಿಸ್ತರಿಸಲಿರುವಳು. ಏಕೆಂದರೆ ಈ ಶಾಶ್ವತದ ಧರ್ಮವು ಎಲ್ಲ ಮತಗಳ ಮಧ್ಯದಲ್ಲಿಯೂ ಸಾಮರಸ್ಯವನ್ನು ರೂಪಿಸಲು ಶಕ್ತವಾಗಿದೆ. ಅಷ್ಟೇ ಅಲ್ಲದೇ ವಿಜ್ಞಾನ ಹಾಗೂ ತತ್ತ್ವಜ್ಞಾನಕ್ಕೂ ಸಹಿತ ಸಾಮರಸ್ಯವನ್ನು ರೂಪಿಸುವದರ ಜೊತೆಗೆ ಇಡಿ ಮಾನವ ಕುಲವೇ ಒಂದು ಆತ್ಮದ ಸ್ವರೂಪದಲ್ಲಿ ಬಾಳುವಂತೆ ಮಾಡುತ್ತದೆ. ನೈತಿಕತೆಯ ವಲಯದಲ್ಲಿ, ಅದೇ ರೀತಿಯಲ್ಲಿಯೇ ಇದ್ದು, ಅವಳ ನಿಯುಕ್ತ ಕರ್ಮವು ಬರ್ಬರದ ಅನಾಗರಿಕತ್ವವನ್ನೂ ಸಹಿತ ಪರಿಶುದ್ಧಗೊಳಿಸುವದಾಗಿದೆ. ಮನುಷ್ಯತ್ವದಲ್ಲಿ ಅಡಕಗೊಂಡಿರುವ ಈ ಅನಾಗರಿಕತ್ವವನ್ನು ಹೋಗಲಾಡಿಸಿ, ಇಡೀ ಜಗತ್ತನ್ನು ಆರ್ಯಮಯಗೊಳಿಸುತ್ತದೆ. ಇದನ್ನು ಕೈಕೊಳ್ಳುವ ಸಲುವಾಗಿ, ಅವಳು ಮೊದಲು ತನ್ನನ್ನು ತಾನು ಆರ್ಯತ್ವದಿಂದ ತುಂಬಿಕೊಳ್ಳಬೇಕಾಗಿದೆ.

ಇಂತಹ ಮಹತ್ತರವಾದ ಕಾರ್ಯವನ್ನು ಪ್ರಾರಂಭಗೊಳಿಸುವ ಸಲುವಾಗಿ, ಅದರಲ್ಲೂ ಮನುಕುಲದ ಮಹತ್ತರವಾದ ಹಾಗೂ ಆಶ್ಚರ್ಯಜನಕವಾಗಿರುವ ಕಾರ್ಯವಾಗಿರುವಂತೆಯೇ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಬೋಧನೆಗಳು ರೂಪಿತಗೊಂಡವು. ಒಂದು ವೇಳೆ ಈ ಪ್ರತಿಜ್ಞಾಪೂರ್ವಕವಾಗಿ ವಹಿಸಿಕೊಂಡ ಈ ಕಾರ್ಯವು ಘಟಿಸದೇ ಹೋದಲ್ಲಿ, ಪ್ರಗತಿ ಸಾಧಿಸದೇ ಇದ್ದಲ್ಲಿ, ಆಗ, ಅದಕ್ಕೆ ಕಾರಣವಾಗಿರುವದು ನಾವೇ ವಿನಾ ಬೇರೆ ಅಲ್ಲ. ಏಕೆಂದರೆ ನಾವು ಮತ್ತೆ ಮತ್ತೆ ಆ ತಮದ ಭಯಂಕರ ಮೋಡಗಳ ಮಧ್ಯೆಯೇ ಸಿಲುಕಿಕೊಳ್ಳಲು ಅವಕಾಶ ಕೊಡುತ್ತಿರುವದೇ ಮೂಲ ಕಾರಣವಾಗಿರುತ್ತದೆ. ನಮ್ಮೆಲ್ಲರ ಆತ್ಮಗಳೂ ಈ ತಮದ ಅಡಿಯಲ್ಲಿ ಸದಾ ಅಂಜಿಕೆಯಲ್ಲಿ, ಅನುಮಾನದಲ್ಲಿ, ತಿರಸ್ಕಾರದಲ್ಲಿ, ಹಿಂಜರಿಕೆಯಲ್ಲಿ ಉಳಿಯುತ್ತವೆ. ನಮ್ಮಲ್ಲಿ ಕೆಲವರು ಒಪ್ಪಿಕೊಂಡಿರುವ ಹಾಗೆ, ಭಕ್ತಿಯು ಓರ್ವನಿಂದ ಧಾರಾಪ್ರವಾಹದಲ್ಲಿ ಬರುತ್ತಿದ್ದರೆ, ಜ್ಞಾನವು ಮತ್ತೋರ್ವನಿಂದ ಕೊಡಲ್ಪಡುತ್ತದೆ. ಇದನ್ನು ನಾವೂ ಸಹಿತ ಸಮ್ಮತಿಸಿಕೊಂಡಿದ್ದೇವೆ. ಆದರೆ ಶಕ್ತಿಯ ಕೊರತೆ, ಕರ್ಮಗಳ ಕೊರತೆಗಳ ಕಾರಣದಿಂದಾಗಿ ನಾವು ಭಕ್ತಿಯನ್ನೂ ಸಹಿತ ಜೀವಂತಿಕೆಯಿಂದ ಅನುಷ್ಠಾನಗೊಳಿಸುತ್ತಿಲ್ಲ.

ಹೀಗಾಗಿ ಈಗಲೂ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿ ಎಂದರೆ, – ಇವಳೇ ಕಾಳಿ (ಈ ದೇಶವೇ ಕಾಳಿ ಮಾತೆ), ಅವಳು ಬಲದಲ್ಲಿ ಭವಾನಿ

ಮಾತೆಯಾಗಿದ್ದಾಳೆ. ಇವಳನ್ನೇ ಶ್ರೀ ರಾಮಕೃಷ್ಣ ಪರಮಹಂಸರು ಆರಾಧಿಸಿದ್ದು. ಅಲ್ಲದೇ ಈ ದೇವಿಯಲ್ಲಿಯೇ ತಮ್ಮನ್ನೂ ಏಕಾತ್ಮಗೊಳಿಸಿಕೊಂಡಿದ್ದರು. ಆದರೆ ಭಾರತದ ಗಮ್ಯವು (ಗುರಿಯು) ಯಾವತ್ತೂ ಇಂತಹ ವ್ಯಕ್ತಿಯಾಧಾರಿತ ಉನ್ನತಿ–ಅವನತಿಗಳನ್ನು ಅವಲಂಬಿಸಿಕೊಂಡಿಲ್ಲ. ಮಾತೆಯು ಆಶಿಸುತ್ತಿರುವದೇನೆಂದರೆ, –ಮಾನವರೆಲ್ಲರೂ ತಮ್ಮಲ್ಲಿ ತಾವು ಜಾಗ್ರತರಾಗಿ, ಒಕ್ಕೂಟವಾಗಿ ಅವಳನ್ನು ಆರಾಧಿಸುವದನ್ನು ಮತ್ತು ವೈಶ್ವೀಕರಣಗೊಳ್ಳುವದನ್ನು ಇಚ್ಛಿಸುತ್ತಾಳೆ.

## ಸಾಮರ್ಥ್ಯವನ್ನು ಪಡೆದುಕೊಳ್ಳಲು ನಾವು ಶಕ್ತಿ ಮಾತೆಯನ್ನು ಆರಾಧಿಸಲೇಬೇಕು

ಸಾಮರ್ಥ್ಯ ಮತ್ತೂ ಹೆಚ್ಚಿನ ಸಾಮರ್ಥ್ಯ, ಅದಕ್ಕೂ ಮಿಗಿಲಾದ ಸಾಮರ್ಥ್ಯವನ್ನು ಪಡೆಯುವದೇ ನಮ್ಮ ಮನುಕುಲದ ಆಶಯವಾಗಿದೆ. ಅದು, ನಾವು ಬಯಸುವ ಸಾಮರ್ಥ್ಯವೇ ಆಗಿದ್ದಲ್ಲಿ, ಅದನ್ನು ಪಡೆಯುವ ಬಗೆ ಹೇಗೆ? ಅದರಲ್ಲೂ ಮಾತೆಯನ್ನು ಆರಾಧಿಸದೇ ಹೇಗೆ ಪಡೆಯಲು ಸಾಧ್ಯ? ತನ್ನನ್ನು ಸದಾ ಆರಾಧಿಸುತ್ತಲೇ ಇರಬೇಕು ಎಂದು ಮಾತೆಯು ಎಂದಿಗೂ ಬಯಸುವದಿಲ್ಲ. ನಮಗೇ ಸಹಾಯ ಮಾಡುವದರ ಸಲುವಾಗಿ, ಹಾಗೂ ಮಾತೆಯು ತಾನೇ ತಾನಾಗಿ ನಮ್ಮನ್ನು ಆಶೀರ್ವದಿಸುವಂತೆ ಮಾಡಲು ಮಾತ್ರ ಈ ಆರಾಧನೆಯನ್ನು ಮಾಡಬೇಕಾಗಿದೆ. ಇದಾವುದೂ ಕೇವಲ ಕಾಲ್ಪನಿಕ ವಿಚಾರವಲ್ಲ. ಯಾವುದೇ ಅಂಧ ವಿಶ್ವಾಸವೂ ಅಲ್ಲ. ಏಕೆಂದರೆ ಇದು ವಿಶ್ವದ ನಿಯತಿ ಶಾಸನವಾಗಿದೆ. ಯಾವುದೇ ದೇವತೆಗಳಾದರೂ ಸಹಿತ, ಅವರು ಆ ರೀತಿಯಲ್ಲಿ ಮಾಡಲು ಶಕ್ತರಿದ್ದಾಗಲೂ ಸಹಿತ, ಯಾವುದೇ ಕೋರಿಕೆಯಿಲ್ಲದಿದ್ದರೂ ತಮ್ಮನ್ನು ತಾವು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ (ಸಹಾಯ ಮಾಡುತ್ತಾರೆ). ಆ ಶಾಶ್ವತತೆಯೂ ಸಹಿತ, ಮಾನವನು ಜಾಗ್ರತನಾಗದೇ ಹೋದಲ್ಲಿ ಮನುಕುಲಕ್ಕೆ ಲಭ್ಯವಾಗುವದಿಲ್ಲ. ಪ್ರತಿಯೊಬ್ಬ ಭಕ್ತನೂ ಕಂಡುಕೊಂಡಿರುವದೇನೆಂದರೆ, “ಅವನಿಗೆ ಶರಣಾಗುವದು”, “ಅವನನ್ನು ಹಂಬಲಿಸುವದು”, ಮತ್ತು “ಅವನನ್ನು ಆರಾಧಿಸುವ”ದೇ ಆಗಿದೆ. ಇದೆಲ್ಲವೂ ಆ ದಿವ್ಯ–ಶಕ್ತಿಯು ತನ್ನ ಅವರ್ಣನೀಯ ಸೌಂದರ್ಯದೊಂದಿಗೆ ಮತ್ತು ಪರಮಾನಂದದೊಂದಿಗೆ ಆತ್ಮದ ಮೇಲೆ ಧಾರೆಗೊಳ್ಳುವದನ್ನು ಕಾಣಬೇಕು. ಯಾವುದು ಶಾಶ್ವತ ಸತ್ಯವಾಗಿದೆಯೋ, ಅದೂ ಸಹಿತ ಅವಳದೇ ಸತ್ಯವಾಗಿದ್ದು, ಆ ಮೂಲಕವೇ ಪ್ರಗತಿ ಸಾಧ್ಯವಾಗುತ್ತದೆ.

## ಸತ್ಯದ ಪಥವೇ ಧರ್ಮ

ಪಾಶ್ಚಾತ್ಯ ಚಿಂತನೆಗಳನ್ನು ಹೊಂದಿರುವವರು ಯಾರೇ ಆಗಿರಲಿ, ಪ್ರಾಚೀನ ಸಂಗತಿಗಳ ಯಾವುದೇ ಶಕ್ತಿ ಮೂಲಗಳ ಬಗೆಗೆ ಯಾವುದೇ ವಕ್ರದೃಷ್ಟಿಯನ್ನು ಹೊಂದಿದ್ದರೂ ಸಹಿತ, ಅವರು ಕೆಲವು ಮೂಲಭೂತ ಸಂಗತಿಗಳನ್ನು ಪರಿಗಣಿಸುವದು ಸೂಕ್ತವಾಗಿದೆ.

## ಜಪಾನಿನ ದೃಷ್ಟಾಂತ

1) ಇತಿಹಾಸದಲ್ಲಿ ದಾಖಲಾಗಿರುವ ಅತ್ಯಂತ ರೋಚಕವಾಗಿರುವ, ಅತೀ ಸಾಮರ್ಥ್ಯದ ಕ್ಷಿಪ್ರ ಪ್ರಗತಿ–ಅವನತಿಗಳನ್ನು ಕಂಡ ಆಧುನಿಕ ಜಪಾನ ದೇಶಕ್ಕೆ ಹೋಲಿಕೆಯಾಗುವಂತಹ ಬೇರೆ ಯಾವುದೇ ಘಟನೆಯೂ ಇಲ್ಲ. ಪುನರುತ್ಥಾನದ ಸಲುವಾಗಿ ಎಲ್ಲ ಸಿದ್ಧಾಂತಗಳನ್ನೂ ಅಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಆದರೆ ಇದೀಗ ಪ್ರಜ್ಞಾವಂತ ಜಪಾನೀಯರು ಹೇಳುತ್ತಿರುವದೇನೆಂದರೆ, ಈ ರೀತಿಯ ಸಾಮರ್ಥ್ಯಪೂರ್ಣ ಜಾಗ್ರತಿಗೆ ಮೂಲಕಾರಣವಾದ ಆ ಶಕ್ತಿಯ ಮೂಲ–ಚಿಲುಮೆಗಳು ಎಲ್ಲಿದ್ದವು? ಆ ಅನಂತಾನಂತವಾಗಿರುವ ಸಾಮರ್ಥ್ಯದ ಮೂಲವಾದರೂ ಎಲ್ಲಿಂದ ಬಂದಿತು? ಎನ್ನುವ ವಿಷಯದ ಬಗೆಗೆ ಹೇಳುತ್ತಿರುವಾಗ, ಕಂಡುಬಂದ ಸಂಗತಿ ಎಂದರೆ ಮೊಟ್ಟಮೊದಲಾಗಿ, ಜಪಾನೀಯರನ್ನು 'ಮತದ ಕವಚ'ದಿಂದ ಹೊರತರಲಾಯಿತು. ಇದು ಜಪಾನಿನ "ಓಯೋಮಿ"ಯ ಧಾರ್ಮಿಕ (ವೇದಾಂತದ) ಬೋಧನೆಯಾಗಿತ್ತು. ಜೊತೆಜೊತೆಗೆ "ಶಿಂಟೋ ತತ್ತ್ವವನ್ನೂ" ಪುನರುತ್ಥಾನಗೊಳಿಸಲಾಯಿತು. ಈ ಮೂಲಕ ಜಪಾನ ದೇಶದ ಆತ್ಮಶಕ್ತಿಯನ್ನು ಒಂದು ಪ್ರತಿಮೆಯ ಸ್ವರೂಪದಲ್ಲಿ "ಮಿಕಾಡೋ" ಎನ್ನುವ ವ್ಯಕ್ತಿಯ ಸ್ವರೂಪದಲ್ಲಿ ಆರಾಧಿಸಲಾಯಿತು. ಈ ಆರಾಧನೆಯು ಈ ಚಿಕ್ಕ–ಚಿಕ್ಕ ದ್ವೀಪಗಳ ಸಮುಚ್ಛಯವಾಗಿರುವ ಜಪಾನ, ಇದರಿಂದ ಪಾಶ್ಚಾತ್ಯ ಜ್ಞಾನದ ಮತ್ತು ವಿಜ್ಞಾನದ ಆ ಅತ್ಯದ್ಭುತವಾದ ಶಸ್ತ್ರಾಸ್ತ್ರಗಳನ್ನೂ ಸಹಿತ ಲೀಲಾಜಾಲವಾಗಿ ನಿರ್ವಹಿಸಿದರು. ಇದು ಅರ್ಜುನನು ಗಾಂಢೀವವನ್ನು ನಿರ್ವಹಿಸದಂತೆಯೇ ಇತ್ತು.

## ಆಧ್ಯಾತ್ಮಿಕ ಉನ್ನತಿಯೇ ಭಾರತದ ಮಹತ್ವದ ಅವಶ್ಯಕತೆಯಾಗಿದೆ

2) ಮತದ ಸೆಲೆಯಿಂದ ಭಾರತವನ್ನು ಹೊರತರುವ ಗುರುತರದ ಕಾರ್ಯವು ಜಪಾನ ದೇಶದ ಕಾರ್ಯಕ್ಕಿಂತಲೂ ಮಹತ್ತರವಾಗಿದೆ; ಜಪಾನ

ದೇಶಕ್ಕಾದರೋ, ತಮ್ಮನ್ನು ತಾವೇ ಪುನರುತ್ಥಾನಗೊಳಿಸಿಕೊಂಡು, ಜೊತೆಗೆ ಈಗಾಗಲೇ ತಮ್ಮಲ್ಲಿ ಅಂತರ್ಗತವಾಗಿಯೇ ಇದ್ದ ಸಾಮರ್ಥ್ಯವನ್ನು ಪರಿಪೂರ್ಣ–ಗೊಳಿಸಿಕೊಳ್ಳುವದಾಗಿತ್ತು. ಆದರೆ ನಾವೋ, ಈ ಮೊದಲು ಅಸ್ತಿತ್ವದಲ್ಲಿ ಇರದ ಆ "ಶಕ್ತಿ"ಯನ್ನು ನಮ್ಮಲ್ಲಿ ಸೃಷ್ಟಿಸಬೇಕಾಗಿದೆ; ತುಂಬಿಕೊಳ್ಳಬೇಕಾಗಿದೆ. ನಮ್ಮ ನಮ್ಮ ಸ್ವಭಾವವನ್ನು ಎಲ್ಲ ನೂತನ ಅಸ್ತಿತ್ವಗಳೂ ಚಿಮ್ಮಿ ಬರುವ ಮೂಲಕ ಅವತರಣಗೊಳ್ಳುತ್ತವೆ. ಪುನರ್ಜನ್ಮ ಪಡೆದುಕೊಳ್ಳುವದು ಎಂದರೆ ನಮ್ಮಾತ್ಮದಲ್ಲಿರುವ ಬ್ರಹ್ಮನನ್ನು (ಬ್ರಹ್ಮವನ್ನು) ಅರಿತುಕೊಳ್ಳುವದು ಎಂದರ್ಥವೇ ವಿನಾ ಬೇರೆ ಏನೂ ಇಲ್ಲ. ಅದೂ ಅಧ್ಯಾತ್ಮಿಕ ಕ್ರಿಯೆ–ಪ್ರಕ್ರಿಯೆಯಿಂದ ಜರುಗಬೇಕಾಗಿದೆ. ಇಲ್ಲಿ ಯಾವುದೇ ದೈಹಿಕ ಶ್ರಮ ಅಥವಾ ಬುದ್ಧಿಮತ್ತೆ ಇಲ್ಲ. ಅದನ್ನು ನಾವು ಅಳೆಯಲು ಬರುವದಿಲ್ಲ.

**ರಾಷ್ಟ್ರೀಯ ಮಾನಸಿಕ ಸ್ಥಿತಿಗೆ ಮತವು ಸ್ವಾಭಾವಿಕವಾದ ಪಥವಾಗಿದೆ**

3) ಭಾರತದಲ್ಲಿ ಘಟಿಸಿರುವ ಎಲ್ಲ ಮಹತ್ತರ ಜಾಗ್ರತಿಯ ಘಟನೆಗಳೂ ಭಾರತ ಮಾತೆಯ ಶಕ್ತಿಶಾಲಿಯಾದ ಯುಗಗಳಲ್ಲಿಯೇ ಬಹುತೇಕವಾಗಿ ಕಾಣುತ್ತವೆ. ಅವು ವೈವಿಧ್ಯಮಯದ ಚೇತನ ಶಕ್ತಿಗಳು ತಮ್ಮ ಜೀವ ಶಕ್ತಿಯನ್ನು (ಪ್ರಾಣ ಶಕ್ತಿಯನ್ನು) ಪಡೆದುಕೊಂಡಿದ್ದು ಈ ಘನತೆಯಲ್ಲಿ ಆಧಾರಭೂತವಾಗಿರುವ ಧಾರ್ಮಿಕ ಜಾಗ್ರತಿಯಿಂದಲೇ ಪಡೆದುಕೊಂಡಿವೆ. ಅಲ್ಲಿ ಘಟಿಸಿರುವ ಯಾವುದೇ ಧಾರ್ಮಿಕ ಜಾಗ್ರತಿಗಳೂ ಪರಿಪೂರ್ಣವಾಗಿಯೇ ಇದ್ದವು ಮತ್ತು ವೈಭವೋಪೇತವೂ ಆಗಿದ್ದವು. ಅಲ್ಲಿ ಈ ರಾಷ್ಟ್ರಶಕ್ತಿಯು (ಸಾಮರ್ಥ್ಯವು) ಸೃಷ್ಟಿಸಿದ ವಾತಾವರಣವು ಭೀಮಕಾಯದಲ್ಲಿದ್ದದ್ದೂ ಅಲ್ಲದೇ ಪ್ರಬಲ ಸಾಮರ್ಥ್ಯಶಾಲಿಯೂ ಆಗಿದ್ದಿತು. ಯಾವಾಗ ಧಾರ್ಮಿಕ ಪ್ರಕ್ರಿಯೆಗಳು ಸಂಕುಚಿತಗೊಂಡು ಅಥವಾ ಅಪೂರ್ಣವಾಗಿದ್ದವೋ, ಅಂತಹ ಸಂದರ್ಭದಲ್ಲೆಲ್ಲವೂ ಈ ರಾಷ್ಟ್ರೀಯ ಸಂಘಟನೆಯ ಕ್ರಿಯೆಯು ತುಂಡರಿಸಲ್ಪಟ್ಟಿದೆ. ಅಪೂರ್ಣವಾಗಿದೆ ಅಥವಾ ತಾತ್ಕಾಲಿಕ ಫಲಿತಾಂಶದಲ್ಲಿ ಮುಕ್ತಾಯಗೊಂಡಿದೆ. ಈ ನಿತ್ಯ ನಿರಂತರತೆಯ ವಿದ್ಯಮಾನಗಳು ಸಾಕ್ಷೀಕರಿಸುತ್ತಿರುವದೇನೆಂದರೆ, ಇದೊಂದು ಮನುಕುಲದಲ್ಲಿ ಆಳವಾಗಿ ಬೇರೂರಿರುವಂತಹ ಮನೋಧರ್ಮವಾಗಿದೆ ಎನ್ನುವದನ್ನು ತೋರುತ್ತಿದೆ.

ಒಂದು ವೇಳೆ ನೀವು ಬೇರೆ ಮಾರ್ಗ ಅಥವಾ ಪರದೇಶದ ವಿಧಾನಗಳನ್ನು ಅನುಸರಿಸಲು ಯತ್ನಿಸಿದಲ್ಲಿ, ಆಗ ನಾವು ಪಡೆದುಕೊಳ್ಳುವದು ಕೇವಲ ನಮ್ಮ

ಮುಕ್ತಾಯವನ್ನು ಮಾತ್ರ, ಅದೂ ಪರಮಾತಿ ಪರಮ ಬೇಸರವನ್ನು ತರುವಷ್ಟು ನಿಧಾನ ಗತಿಯಲ್ಲಿ, ಯಾತನಾಪೂರಿತ ಹಾಗೂ ಅಪರಿಪೂರ್ಣತೆಯ ಅಂತಿಮ ಹಂತವನ್ನೆ ದೇವರು ನಿರ್ಮಿಸಿರುವ ಆ ಸರಳ ಪಥವನ್ನು ಏಕೆ ಈ ರೀತಿಯಲ್ಲಿ ನಿರಾಕರಿಸುತ್ತೀರಿ? ಅದು ಈ ಮಾತೆಯು ನಿಮಗಾಗಿಯೇ ರಚಿಸಿರುವ, ಗುರುತಿಸಿರುವ ಹಂತದಲ್ಲಿ ನೀವೇಕೆ ಅದನ್ನು ಬಿಟ್ಟು ಮಸಕು–ಮಸುಕಾದ ಹಾಗೂ ಘೋರವಾಗಿರುವ ಪಥಗಳಲ್ಲಿ ನಡೆಯಲು ಇಷ್ಟಪಡುತ್ತೀರಿ?

**ಸಾಮರ್ಥ್ಯದ ಮೂಲವು ಅಂತರಂಗದಲ್ಲಿರುವ ಶಕ್ತಿಯೇ ಆಗಿದೆ**

4) ನಮ್ಮ ಅಂತರಂಗದಲ್ಲಿ ಇರುವ ಬ್ರಹ್ಮವು, ಏಕೈಕವಾಗಿದ್ದು, ಎಂದಿಗೂ ಖಂಡಗೊಳ್ಳದ ಅಖಂಡವಾಗಿರುವ ಆಧ್ಯಾತ್ಮಿಕ ಬಲಗಳ ಮಹಾಸಾಗರವೇ ಆಗಿದೆ. ಈ ಮೂಲದಿಂದಲೇ ಎಲ್ಲ ಭೌತಿಕ ಜೀವನ ಹಾಗೂ ಮಾನಸಿಕ ಹಂತಗಳು ರೂಪುಗೊಂಡಿವೆ. ಇದೇ ಆದಿಯೂ ಹೌದು. ಈ ಸಂಗತಿಯನ್ನು ಪೂರ್ವವು ಪ್ರಾಚೀನ ಕಾಲದಿಂದಲೂ ಅರಿತುಕೊಂಡಿದ್ದರು. ಇದೀಗ ಪಾಶ್ಚಾತ್ಯರೂ ಚಿಂತಕರೂ ಸಹಿತ ಇದನ್ನು ಗುರುತಿಸುತ್ತಿದ್ದಾರೆ. ಅನುಮೋದಿಸುತ್ತಿದ್ದಾರೆ.

ಈ ಎಲ್ಲ ಸಂಗತಿಯು ಈ ರೀತಿ ಇರುವಾಗ, ಉಳಿದೆಲ್ಲ ಸಾಮರ್ಥ್ಯಗಳ ಮೂಲ ಝರಿಯು ಈ ಆಧ್ಯಾತ್ಮಿಕ ಶಕ್ತಿಯೇ ಆಗಿದೆ. ಅಲ್ಲಿ ಅಗಣನೀಯವಾದ, ಅಗಾಧವಾದ ಅಂತರಾಳದಲ್ಲಿರುವ ಶಕ್ತಿಯ ಕೇಂದ್ರಗಳು ಇವೆ. ಅವು ನಿತ್ಯ–ನಿರಂತರವಾಗಿವೆ. ಅಕ್ಷಯವೂ ಆಗಿವೆ. ಇವುಗಳನ್ನು ಬಿಟ್ಟು ಕೇವಲ ಮೇಲ್ಪದರಿನಲ್ಲಿರುವ ವಲಯದ ಶಕ್ತಿಯ ಕೇಂದ್ರಗಳನ್ನು ತಲುಪುವದು ಸುಲಭವಾದಂತೆ ಕಾಣುತ್ತದೆ. ಆದರೆ, ಅವು ಅಷ್ಟೇ ಬೇಗ ಬತ್ತಿಹೋಗುತ್ತವೆ. ಅದಕ್ಕಾಗಿ ಯಾಕೆ ಮತ್ತೂ ಮತ್ತು ಆಳಕ್ಕೆ ಇಳಿಯಬಾರದು? ಕೇವಲ ಮೇಲ್ಪದರವನ್ನೇ ಕೆದರುತ್ತಾ ಕೂಡುವದಕ್ಕಿಂತ ಆಳ–ಆಳಕ್ಕೆ ಹೋಗಬೇಕಾಗಿದೆ.

ಅಂತಿಮದ ಫಲಿತಾಂಶ ಮಾತ್ರ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನೇ ತರುತ್ತದೆ.

**ಅತ್ಯಾವಶ್ಯವಾಗಿರುವ ಮೂರು ವಿಷಯಗಳು**

ಮೂರು ವಿಶ್ವ ನಿಯಮಗಳಿಗೆ ಉತ್ತರಿಸಲು ನಾವು ಮೂರು ವಿಷಯಗಳನ್ನು ಅರಿತುಕೊಳ್ಳಬೇಕಾಗಿದೆ:

## 1) ಭಕ್ತಿ – ಮಾತೆಯ ಮಂದಿರ

ನಾವು ಶಕ್ತಿ ಮಾತೆಯನ್ನು ಆರಾಧಿಸದೇ ಶಕ್ತಿ–ಸಾಮರ್ಥ್ಯಗಳನ್ನು ಪಡೆಯಲು ಸಾಧ್ಯವೇ ಇಲ್ಲ.

ಹೀಗಾಗಿ ನಾವು, ಈ "ಶ್ವೇತ ಭವಾನಿ"ಗೆ ಒಂದು ದೇವಾಲಯವನ್ನು ರಚಿಸಲೇಬೇಕಾಗಿದೆ. ಇವಳೇ ಶಕ್ತಿ ಮಾತೆಯೂ ಆಗಿದ್ದಾಳೆ. ಇವಳೇ ಭಾರತ ಮಾತೆಯೂ ಹೌದು. ನಾವು ಈ ದೇವಾಲಯವನ್ನು ಆಧುನಿಕ ನಗರಗಳ ಯಾವುದೇ ಸೋಂಕೂ ತಾಗದ ಹಾಗೆ ಇರುವ ಸ್ಥಳದಲ್ಲಿ ರಚಿಸಬೇಕಾಗಿದೆ. ಜೊತೆಗೆ ಮಾನವನ ಪದದ ತುಳಿತಕ್ಕೆ ಸಿಕ್ಕು ಘಾಸಿಗೊಳ್ಳದ ಹಾಗೆ ಇರುವ ಅತ್ಯುನ್ನತವಾದ ಸ್ಥಳದಲ್ಲಿ ಹಾಗೂ ಪರಮ ಪರಿಶುದ್ಧವಾದ ವಾತಾವರಣವಿರುವಲ್ಲಿ, ಪ್ರಶಾಂತವಾಗಿರುವಲ್ಲಿ ಹಾಗೂ ಶಕ್ತಿ ಸಂಚಯನವಾಗಿರುವ ಅಂತಹ ಸ್ಥಳದಲ್ಲಿ ರಚಿಸಬೇಕಾಗಿದೆ. ಮುಖ್ಯವಾಗಿ ಈ ದೇವಸ್ಥಾನವು ಕೇಂದ್ರ ಸ್ಥಾನದಲ್ಲಿದ್ದು, ಇಲ್ಲಿಂದಲೇ ದೇಶದಾದ್ಯಂತವೂ ದೇವಿಯ ಶಕ್ತಿಯು ಪ್ರವಹಿಸುವಂತೆ ಅವಳನ್ನು ಆರಾಧಿಸಬೇಕಾಗಿದೆ. ಶೃಂಗ–ಶಿಖರಗಳ ಮಧ್ಯದಲ್ಲಿ ಈ ಆರಾಧನೆಯಿಂದ ಅವಳು ಅಗ್ನಿಯಂತೆಯೇ ಚಲಿಸಿ, ಮನಸ್ಸು ಮತ್ತು ಹೃದಯಗಳಲ್ಲಿ ನೆಲೆಸುವಂತೆ ಪ್ರಾರ್ಥಿಸಿ ಆರಾಧಿಸಬೇಕಾಗಿದೆ. ಮಾತೆಯೂ ಸಹಿತ ಇದನ್ನೇ ಆಶಿಸುತ್ತಿದ್ದಾಳೆ.

## 2) ಕರ್ಮ – ಬ್ರಹ್ಮಚಾರಿಗಳ ನವೀನ ವ್ಯವಸ್ಥೆ

ಆರಾಧನೆಯು ಕರ್ಮದಲ್ಲಿ ರೂಪಾಂತರಗೊಳ್ಳದೇ ಇದ್ದಲ್ಲಿ ಅದು ಪರಿಣಾಮ–ಕಾರಿಯಾಗಿರುವದಿಲ್ಲ, ಅಷ್ಟೇ ಅಲ್ಲದೇ ಅದು ಮೃತಪ್ರಾಯವಾಗಿರುತ್ತದೆ. ಅದಕ್ಕಾಗಿ ಈ ಕರ್ಮ ಯೋಗಿಗಳಿಗಾಗಿಯೇ "ಮಠದ" ವ್ಯವಸ್ಥೆಯನ್ನು ದೇವಸ್ಥಾನದ ಜೊತೆ ಜೊತೆಗೇ ಹೊಂದಬೇಕಾಗಿದೆ. ಅಲ್ಲಿ ಮಾತೆಯ ಸಲುವಾಗಿಯೇ ಸರ್ವಸ್ವವನ್ನೂ ತ್ಯಾಗ ಮಾಡಲು ಹಾಗೂ ಕರ್ಮಕ್ಕಿಳಿಯಬಲ್ಲ ವ್ಯಕ್ತಿಗಳಿಗೆ ಈ ವ್ಯವಸ್ಥೆಯನ್ನು ರಚಿಸಬೇಕಾಗಿದೆ. ಒಂದು ವೇಳೆ ಕೆಲವರು ಇಚ್ಛಿಸಿದಲ್ಲಿ, ಸಂಪೂರ್ಣ ಸನ್ಯಾಸ ಜೀವನವನ್ನೇ ಒಪ್ಪಿಕೊಂಡು ಸಮರ್ಪಿಸಿಕೊಳ್ಳಲು ಸಿದ್ಧರಾಗಿದ್ದಲ್ಲಿ, ಬಹುತೇಕವಾಗಿ ಅವರೆಲ್ಲರೂ ಬ್ರಹ್ಮಚಾರಿಗಳೇ ಆಗಿರುವದರಿಂದ, ಇಂತಹ ವ್ಯವಸ್ಥೆ ಅವಶ್ಯಕವಾಗಿದೆ. ಒಂದು ವೇಳೆ ಅವರು ಮತ್ತೆ ಗೃಹಸ್ಥಾಶ್ರಮಕ್ಕೆ ಬರಲು ಇಚ್ಛಿಸಿದಲ್ಲಿ, ಅವರಿಗೆ ನಿಗದಿಗೊಳಿಸಿದ ಕಾರ್ಯವನ್ನು ಪೂರೈಸಿದ ನಂತರದಲ್ಲಿ ಸಮ್ಮತಿಸಬಹುದು. ಏನೇ ಆದರೂ ಸರ್ವರೂ ಈ "ತ್ಯಾಗಮಯ" ಜೀವನ ಕ್ರಮವನ್ನು ಒಪ್ಪಿಕೊಳ್ಳಬೇಕಾಗಿದೆ.

**ಇದಕ್ಕೆ ಎರಡು ಕಾರಣಗಳಿವೆ ಏಕೆ?**

(1) ಏಕೆಂದರೆ, ನಮ್ಮ ದೈಹಿಕ ಬೇಡಿಕೆಗಳು ಮತ್ತು ಆಸಕ್ತಿಗಳನ್ನೇ ಪೂರ್ವಯೋಜಿತವಾಗಿ ರೂಪಿಸಿಕೊಳ್ಳಲ್ಪಟ್ಟಂತೆ ಇರುವ ಕೆಲವು ಅಂಶಗಳು ಮಾತ್ರ ಈ ಸಂಗತಿಯಾಗಿದೆ. ಇಂದ್ರಿಯ ಸಂತುಷ್ಟಿ, ವಿಷಯಾಭಿಲಾಷೆ, ಲೌಕಿಕ ಜಗತ್ತಿನ ಲಾಲಸೆಗಳು, ಇವೆಲ್ಲವುಗಳ ಮಧ್ಯದಲ್ಲಿ ಸಿಲುಕಿಕೊಂಡೇ ನಮ್ಮ ಅಧ್ಯಾತ್ಮಿಕ ಮಹಾಸಾಗರದಲ್ಲಿ ನಾವು ಪುನಃ ಪಯಣಿಸಲೇಬೇಕಾಗಿದೆ.

(2) ಶಕ್ತಿಯ ಪ್ರಗತಿಯ ಸಲುವಾಗಿ, ಏಕಾಗ್ರಚಿತ್ತರಾಗಬೇಕಿದೆ, ಇದು ಅವಶ್ಯವೂ ಆಗಿದೆ. ಮನಸ್ಸನ್ನು ಸಂಪೂರ್ಣವಾಗಿ ಆ ಒಂದು ಗುರಿಗೆ ಸಮರ್ಪಣ ಮಾಡಿಕೊಳ್ಳಬೇಕಿದೆ. ಯಾವ ರೀತಿ ಒಂದು ಈಟಿಯನ್ನು ಎಸೆದರೆ ಅದು ಗುರಿಯತ್ತ ನೇರವಾಗಿ ಸಾಗುತ್ತದೆಯೋ, ಆ ರೀತಿಯಲ್ಲಿಯೇ ಈ ಸಮರ್ಪಣೆಯು ಇರಬೇಕು. ಒಂದು ವೇಳೆ ಇತರ ಆಸಕ್ತಿಗಳು ಮತ್ತು ಲಾಲಸೆಗಳು ಮನಸ್ಸನ್ನು ವಿಚಲಿತಗೊಳಿಸುತ್ತಿದ್ದಲ್ಲಿ, ಆಗ ಅಲ್ಲಿ ಎಸೆಯಲಾದ ಈಟಿಯೂ ಸಹಿತ ಗುರಿ ತಪ್ಪಿ ಪಥದಿಂದ ದೂರವೇ ಉಳಿದುಬಿಡುತ್ತದೆ. ನಮಗೆ ಅವಶ್ಯವಿರುವದು ಶಕ್ತಿಯ ಪರಮೋಚ್ಚ ಹಂತವನ್ನು ಸಾಧಿಸಿಕೊಂಡ ಮಾನವನ ಮುಖ್ಯ ಕೇಂದ್ರವಾಗುವದು. ಇದೇ ನಮ್ಮ ಅವಶ್ಯಕತೆಯಾಗಿದೆ. ಇಂತಹ ವ್ಯಕ್ತಿಗಳಲ್ಲಿ ಸರ್ವ ದಿಕ್ಕಿನಿಂದಲೂ ಆ ವ್ಯಕ್ತಿತ್ವದಲ್ಲಿ ಶಕ್ತಿ ತುಂಬಿ, ಅದು ಇಡೀ ಭೂಮಂಡಲವನ್ನೇ ಫಲವತ್ತತೆಗೊಳಿಸುವಷ್ಟು ತುಂಬಿ ತುಳುಕುತ್ತಿರುತ್ತದೆ.

ಇವು ಭೂಮಿಯ ಜ್ವಾಲೆಗಳಾಗಿದ್ದು ನಮ್ಮ ಹೃದಯ ಮತ್ತು ಪ್ರಜ್ಞೆಯಲ್ಲಿ ಕಾರ್ಯನಿರತವಾಗಿರುತ್ತವೆ. ಈ ಜ್ವಾಲೆಗಳೇ ಮತ್ತೂ ಮತ್ತೂ ಪ್ರಜ್ವಲನಗೊಳ್ಳುತ್ತ ಪ್ರಗತಿ ಹೊಂದಿ ನಮ್ಮ ನೆಲದ ಮೂಲೆ–ಮೂಲೆಯಲ್ಲೆಲ್ಲ ಪಸರಿಸಿಕೊಳ್ಳುತ್ತವೆ.

**3) ಜ್ಞಾನ – ಒಂದು ಮಹತ್ ಸಂದೇಶ**

ಜ್ಞಾನದ ಆಧಾರವಿಲ್ಲದೇ ಭಕ್ತಿ ಮತ್ತು ಕರ್ಮಗಳು ಎಂದಿಗೂ ಪರಿಪೂರ್ಣತೆಯನ್ನು ಪಡೆಯಲಾರವು. ಚಿರಸ್ಥಾಯಿಯೂ ಆಗಲಾರವು.

ಬ್ರಹ್ಮಚಾರಿಯ ವಿಧಾನದಲ್ಲಿ ಜೀವನವನ್ನು ಆಯ್ಕೆ ಮಾಡಿಕೊಂಡಿರುವವರಿಗೆ, ಅವರ ಆತ್ಮಗಳಲ್ಲಿ ಪರಿಪೂರ್ಣವಾದ ಜ್ಞಾನವನ್ನು ಮತ್ತು ಅದನ್ನೇ ಗಟ್ಟಿಯಾದ ಆಧಾರ ಸ್ವರೂಪದಲ್ಲಿ ಆಧರಿಸಿಕೊಂಡಿರುವದನ್ನು ಕಲಿಸಬೇಕಾಗಿದೆ. ಇವರ ಜ್ಞಾನದ

ಆಧಾರಭೂಮಿಕೆಗಳಾದರೂ ಏನಿರಬೇಕು? ಅದು – ಅದೇ ಮಹತ್ತರವಾದ "ಸೋಹಂ" ಆಗಿರಬೇಕು. ಏಕೆಂದರೆ ವೇದಾಂತದ ಮಹದ್–ಶಕ್ತಿಯುತವಾದ ಸೂತ್ರವೇ ಈ "ಸೋಹಂ" ಆಗಿದೆ. ಇದೊಂದು ಪ್ರಾಚೀನ ಪ್ರಹೇಳಿಕೆಯೂ ಹೌದು. ಇದರ ಮೂಲಕವೇ ರಾಷ್ಟ್ರದ ಆತ್ಮವನ್ನು ಹಾಗೂ ಹೃದಯವನ್ನು ತಲುಪಲು ಸಾಧ್ಯವಿದೆ. ಕರ್ಮ ಮತ್ತು ಭಕ್ತಿಯ ಮೂಲಕ ಸಜೀವಗೊಂಡಿರುವ ಜ್ಞಾನವು ಮಾನವನನ್ನು ಎಲ್ಲ ವಿಧದ ಭಯದಿಂದಲೂ ದೂರ ಮಾಡುತ್ತದೆ ಹಾಗೂ ನಿರ್ವೀರ್ಯತೆಯ ಸ್ಥಿತಿಯಿಂದ ವೀರ್ಯವತ್ತಾದ ಸ್ಥಿತಿಯತ್ತ ಒಯ್ಯುತ್ತದೆ.

**ಶ್ರೀಮಾತೆಯ ಸಂದೇಶ**

ಹೀಗಾಗಿ ನೀವು ಈ "ಭವಾನಿ ಭಾರತೀ"ಯನ್ನು ಯಾವಾಗ ಪ್ರಾರ್ಥಿಸುತ್ತೀರೋ, ಆಗ ಅವಳು ತಾನಾಗಿಯೇ ನಿಮಗೆ, "ನಾನು ಅನಂತಾನಂತವಾದ ಶಕ್ತಿಯಾಗಿದ್ದು, ಆ ಶಾಶ್ವತದ ನೆಲೆಯಿಂದಲೇ ಈ ಜಗತ್ತಿನೆಡೆಗೆ ಹಾಗೂ ನಿಮ್ಮಲ್ಲಿಯೇ ಶಾಶ್ವತವಾಗಿ ನೆಲೆಸಿರುವ ಶಕ್ತಿಯಾಗಿದ್ದೇನೆ" ಎಂದು ಉತ್ತರಿಸುತ್ತಾಳೆ. ನಾನು ಈ ವಿಶ್ವಮಾತೆ, ಲೋಕಮಾತೆ, ನಿಮಗೆ ಅಂದರೆ ಈ ಪವಿತ್ರ ಭೂಮಿಯ ಪುತ್ರರಿಗೆ, ಆರ್ಯಭೂಮಿಯಾಗಿದ್ದೇನೆ. ಏಕೆಂದರೆ ಈ ಆರ್ಯಭೂಮಿ ಅವಳಿಂದಲೇ ರಚಿತಗೊಂಡಿದೆ. ಅವಳಿಂದ ಸೃಷ್ಟಿಗೊಂಡ ಸೂರ್ಯ ಹಾಗೂ ವಾಯುವಿನಿಂದಾಗಿ ಸಜೀವಗೊಂಡಿರುವ, ನಾನು ಭವಾನಿ ಭಾರತೀ, ಭಾರತ ಮಾತೆ ಆಗಿದ್ದೇನೆ ಎಂದು ಉತ್ತರಿಸುತ್ತಾಳೆ.

ಹೀಗಿರುವಾಗ ಭವಾನಿ ಭಾರತಿಯ ಸಲುವಾಗಿ ದೇವಾಲಯದ ಅವಶ್ಯಕತೆ ಯಾಕೆ ಎಂದು ನೀವು ಕೇಳಿದರೆ, ಅವಳ ಉತ್ತರ, ಏಕೆಂದರೆ ನಾನು ಇದನ್ನು ಆದೇಶಿಸಿದ್ದೇನೆ. ಬರಲಿರುವ ಭವಿಷ್ಯದ ಮನುಕುಲದ ಧರ್ಮಕ್ಕಾಗಿ, ಆ ಶಾಶ್ವತದ ನೆಲೆಯಿಂದ ಲಭ್ಯವಿರುವದನ್ನು ರಕ್ಷಿಸುವ ಆಶಯವನ್ನು ನೀವು ತಕ್ಷಣದಲ್ಲಿಯೇ ಈಡೇರಿಸಬೇಕು. ಇದರ ಮೂಲಕ ನೀವು ಈ ಜೀವನದಲ್ಲಿ ಇನ್ನೂ ಬಲಶಾಲಿಯಾಗುವದರ ಜೊತೆಗೆ ಅಲ್ಲಿ ಮತ್ತೊಂದು ಜೀವನದಲ್ಲಿಯೂ ಸಹಿತ ಇನ್ನೂ ಹೆಚ್ಚಿನ ಮಹತ್–ಸಾಧನೆ ಮಾಡುವ ಸಾಮರ್ಥ್ಯವನ್ನು ಹೊಂದುತ್ತೀರಿ, ನೀವು ರಾಷ್ಟ್ರವೊಂದರ ನಿರ್ಮಾಣಕ್ಕಾಗಿ ಸಹಕಾರಿಯಾಗುತ್ತೀರಿ. ಒಂದು ಯುಗವನ್ನು ಏಕತ್ರಗೊಳಿಸುತ್ತೀರಿ. ಜಗತ್ತನ್ನು ಆರ್ಯಮಯಗೊಳಿಸುತ್ತೀರಿ.

ಇದೆಲ್ಲಕ್ಕೂ ಮಿಗಿಲಾಗಿ ಈ ದೇಶವು "ನಿಮ್ಮದೇ" ಆಗಿದೆ. ಈ ಯುಗವೂ ನಿಮ್ಮದೇ ಆಗಿದೆ. ಇದು ನಿಮ್ಮ ಸಂತತಿಯ ಯುಗವೂ ಹೌದು. ಹೀಗಾಗಿ, ಇದು – ಈ ಜಗತ್ತು ಸಾಗರದಿಂದ ಸುತ್ತುವರೆಯಲ್ಪಟ್ಟ ಗುಡ್ಡ–ಬೆಟ್ಟಗಳ ತುಂಡು–ತುಂಡು ರೂಪವಂತೂ ಅಲ್ಲ. ಇಡೀ ಕೋಟ್ಯಾಂತರ ಜೀವಾತ್ಮರಿಂದ ಕೂಡಿದ ಒಕ್ಕೂಟದ ಕೇಂದ್ರವಾಗಿ ಈ ಭೂಮಿಯಾಗುತ್ತದೆ.

ಇದಾದ ಮೇಲೆ, ಇದೀಗ ಮಾತೆಯ ವಾಣಿಯನ್ನು ಕಿವಿಗೊಟ್ಟು ಆಲಸಿರಿ. ಅವಳು ಈಗಾಗಲೇ ನಮ್ಮ ಹೃದಯವಾಸಿಯಾಗಿದ್ದಾಳೆ. ಅಲ್ಲಿ ರೂಪಾಂತರಗೊಳ್ಳಲು ಕಾಯುತ್ತಿದ್ದಾಳೆ. ನೀವು ಅವಳನ್ನು ಆರಾಧಿಸುವದನ್ನೇ ಕಾಯುತ್ತಿದ್ದಾಳೆ. ಇಷ್ಟೆಲ್ಲಾ ಇದ್ದರೂ ಅವಳು ಕರ್ತವ್ಯ ವಿಮುಖಲಾಗಿರುವದಕ್ಕೆ ಕಾರಣವಾದರೂ ಏನು? ನಾವೆಲ್ಲಾ ತಮಸ್ಸಿನಿಂದ ತುಂಬಿಕೊಂಡು ಆ ದೇವತೆಯನ್ನು ಮುಚ್ಚಿಹಾಕಿದ್ದೇವೆ. ಅವಳ ಈ ರೀತಿಯ ನಿಷ್ಕ್ರಿಯತೆಯಿಂದಾಗಿ ತೊಂದರೆ ಅನುಭವಿಸುತ್ತಿರುವದಕ್ಕೆ ಕಾರಣವೆಂದರೆ, ಅವಳ ಮಕ್ಕಳೇ ತಮ್ಮನ್ನು ರಕ್ಷಿಸು ಎಂದು ಅವಳನ್ನು ಆರ್ತತೆಯಿಂದ ಪ್ರಾರ್ಥಿಸಿಕೊಳ್ಳುತ್ತಲೇ ಇಲ್ಲ ಎನ್ನುವದೂ ಇಲ್ಲಿ ಮುಖ್ಯ ಸಂಗತಿಯಾಗಿದೆ.

ಅವಳು ಅಂತರಂಗದಲ್ಲಿಯೇ ಇರುವಳು ಎಂದು ಯಾರು ಯಾರು ಅರಿತುಕೊಂಡಿದ್ದೀರೋ, ನೀವಾದರೂ ನೀವು ನಿಮಗೆ ಆವರಿಸಿಕೊಂಡಿರುವ ಆ ಕಪ್ಪು ಪರದೆಯನ್ನು ಮೊದಲು ಕಿತ್ತೆಸೆಯಿರಿ. ಬಂಧಿಸಲ್ಪಟ್ಟಿರುವ ಆ ಬಂಧನದ ಗೋಡೆಗಳನ್ನು ಕೆಡವಿರಿ. ನಿಮ್ಮಲ್ಲಿ ನೀವೇ ಜಾಗ್ರತರಾಗಿ ಅವಳಿಗೆ ಸಹಕಾರಿಯಾಗಿ. ನಿಮ್ಮ ದೈಹಿಕ ಶಕ್ತಿಯಿಂದ, ನಿಮ್ಮ ಬೌದ್ಧಿಕ ಸಾಮರ್ಥ್ಯ ಅಥವಾ ನಿಮ್ಮ ಧ್ವನಿಪೂರ್ಣ ಮಾತಿನಿಂದ ಅಥವಾ ನಿಮ್ಮ ಸಂಪತ್ತಿನ ಮೂಲಕವಾದರೂ ಅಥವಾ ನಿಮ್ಮ ಪ್ರಾರ್ಥನೆಗಳಿಂದ ಹಾಗೂ ಪೂಜಾ ವಿಧಿ–ವಿಧಾನಗಳಿಂದ ಸಹಕಾರಿಯಾಗಿ. ನಿಮ್ಮ ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸಿ. ಯಾವುದೇ ಕಾರಣಕ್ಕೂ ಇಟ್ಟ ಹೆಜ್ಜೆಯನ್ನು ಹಿಂದೆ ಸರಿಸಬೇಡಿ. ಯಾರು ಮಾತೆಯನ್ನು ಕೇಳುತ್ತಿಲ್ಲವೋ ಹಾಗೂ ಇದನ್ನು ವಿರೋಧಿಸುತ್ತಿದ್ದಾರೋ, ಅಂತಹ ಸಂಗತಿಗಳನ್ನು ಎದುರಿಸುವಾಗಲಂತೂ ಎಂದಿಗೂ ಹಿಂಜರಿಯಬೇಡಿ. ಯಾರು ಕೇಳಲಿ ಬಿಡಲಿ, ಅವಳು ಮಾತ್ರ ಅವಳ ಆಗಮನದ ದಿನದಲ್ಲಿ ಅರ್ಹ ಕೊಡುಗೆಗಳೊಂದಿಗೇ ಬರುತ್ತಾಳೆ. ಅವಳ ಆಗಮನಕ್ಕಾಗಿ ಕಿಂಚಿತ್ ಸೇವೆ ಸಲ್ಲಿಸುವವನಿಗೂ ಸಹಿತ, ಆಗಲೂ ದೇವಿಯ

ದಯಾಳುತನದ ಹಾಗೂ ದೇವ ಸೌಂದರ್ಯದ ದೀಪ್ತಿಮಯ ಕಾಂತಿಯ ಆಶೀರ್ವಾದ ಇದ್ದೇ ಇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/79–89**

**ಪುನರುತ್ಥಾನದ ಮೂರು ಹಂತಗಳು**

ಪುನರುತ್ಥಾನದ ಘಟನೆಯನ್ನು ತಪ್ಪಿಸಲು ಸಾಧ್ಯವೇ ಇಲ್ಲ. ಅದಕ್ಕಾಗಿಯೇ ಎಲ್ಲ ಪ್ರಕ್ರಿಯೆಗಳೂ ಪ್ರಾರಂಭಗೊಂಡಿವೆ. ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕಿದೆ ಅಷ್ಟೇ. ಇವು ಐತಿಹಾಸಿಕವೂ ಹೌದು, ತರ್ಕಬದ್ಧವೂ ಆಗಿವೆ. ಇವೆಲ್ಲವೂ ಮೂರು ಹಂತಗಳಲ್ಲಿ ನಿರ್ವಹಿಸಲ್ಪಡುತ್ತಿವೆ. ಜಟಿಲತೆಯನ್ನು ಕಿತ್ತೆಸೆಯುವ, ಪುನರ್–ಸಂಯೋಜನೆಗೊಳ್ಳುವ ಮೂಲಕ ಹೊಸ ರಚನೆಯ ಮತ್ತು ಫಲಿತಾಂಶದಲ್ಲಿ ಮತ್ತೂ ಮತ್ತೂ ಭಿನ್ನವಾಗಿರುವ ಪೂರ್ವ ನಿರೀಕ್ಷಣೆಯ ಹಂತದಲ್ಲಿ, ಈಗಾಗಲೇ ಅಲ್ಲೊಂದು ಇಲ್ಲೊಂದು ಎನ್ನುವಂತೆ ಈ ಘಟನೆಯ ಪ್ರಥಮ ಹಂತವು ನಡೆದಿದೆ. ಪ್ರಾಚೀನ ಸಂಸ್ಕೃತಿಯ ರೂಪಾಂತರಣದಲ್ಲಿ ಹೊಸ ಯುಗವು ಪ್ರಾರಂಭಗೊಂಡಾಗಿದೆ. ಆದರೆ ಇದು ನವೋದಿತವಾಗಿರುವ ನಾಗರಿಕತೆಯ ಜೊತೆಗೆ ಸಂಲಗ್ನಗೊಂಡಿಲ್ಲ. ಏಕೆಂದರೆ ಅದನ್ನು ಹಳೆಯ, ಮೃತಪ್ರಾಯವಾಗಿರುವ ಸಂಗತಿ ಎಂದು ಈ ನವೋದಿತ ನಾಗರಿಕತೆ ಪರಿಗಣಿಸಿದೆ. ನಿಜವಾದ ಪುನರ್ಜನ್ಮ ಎಂದರೆ ಅದು. – ಪುರುಜ್ಜೀವನಗೊಳ್ಳುವದೇ ಆಗಿದೆ.

ಇಲ್ಲಿ ಈ ಪ್ರಥಮ ಹಂತವು, ಯುರೋಪಿಯನ್ನ ಚಿಂತಗಳ ಸಂಪರ್ಕದಿಂದಾಗಿ ರೂಪಿತಗೊಂಡಿದೆ. ಇದು ಅತ್ಯಂತ ಮಹತ್ವಪೂರ್ಣವಾದ ಅಂಶಗಳ ಆಮೂಲಾಗ್ರ ಪುನರ್–ಪರಿಶೀಲನೆ ಹಾಗೂ ಕೆಲವು ಕ್ರಾಂತಿಕಾರೀ ಧೋರಣೆಯಲ್ಲಿಯೇ – ಪ್ರಾಚೀನ ಸಂಸ್ಕೃತಿಯ ಬಹುತೇಕ ತತ್ತ್ವಗಳನ್ನು ತಿರಸ್ಕಾರ ಮಾಡಿತ್ತು.

ಇನ್ನು ಎರಡನೇ ಹಂತದಲ್ಲಿ, ಈ ಯುರೋಪಿಯನ್ನ ಪ್ರಭಾವದ ಮೇಲೆ ಭಾರತೀಯ ಶಕ್ತಿಯ ಪ್ರತಿಕ್ರಿಯೆ. ಕೆಲವೊಮ್ಮೆ ಒಟ್ಟೊ ವ್ಯವಸ್ಥೆಯನ್ನು ನಿರಾಕರಿಸಿ (ಬಹಿಷ್ಕರಿಸಿ) ಅದು ಕೊಡುತ್ತಿರುವ ಎಲ್ಲವನ್ನೂ ನಿರಾಕರಿಸಿ, ಅವಶ್ಯಕತೆಯನ್ನೂ ಸಹಿತ ಅದುಮಿ, ರಾಷ್ಟ್ರದ ಪ್ರಾಚೀನ ವ್ಯವಸ್ಥೆಗೆ ಬಂಧಿಯಾಗಿರುವಂತೆ ಮಾಡುವದಾಗಿದೆ.

ಮೂರನೆಯದಾಗಿ, ಅದು ತೀರ ತೀರ ಇತ್ತೀಚಿಗೆ ಪ್ರಾರಂಭಗೊಂಡಿದೆ. ಇದು ಹೊಸ ವ್ಯವಸ್ಥೆಯ ಪ್ರಕ್ರಿಯೆಯಾಗಿದ್ದು, ಇಲ್ಲಿ ಭಾರತೀಯ ಅಧ್ಯಾತ್ಮಿಕ ಮನೋಭೂಮಿಕೆಯೇ ಪರಮೋಚ್ಚ ಸ್ಥಾನದಲ್ಲಿ ಇರುತ್ತದೆ. ಸತ್ಯವನ್ನು ಪುನರ್–ಪ್ರತಿಷ್ಠಾಪಿಸುತ್ತದೆ. ಯಾವುದು ಸತ್ಯವೋ, ಸಮರ್ಥನೀಯವೋ ಅದನ್ನು ಒಪ್ಪಿಕೊಳ್ಳುತ್ತದೆ. ಆಧುನಿಕ ಚಿಂತಗಳಲ್ಲಿ ಸಹಾಯಕವಾದುದನ್ನು ಸ್ವೀಕರಿಸುತ್ತದೆ. ಏಕೆಂದರೆ ಆಧುನಿಕ ವ್ಯವಸ್ಥೆಯಲ್ಲಿ ಇರುವ ಅನಿವಾರ್ಯವಾದ ಸಂಗತಿಯಾಗಿರುತ್ತದೆ. ಆದರೆ ಎಲ್ಲವನ್ನೂ ಸಂಪೂರ್ಣ ಭಾರತೀಯ ವ್ಯವಸ್ಥೆಗೇ ರೂಪಾಂತರಣ–ಗೊಳಿಸಿಕೊಳ್ಳುತ್ತದೆ. ಅದನ್ನು ಸಂಪೂರ್ಣವಾಗಿ ಆವಾಹನೆ ಮಾಡಿಕೊಳ್ಳುತ್ತದೆ. ಜೊತೆಗೆ ಅದನ್ನು ಅದರದೇ ಅಸ್ಮಿತೆಯಲ್ಲಿ ಪುನರ್–ರೂಪಗೊಳಿಸುತ್ತದೆ. ಅದರಲ್ಲಿ ಅಡಕವಾಗಿರುವ ಅನ್ಯ, ಬಾಹ್ಯ ಗುಣಗಳನ್ನು ಹೋಗಲಾಡಿಸಿ, ಮತ್ತೊಂದು ಸಾಮಂಜಸ್ಯದಿಂದ ಕೂಡಿರುವ ಅಂದವಾಗಿರುವಂತೆ ಮಾಡುತ್ತದೆ. ಜೊತೆಗೆ ಅದೇ ಗುಣ ಲಕ್ಷಣಗಳಲ್ಲಿ ಪ್ರಾಚೀನ ದೇವತೆಗಳೊಂದಿಗೂ ಕಾರ್ಯ ನಿರ್ವಹಿಸುವಂತೆ ಪರಿವರ್ತಿಸುತ್ತದೆ. ಇವೆಲ್ಲವನ್ನೂ ಭಾರತದ ಈ ಶಕ್ತಿ (ಮಾತೆ) ನಿರ್ವಹಿಸುತ್ತಾಳೆ. ಆಧುನಿಕ ಪ್ರಭಾವವನ್ನು ತನ್ನ ಸುಪರ್ದಿಗೇ ತೆಗೆದುಕೊಳ್ಳುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/17**

## ರಾಷ್ಟ್ರವಾದ

"ಹಿಂದೂ ರಾಷ್ಟ್ರ" ಎನ್ನುವ ಪರಿಕಲ್ಪನೆ ಶಿವಾಜಿ ಮತ್ತು ಸಮರ್ಥ ರಾಮದಾಸರ ಅವಧಿಯಲ್ಲಿ ರೂಪುಗೊಂಡಿದೆ. ಆಗ ಅದಕ್ಕೊಂದು ಅರ್ಥವೂ ಇತ್ತು. ಆಗ ಇಡೀ ರಾಷ್ಟ್ರವು ಮಹಮ್ಮದೀಯ ಪ್ರಭುತ್ವದಲ್ಲಿ ಸಿಲುಕಿಕೊಂಡಿದ್ದು, ಭಾರತದ ರಾಷ್ಟ್ರೀಯತೆಯ ವಿಷಯವು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿತ್ತು. ಆ ಅವಧಿಯಲ್ಲಿ ಭಾರತದ ಏಕತೆಗೆ, ಅದರ ಆಶಯಕ್ಕೆ, ಆಗಿನ ಆಡಳಿತ ವ್ಯವಸ್ಥೆಯ ದಮನಕಾರೀ ನೀತಿಯಿಂದಾಗಿ ಹಾಗೂ ಸದಾ ಅಡೆ–ತಡೆಗಳ ಮಧ್ಯದಲ್ಲಿಯೇ ತತ್ತರಿಸುತ್ತಿತ್ತು. ಈ ರೀತಿಯ ಸ್ಥಿತಿಯು ನಿರ್ಮಾಣಗೊಳ್ಳಲು ಕಾರಣವಾಗಿದ್ದು, ಆ ಸಂದರ್ಭದಲ್ಲಿಯೇ ಭಾರತದ ಅಸ್ತಿತ್ವವೂ ಸಹಿತ ಹಿಂದೂ ಮತ್ತು ಮುಸ್ಲಿಂ ಎನ್ನುವ ಎರಡು ಭೌಗೋಳಿಕ ಆಯಾಮಗಳನ್ನು ಪಡೆದುಕೊಂಡ ಸ್ಥಿತಿಯಲ್ಲಿ ಇತ್ತು. ಹಿಂದೂ ಭಾಗದಲ್ಲಿ ಮಹಾರಾಷ್ಟ್ರ ಹಾಗೂ ರಾಜಪುತಾನ್(ರಾಜಸ್ಥಾನ)ಗಳು ಆಧಾರವಾಗಿದ್ದವು. ಮಹಮ್ಮದೀಯ ದಬ್ಬಾಳಿಕೆಯು ಇಡೀ ಭಾರತೀಯ ಸಂಸ್ಕೃತಿಗೆ

ಮಾರಕವಾಗಿರುವದನ್ನು ಕಂಡು, ಅದನ್ನು ತಡೆಯಲು, ಅಂತಹ ವ್ಯವಸ್ಥೆಗೆ ಕಾರಣವಾಗಿರುವದನ್ನು ತಡೆಯಲು ಹಾಗೂ ಶಿಕ್ಷಿಸುವ ಮೂಲಕ, ಹಿಂದೂ ಮುಂದಾಳ್ತನದ ಆಳ್ವಿಕೆಯ ಮೂಲಕ ಆ ದಬ್ಬಾಳಿಕೆಗಳನ್ನು ನಿಯಂತ್ರಿಸುವದಾಗಿತ್ತು. ಅದು ಆ ಕಾಲದ ಅವಶ್ಯಕತೆಯೂ ಆಗಿದ್ದುದರಿಂದ ಅದು ಸಾಧ್ಯವೂ ಆಯಿತು.

ಆದರೆ ಇಂದಿನ ಆಧುನಿಕ ವ್ಯವಸ್ಥೆಯಲ್ಲಿ ಭಾರತವು ಏಕೈಕ ಘಟಕವಾಗಿರುವಂತೆಯೇ ಇದ್ದರೆ ಮಾತ್ರ ಉಳಿಯಬಲ್ಲದು. ಭೌಗೋಳಿಕವಾಗಿರುವ ಭಾಗಗಳಿಂದಾಗಿ, ಭೌಗೋಳಿಕವಾಗಿಯೇ ಇರುವ ಸುಸಂಹಿತೆಯನ್ನು ಒಂದು ರಾಷ್ಟ್ರವು ಅವಲಂಬಿಸಿರುತ್ತದೆ. ಈ ಮೂಲಕವೇ ಒಂದು ನಿಗದಿತವಾದ ಹಾಗೂ ತನ್ನದೇ ಆದ ದೇಶದ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ಭೌಗೋಳಿಕವಾಗಿರುವ ಭಾಗಗಳು ನೈಜವಾಗಿವೆ; ಏಕೆಂದರೆ ಜನ ಸಮುದಾಯ, ಭಾಷೆ, ಧರ್ಮ, ಮತ, ಇತಿಹಾಸ ಎಲ್ಲದರಲ್ಲಿಯೂ ತಮ್ಮದೇ ಆದ ಅಸ್ಮಿತೆಯನ್ನು ಆಯಾ ಭಾಗಗಳು ಹೊಂದಿರುತ್ತವೆ. ಈ ರೀತಿಯ ಘಟನೆಗಳು ಹೆಚ್ಚಾಗಿ ಬ್ರಿಟನ್, ಸ್ವಿಝರ್–ಲ್ಯಾಂಡ್ ಮತ್ತು ಜರ್ಮನಿಯಲ್ಲಿ ಘಟಿಸಿವೆ. ಇದೇ ರೀತಿಯಲ್ಲಿ ಭಾರತದಲ್ಲಿಯೂ ಸಹಿತ ಘಟಿಸಿದೆ. ಆದರೆ ಇಲ್ಲಿ (ಭಾರತದಲ್ಲಿ) ಭೌಗೋಳಿಕ ಸಂಯೋಜನೆಯೂ ಅಷ್ಟೇ ಮಹತ್ವದ್ದಾಗಿದೆ.

ಇದನ್ನೇ ಬೇರೆ ಮಾತುಗಳಲ್ಲಿ ಹೇಳಬಹುದಾದಲ್ಲಿ, ಒಂದು "ದೇಶ" ಅಥವಾ ಒಂದು "ರಾಷ್ಟ್ರ"ವು ಪರಸ್ಪರ ಸಂವಹನದ ಸಲುವಾಗಿ ಅತ್ಯಂತ ನಿಕಟವರ್ತಿ–ಯಾಗಿರಬೇಕು. ಆವಾಗಲೇ, ಕೇಂದ್ರ ಸರಕಾರದ ವ್ಯವಸ್ಥೆಯ ಆಡಳಿತವು ಅತ್ಯಂತ ಸುಲಭದಲ್ಲಿ ನಿರ್ವಹಿಸಲ್ಪಡುತ್ತದೆ. ಇಲ್ಲದಿದ್ದಲ್ಲಿ, ಇದು ಬಹುತೇಕವಾಗಿ ತುಂಬ ಕಠಿಣತಮ ಸಂದರ್ಭಗಳನ್ನು ಎದುರಿಸುವ ಪ್ರಸಂಗಕ್ಕೆ ಸಿಲುಕುತ್ತದೆ.

ಇಂತಹ ನಿಕಟತಮ ವ್ಯವಸ್ಥೆಯು ಇಲ್ಲದಿದ್ದಲ್ಲಿ ಏನಾಗುತ್ತದೆ ಎನ್ನುವದನ್ನು ಸಾಮ್ರಾಜ್ಯಗಳು ಪತನಗೊಂಡು ಚೂರು–ಚೂರಾಗಿ ಸಿಡಿದುಹೋಗಿರುವ ಅನೇಕ ಉದಾಹರಣೆಗಳು ಸಾಕ್ಷಿ ಒದಗಿಸುತ್ತಿವೆ. ಅವರು ಅಜರಾಮರವಾಗಿರುವ ಹಾಗೂ ಎಂದಿಗೂ ಬಾಧನೆಗೆ ಒಳಪಡದ "ರಾಷ್ಟ್ರೀಯ ಆತ್ಮಪ್ರಜ್ಞೆ"ಯ ಬೆಂಬಲವನ್ನು ಪಡೆದುಕೊಂಡಿರಲಿಲ್ಲ. ಆ ಏಕೈಕ ಪ್ರಜ್ಞೆಯು ಮಾತ್ರ ಸ್ಥಾಯಿತ್ವವನ್ನು ಖಾತ್ರಿಗೊಳಿ–ಸುತ್ತದೆ. ಇದೇ ತೆರನಾಗಿ, ಬ್ರಿಟೀಷ್ ಇಂಪೀರಿಯಲ್ ಫೆಡರೇಶನ್, ಇಂತಹದೇ ತೊಂದರೆಯನ್ನು ಎದುರಿಸುವಂತಾಯಿತು. ಮೇಲ್ನೋಟಕ್ಕೆ ಕಂಡುಬರುವ ಈ ತಾತ್ಕಾಲಿಕ ವಾಂಛೆಯ ವಿಜಯಗಳು ಯಾವಾಗಲೂ ಪತನದೆಡೆಗೇ ಶೀಘ್ರವಾಗಿಯೇ

ಚಲಿಸುತ್ತಿರುತ್ತವೆ, ಆ ಮೂಲಕ ಸಾಮ್ರಾಜ್ಯವನ್ನು ಪತನಗೊಳಿಸುತ್ತವೆ. ಇದಕ್ಕೆ ಪೂರಕವಾಗಿ, ಈ ಭೌಗೋಳಿಕ ವೈವಿಧ್ಯತೆ ಹಾಗೂ ಭೌಗೋಳಿಕ ಸಂಪರ್ಕ–ಸಂವಹನ–ನಿಕಟತೆಗಳನ್ನು ಅವುಗಳ ಅನುಕೂಲಕರ ಪರಿಸ್ಥಿತಿಯನ್ನು ನಿರ್ವಹಿಸಿ–ಕೊಂಡು ಹೋಗಲು ಒಂದು ಸಮರ್ಥಶೀಲವಾದ ಒಕ್ಕೂಟ ವ್ಯವಸ್ಥೆ ಬೇಕಾಗುತ್ತದೆ. ಇಲ್ಲವೇ ಒಂದು ಪ್ರಜ್ಞಾವಂತ ಹಾಗೂ ಕೌಶಲ್ಯಪೂರ್ಣವಾದ ಕಾರ್ಯಕ್ಷಮತೆಯಿಂದ ಯೋಜಿತಗೊಂಡ, ಸಂಯೋಜಿತವಾಗಿರುವ, ಪಟ್ಟುಹಿಡಿದು ಕಾರ್ಯ ಸಾಧಿಸುವ ಮೂಲಕ ಲೋಕೋಪಕಾರಗೈಯುವ, ಯಾವುದೇ ಪಕ್ಷಪಾತವಿಲ್ಲದೇ ನಡೆದುಕೊಳ್ಳುವ ಮತ್ತು ರಾಷ್ಟ್ರೀಯ ಪ್ರಜ್ಞೆಯೊಂದಿಗೆ ಏಕತೆಯನ್ನು ಸಾಧಿಸುವ ಸರಕಾರದ ವ್ಯವಸ್ಥೆಯೊಂದು ಅವಶ್ಯವಾಗಿರುತ್ತದೆ. ಅಥವಾ ಜೀವಂತವಾಗಿರುವ ರಾಷ್ಟ್ರೀಯ ಸಂವೇದನೆಯನ್ನು ಪಾವನ ಸ್ವರೂಪದೊಂದಿಗೆ ಹಾಗೂ ಸ್ವಯಂ–ಸಾಕ್ಷಾತ್ಕಾರಗೊಳ್ಳುವ ಸೂಕ್ಷ್ಮ ಸಂವೇದನೆಯನ್ನು ಅಳವಡಿಸಬೇಕಾಗಿದೆ.

ಇವೆಲ್ಲವೂ ಭಾರತೀಯ ರಾಷ್ಟ್ರೀಯತೆಗೆ ಅತ್ಯಾವಶ್ಯವಾಗಿರುವ ಸಂಗತಿಗಳಾಗಿವೆ. ಭೌಗೋಳಿಕ ವೈವಿಧ್ಯತೆ, ಭೌಗೋಳಿಕ ಸಂಯೋಜನೆ, ಹೊಂದಾಣಿಕೆ, ಸಂಪರ್ಕ–ಸಂವಹನಗಳು ರಾಷ್ಟ್ರದ ಜಾಗ್ರತ ಆತ್ಮದ ಸಂಕೇತಗಳಾಗಿರುತ್ತವೆ. ಇವುಗಳಲ್ಲಿ ಪ್ರಪ್ರಥಮ ಸ್ಥಾನದಲ್ಲಿರುವದು "ರಾಷ್ಟ್ರೀಯತೆಯು ಯಾವಾಗಲೂ ನಮ್ಮದೇ" ಆಗಿದ್ದು, ಪ್ರಾಚೀನ ಕಾಲದಿಂದಲೂ ಭಾರತದ ಜನತೆಯನ್ನು ಒಂದು ವಿಶಿಷ್ಟತೆಯಲ್ಲಿಯೇ ಗುರುತಿಸಲ್ಪಟ್ಟಿದೆ.

ಇನ್ನು ಎರಡನೆಯ ಸಂಗತಿಯನ್ನು ನಾವು ಬ್ರಿಟೀಷ ಆಡಳಿತ ವ್ಯವಸ್ಥೆಯಿಂದ ಪಡೆದುಕೊಂಡಿದ್ದೇವೆ. ಮತ್ತೆ ಮೂರನೆಯದನ್ನು – ಅಂದರೆ ಜಾಗ್ರತ ಆತ್ಮವು–ತಾನೇ ತಾನಾಗಿ ಚಿಗುರೊಡೆದು ಅಸ್ತಿತ್ವಗೊಳ್ಳುವದಾಗಿದೆ.

ಆದರೆ ಮುಖ್ಯವಾಗಿ, ಅದರಲ್ಲೂ ಈ 'ಸ್ವದೇಶವು' ರಾಷ್ಟ್ರೀಯತೆಯ ಮೂಲಭೂತವಾಗಿರುವ ಆಧಾರವಾಗಿರಬೇಕಾಗಿದೆ. ಭಾರತದಲ್ಲಿ, ಹಿಂದೂ ಮತ್ತು ಮುಸ್ಲೀಂ ಸಮುದಾಯಗಳೆರಡೂ ಪರಸ್ಪರ ಹೊಂದಿಕೊಂಡೇ, ಅಕ್ಕಪಕ್ಕದಲ್ಲಿಯೇ ಜೀವಿಸುತ್ತಿದ್ದಾರೆ. ಹೀಗಿರುವಾಗ, ಹಿಂದೂ ರಾಷ್ಟ್ರೀಯವಾದಕ್ಕೆ ಇರುವ ಭೌಗೋಳಿಕ ಅವಸ್ಥೆ–ವ್ಯವಸ್ಥೆಯಾದರೂ ಏನು? ಮಹಾರಾಷ್ಟ್ರ ಮತ್ತು ರಾಜಸ್ಥಾನಗಳೂ ಸಹಿತ ದೀರ್ಘ ಕಾಲದಲ್ಲಿ ತಮ್ಮದೇ ಆದ ಭೌಗೋಳಿಕ ವಲಯಗಳಾಗಿಯೇ ಮುಂದು–ವರೆಯಲಿಲ್ಲ. ಅದೇ ದೇಶದ ಒಂದು ಪ್ರಾಂತೀಯ ವಿಭಾಗದಲ್ಲಿ ಗುರುತಿಸಲ್ಪಟ್ಟವು.

ಇಲ್ಲಿ ಪ್ರಮುಖವಾಗಿ ಹಿಂದೂ ರಾಷ್ಟ್ರೀಯವಾದಕ್ಕೆ ಅವಶ್ಯವಾಗಿರುವ ಸಂಗತಿ ಎಂದರೆ ಅದಕ್ಕಿರುವ ಅನುಪಸ್ಥಿತಿ. ಮಹಮ್ಮದೀಯರು ತಮ್ಮದೇ ಆದ ಪ್ರತ್ಯೇಕತೆಯ ಭಾವನೆಗೆ ಬದ್ಧರಾಗಿದ್ದು, ಅವರು ಎಂದಿಗೂ ತಮ್ಮನ್ನು ಮೊದಲು ಭಾರತೀಯ ತದನಂತರದಲ್ಲಿ ಮಹಮ್ಮದೀಯ ಎಂದು ಹೇಳಲು ಸಿದ್ಧರಿಲ್ಲ. ಈಗ ಅಸ್ತಿತ್ವದಲ್ಲಿರುವ ಬೃಹತ್–ಮುಸ್ಲಿಂ ರಾಷ್ಟ್ರಗಳ ಜೊತೆಗೆ ತಾವು ಅತೀ ಸಮೀಪ ಸಂಬಂಧಿಗಳು ಎನ್ನುವ ಧೋರಣೆಯಲ್ಲಿಯೇ ಇದ್ದಾರೆ. ಇದು ನಮ್ಮದೇ ದೇಶದ ಮಣ್ಣು – ನಮ್ಮದೇ ರಕ್ತವನ್ನು ಹೊಂದಿದ್ದರೂ ಸಹಿತ, ನಮ್ಮೊಡನೇ ಇದ್ದರೂ ಸಹಿತ, ಅವರು ಇದನ್ನು ಒಪ್ಪಿಕೊಳ್ಳುತ್ತಿಲ್ಲ.

ಆದರೆ ಹಿಂದೂಗಳಿಗೆ ಇಂತಹ ಬೇರೆ ಯಾವುದೇ ಅವಕಾಶಗಳ ಮೂಲಗಳು ಇಲ್ಲವೇ ಇಲ್ಲ. ಒಳ್ಳೆಯದಕ್ಕೇ ಆಗಲಿ ಅಥವಾ ಕೆಟ್ಟದ್ದಕ್ಕೇ ಆಗಲಿ, ಅವರು ಈ ಮಣ್ಣಿಗೇ ಜವಾಬ್ದಾರರಾಗಿದ್ದಾರೆ. ಅವರು ಎಂದಿಗೂ ಇದನ್ನು ತಿರಸ್ಕರಿಸುವದೂ ಇಲ್ಲ. ಅವರು ಎಂದಿಗೂ ತಮ್ಮ ಮಾತೆಯನ್ನು ತಿರಸ್ಕರಿಸುವದಿಲ್ಲ. ಅವಳನ್ನು ಎಂದಿಗೂ ಕತ್ತರಿಸುವದಿಲ್ಲ. ಹೀಗಾಗಿ ನಮ್ಮ ಚಿಂತನವು ಭಾರತೀಯ ರಾಷ್ಟ್ರವಾದವಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಅದು ಆತ್ಮಿಕವಾಗಿ ಹಾಗೂ ಸಂಸ್ಕೃತಿಯಿಂದಾಗಿ "ಹಿಂದೂ" ಇದೆ. ಏಕೆಂದರೆ ಈ ದೇಶವು ಹಿಂದೂಗಳಿಂದಲೇ ರಚಿಸಲ್ಪಟ್ಟಿದೆ. ಈ ಜನಾಂಗವೂ ಇದರಿಂದಲೇ ಸೃಷ್ಟಿಸಲ್ಪಟ್ಟಿದೆ. ಅದರ ಅಸ್ತಿತ್ವವೂ ಸಹಿತ ಇದೆ. ತನ್ನ ಇತಿಹಾಸದ ಗರಿಮೆ ಹಾಗೂ ಘನತೆಯಿಂದಾಗಿ, ಅವನ (ಹಿಂದೂವಿನ) ನಾಗರಿಕತೆಯು ಮತ್ತು ಸಂಸ್ಕೃತಿಯು ಹಾಗೂ ವೈವಿಧ್ಯತೆಯನ್ನು ಸದಾ ಎತ್ತಿ ಹಿಡಿಯುತ್ತಿದ್ದು, ಜೊತೆ ಜೊತೆಗೇ ಮುಸ್ಲಿಂ ಸಮುದಾಯವನ್ನೂ ಸಹಿತ ಒಳಗೊಳ್ಳುವಂತೆ ರೂಪಗೊಂಡು, ಸಾಂಸ್ಕೃತಿಕ ಹಾಗೂ ಪಾರಂಪರಿಕ ವ್ಯಸವಸ್ಥೆಯನ್ನು ಸ್ವೀಕರಿಸಿಕೊಂಡು, ತನ್ನಲ್ಲಿಯೇ ಅಂತರ್ಗತಗೊಳಿಸಿಕೊಂಡಿದೆ.

ಬರಲಿರುವ ಭವಿಷ್ಯದ ಘಟನೆಗಳ ಕುರಿತು ಮುಸ್ಲಿಂ ಅದನ್ನು ಗುರುತಿಸಲು ಸಾಧ್ಯವಾಗದಿದ್ದರೂ, ತನ್ನನ್ನು ತಾನೇ ಮತ್ತೆ ವಿರೋಧದ ನೆಲೆಯಲ್ಲಿಯೇ ಇರುವಂತೆ ತಳ್ಳಿಕೊಳ್ಳುತ್ತಾನೆ. ಅದನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ ಕೂಡ.

ಹೀಗಿರುವ ಪ್ರಸಂಗದಲ್ಲಿ, ಹಿಂದುವು, ಮಹಮ್ಮದೀಯನ ಅಲ್ಪ ಸಹಾಯವು ಸಿಕ್ಕರೂ ಸಹಿತ ಪಡೆದುಕೊಳ್ಳಬಹುದು. ಈ ಮೂಲಕ "ಸ್ವರಾಜ"ವನ್ನು ಅವನು (ಹಿಂದುವು) ಆ ಮಹಮ್ಮದೀಯನ ಸಂಗಡವೇ ಗೆಲ್ಲಬೇಕಾಗಿದೆ. ಪಡೆದುಕೊಳ್ಳಬೇಕಾಗಿದೆ. ಅವರ ವಿರೋಧವನ್ನು ಮುಂದುವರೆಸಿಕೊಂಡು ಹೋಗುವದಕ್ಕಿಂತ ಇದು ಉತ್ತಮ ಮಾರ್ಗವಾಗಿದೆ.

ನಮ್ಮಲ್ಲಿ ಅಪಾರ ಪ್ರಮಾಣದ ಜನಶಕ್ತಿ ಇದೆ; ಸಾಮರ್ಥ್ಯವೂ ಇದೆ. ಇದರ ಮೂಲಕ ಮತ್ತೂ ಮಹತ್ತರವಾದುದನ್ನು ಹಾಗೂ ಕಠಿಣತಮವಾಗಿರುವ ಯೋಜನೆಯನ್ನು ಪೂರೈಸಿಕೊಳ್ಳಲು ಸಾಧ್ಯವಿದೆ. ಆದರೆ ಮೊದಲು ನಾವು ಏಕತೆಯಿಂದ ದೂರವುಳಿದಿದ್ದೇವೆ; ಸೋದರ ಭಾವನೆಯಿಂದಲೂ ದೂರವಿದ್ದೇವೆ. ನಮ್ಮನಮ್ಮಲ್ಲಿಯೇ ವೈಯಕ್ತಿಕವಾದ, ಅದರಲ್ಲೂ ವ್ಯಕ್ತಿಗತವಾದ ಕ್ರಿಯೆಗಳಿಗೆ ಮಾತ್ರ ಬಂಧಿತರಾಗಿದ್ದೇವೆ. ಹೀಗಾಗಿ ಐಕ್ಯತೆಗಾಗಿ ನಾವು ಇದೀಗ ಕಾರ್ಯಪ್ರವೃತ್ತರಾಗ–ಬೇಕಾಗಿದೆ. ಸಹೋದರತ್ವದ ಭಾವನೆಯನ್ನು ಅಳವಡಿಸಿಕೊಳ್ಳುವಂತೆ, ಹಾಗೂ ಇವೆಲ್ಲ ಕೆಲಸವನ್ನೂ "ಹಿಂದೂ ಸಭ"ವು ಸಮಗ್ರ ಪ್ರಯತ್ನಗಳ ಮೂಲಕ ಇದನ್ನು ನಿರ್ದೇಶಿಸಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/304–06**

## ನಮ್ಮ ಮುಂದಿರುವ ಸವಾಲು

ಅಪಾರ ಪ್ರಮಾಣದ ಕಾರ್ಯವನ್ನು ನಿನ್ನಲ್ಲಿ ನೀನೇ ಕೈಕೊಳ್ಳುವದರ ಅವಶ್ಯಕತೆ ಇದೆ. ನಿನ್ನ ಸಂಪೂರ್ಣ ಮಾನವ ಸ್ವಭಾವವನ್ನು ದೇವ ಸ್ವಭಾವವನ್ನಾಗಿಸಿ ಪರಿವರ್ತಿಸಿಕೊಳ್ಳಬೇಕಾಗಿದೆ. ಶತಶತಮಾನಗಳ ಕಾಲದಿಂದಲೂ ಘಟಿಸುತ್ತ ಬಂದು ದಟ್ಟೈಸಿರುವ ವಿಕಸನವನ್ನು ಕೆಲವೇ ಕೆಲವು ವರ್ಷಗಳಲ್ಲಿ ಕಾಣಬೇಕಾಗಿದೆ. ನೀನು ಯಾವ ಕಾರಣಕ್ಕೂ ಸಮಯವನ್ನು (ಕಾಲವನ್ನು) ದೂಷಿಸುವಂತಿಲ್ಲ. ಅದರ ಮೇಲೆ ದ್ವೇಷವನ್ನು ಸಾಧಿಸುವಂತಿಲ್ಲ. ಶೀಘ್ರದಲ್ಲಿಯೇ ಫಲಿತಾಂಶಗಳನ್ನು ನೀಡುವ ಹಲವು ಪಥಗಳು ಮುಕ್ತವಾಗಿಯೇ ಇವೆ. ಅಥವಾ, ಯಾವುದೇ ಕಾರಣಕ್ಕೂ ಒಂದು ನಿಗದಿಪಡಿಸಲ್ಪಟ್ಟ 'ನಿರ್ದಿಷ್ಟವಾದ ಕ್ರಿಯೆ'ಯಿಂದಾಗಿ, ನಿನ್ನ ಸಲುವಾಗಿ ನೀನೇ ಕಾರ್ಯ ಮಾಡಿಕೊಳ್ಳುವದರ ಮೂಲಕ, ನಿನ್ನ 'ಅಹಂಕಾರ'ವನ್ನು ತ್ಯಜಿಸಬೇಕಾಗಿದೆ. ಅಂದರೆ ನೀನು ಏನನ್ನೋ ಮಾಡುತ್ತಿದ್ದೇನೆ ಎನ್ನುವ ನಿನ್ನ 'ಅಹಂಭಾವ'ವನ್ನು ತ್ಯಜಿಸಬೇಕಾಗಿದೆ. ಮತ್ತೂ ಹೆಚ್ಚಿನ ಸಂಖ್ಯೆಯ 'ಪ್ರಾಣಾಯಾಮಗಳು', ಮತ್ತೂ ಅಧಿಕ 'ಆಸನಗಳು', ಮತ್ತೆ ಮತ್ತೂ ದೀರ್ಘವಾದ 'ಅನುಷ್ಠಾನ', 'ಜಪ'ಗಳನ್ನು ಹತ್ತು ಹಲವು ಬಾರಿ ಪುನರಾವರ್ತನಗೊಳಿಸುವದು. ಇವೆಲ್ಲವನ್ನು ಮಾಡಿದ್ದರೂ, ಆಗ ಅಷ್ಟೇ ಪ್ರಮಾಣದ ಪ್ರಗತಿಯೂ ಗುರುತಿಸಲ್ಪಡುವದು.

ಆದರೆ ಒಂದು ಪಥವನ್ನು ನೀನು ಆಯ್ಕೆ ಮಾಡಿಕೊಂಡಿದ್ದೇ ಆದಲ್ಲಿ, ನೀನು ಅದಕ್ಕೇ ಅಂಟಿಕೊಂಡಿರಬೇಕು. ಅವೆಲ್ಲವೂ ಮಾನವ ಸಹಜವಾದ

ವಿನ್ಯಾಸಗಳಾಗಿವೆಯೇ ವಿನಾ ಆ ಅನಂತಾನಂತ ಶಕ್ತಿಯ ಕಾರ್ಯಗಳಂತೂ ಅಲ್ಲವೇ ಅಲ್ಲ. ಅದು ಅತ್ಯಂತ ನಿಧಾನ ಗತಿಯಲ್ಲಿ ಚಲಿಸುತ್ತದೆ; ಪ್ರಶಾಂತವಾಗಿ ಚಲಿಸುತ್ತದೆ; ಕೆಲವೊಮ್ಮೊಮ್ಮೆ ಅದರ ಗುರಿಯೆಡೆಗೆ ಅಗ್ರಾಹ್ಯವಾಗಿಯೇ ಚಲಿಸುತ್ತದೆ. ಇಲ್ಲಿಯೇ ಮುಂದುವರೆಯುತ್ತದೆ. ಕೆಲವೊಮ್ಮೆ ವಿಶ್ರಮಿಸಿದಂತೆ ಕಂಡುಬಂದರೂ, ಮುಂದಿನ ಕ್ಷಣದಲ್ಲಿಯೇ ಸಾಮರ್ಥ್ಯಪೂರ್ಣತೆಯಿಂದ ಮತ್ತೂ ವಿಜಯಸೂಚಕ ಭಾವದಲ್ಲಿಯೇ ಅಲ್ಲಿ ಕೈಕೊಂಡ ವಿಷಯವನ್ನು ಭವ್ಯಗೊಳಿಸುತ್ತದೆ, ವೈಭವಪೂರ್ಣಗೊಳಿಸುತ್ತದೆ.

ಮಾನವನು ಕೃತಕ ಬುದ್ಧಿವಂತಿಕೆಯಿಂದ ಕರೆಯಲ್ಪಟ್ಟ ಕೃತಕ ಪಥಗಳಂತೆ ಕಾಲುವೆಗಳಿರುತ್ತವೆ. ಅಲ್ಲಿ ಸುಲಭವಾಗಿ ನೀವು ಪ್ರಯಾಣಿಸಬಹುದು, ಸುರಕ್ಷಿತವೂ ಆಗಿರಬಹುದು, ಖಚಿತತೆಯೂ ಇರಬಹುದು, ಆದರೆ ಅದು ಒಂದು ನಿಗದಿತ ಸ್ಥಳದಿಂದ ಮತ್ತೊಂದು ನಿಗದಿತವಾದ ಸ್ಥಳಕ್ಕೆ ಮಾತ್ರ ಕರೆದೊಯ್ಯುತ್ತದೆ.

ಆದರೆ “ಈ ಪಥ”ವಾದರೊ ಅತ್ಯಂತ ವಿಶಾಲವಾದ ಹಾಗೂ ದಾರಿಯ ಗುರುತೂ ಇರದ ಮಹಾಸಾಗರವಾಗಿದ್ದು, ಆಗ ನೀವು ಅಲ್ಲಿ ಜಗತ್ತಿನ ಯಾವುದೇ ಭಾಗಕ್ಕಾದರೂ ಚಲಿಸಬಹುದು. ಜೊತೆಗೆ ಅನಂತತೆಯ ಸ್ವಾತಂತ್ರ್ಯದಲ್ಲಿ ನೀವು ಅಲ್ಲಿ ಚಲಿಸಲು ಸಮರ್ಥರಾಗಿರುತ್ತೀರಿ. ಈಗ ನಿಮಗೆ ಬೇಕಾಗಿರುವದು ಒಂದು ಹಡಗು ಮಾತ್ರ. ಜೊತೆಗೊಂದು ಚಾಲನಾಚಕ್ರ ಹಾಗೂ ಒಂದು ದಿಕ್ಸೂಚಿ. ಇವುಗಳ ಜೊತೆಗೆ ಪ್ರೇರಣಾಶಕ್ತಿ ಹಾಗೂ ಕೌಶಲ್ಯದಿಂದ ಕೂಡಿದ ಕಪ್ತಾನನೊಬ್ಬನ ಅವಶ್ಯಕತೆಯೂ ಇದೆ.

ಬ್ರಹ್ಮವಿದ್ಯೆಯೇ ನಿಮ್ಮ ಹಡಗು; ವಿಶ್ವಾಸವೇ ನಿಮ್ಮ ಚಾಲನಾಚಕ್ರ; ಸ್ವಯಂ–ಸಮರ್ಪಣೆಯೇ ನಿಮ್ಮ ದಿಕ್ಸೂಚಿ; ಇನ್ನು ಪ್ರೇರಕ ಶಕ್ತಿಯಾಗಿ ಆ ದೇವಿ ಅದನ್ನು ಒದಗಿಸುತ್ತಾಳೆ, ನಿರ್ದೇಶಿಸುತ್ತಾಳೆ. ದೇವನ ಆಜ್ಞೆಯ ಮೇರೆಗೆ ಲೋಕಗಳನ್ನು ಲಯಗೊಳಿಸುತ್ತಾಳೆ. ಹೀಗಾಗಿ ದೇವರೇ ನಿಮ್ಮ ಕಪ್ತಾನನಾಗಿದ್ದಾನೆ. ಆದರೆ ಅವನು ತನ್ನದೇ ಆದ ವಿಧಾನದ ಪಥದಲ್ಲಿ ಇರುವದರಿಂದ, ಮತ್ತು ಪ್ರತಿಯೊಂದಕ್ಕೂ ಅವನದೇ ಸಮಯವೂ ನಿಗದಿಯಾಗಿರುವದರಿಂದ, ಅವನು ಅದೇ ರೀತಿಯಲ್ಲಿಯೇ ಕಾರ್ಯಪ್ರವೃತ್ತನಾಗಿದ್ದಾನೆ. ಅವನ ದಾರಿಯನ್ನೇ ಕಾಯುತ್ತಿರಿ; ಅವನು ಆಗಮಿಸಲಿರುವ ಸಮಯದ ಸಲುವಾಗಿ ಕಾತರದಿಂದ ಕಾಯುತ್ತಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/87–88 – ಶ್ರೀ ಅರವಿಂದರು**

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**27**

## ಅಧ್ಯಾಯ – 21
## ಪ್ರಕೃತಿಯ ನಿಯತಿವಾದ (21/2)

(ಮುಂದುವರಿದುದು) “ಎಲ್ಲ ಭೂತಗಳು (ಪ್ರಾಣಿಗಳು) ತಮ್ಮ ತಮ್ಮ ಪ್ರಕೃತಿ ಧರ್ಮವನ್ನನುಸರಿಸಿಯೇ ನಡೆಯುತ್ತವೆ; ಹೀಗಿರುವಾಗ ನಿಗ್ರಹದಿಂದೇನಾದೀತು?” ಎಂದು ಗೀತೆಯು (3.33) ಪ್ರಶ್ನಿಸುವುದನ್ನು ನೋಡಿದರೆ ಸ್ವಲ್ಪ ಶಂಕೆ ಮೂಡುತ್ತದೆ ಮತ್ತೂ ಮುಂದುವರಿದು “ಜ್ಞಾನಿಯಾದವನೂ ಸಹ ಪ್ರಕೃತಿವಶನಾಗಿಯೇ ವರ್ತಿಸುತ್ತಾನೆ” ಎಂದು ಹೇಳಿದಾಗಲಂತೂ ಈ ಅನುಮಾನ ಮತ್ತಷ್ಟು ಬಲವಾಗುತ್ತದೆ. ಆದರೆ ಗೀತೆಯು ಈ ವಾಕ್ಯವೊಂದನ್ನೇ ತೆಗೆದುಕೊಂಡು ವ್ಯಾಖ್ಯಾನ ಮಾಡಲು ಹೋಗಬಾರದು. ಹೀಗೆ ಹೇಳುವುದರ ಹಿಂದೆ ಗೀತೆಗೆ ಒಂದು ಮಹತ್ತರವಾದ ಉದ್ದೇಶ ಇದೆ. “ಪ್ರತಿಯೊಬ್ಬನೂ ತನ್ನ ತನ್ನ ಧರ್ಮವನ್ನು ಪಾಲಿಸಬೇಕು, ಸ್ವಧರ್ಮವನ್ನು ಅತಿಕ್ರಮಿಸಬಾರದು. ಚೆನ್ನಾಗಿ ಆಚರಿಸುವ ಪರಧರ್ಮಕ್ಕಿಂತ ಸದೋಷ ಸ್ವಧರ್ಮವೇ ಶ್ರೇಷ್ಠ. ಸ್ವಧರ್ಮದಲ್ಲಿ ಸಾವೇ ಬಂದರೂ ಅಡ್ಡಿಯಿಲ್ಲ, ಪರಧರ್ಮವನ್ನನುಸರಿಸಲು ಹೋಗಬಾರದು (3.35) ಎಂಬ ಗೀತೆಯ ಮಹೋನ್ನತ ಆದೇಶ ಇದೇ ಸೂತ್ರದ ಮೇಲೆ ನಿಂತಿದೆ ಎಂಬುದನ್ನು ಮನಗಾಣಬೇಕು. ಹಾಗಾದರೆ “ಸ್ವಧರ್ಮವೆಂದರೆ ಏನು?” ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಮುಂದಿನ ಕೊನೆಕೊನೆಯ ಅಧ್ಯಾಯಗಳಲ್ಲಿ ಪುರುಷ ಪ್ರಕೃತಿ ಹಾಗೂ ಗುಣಗಳ ಬಗ್ಗೆ ವಿವರವಾದ ವ್ಯಾಖ್ಯಾನವಿದೆ. ಆಗ ಅಲ್ಲಿ ಈ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಬಹುದು. ಸದ್ಯಕ್ಕೆ ಇಷ್ಟು ಮಾತ್ರ ತಿಳಿದುಕೊಂಡರೆ ಸಾಕು–ಸ್ವಧರ್ಮವೇ ಶ್ರೇಯಸ್ಕರ, ಪರಧರ್ಮವು ಸಾವಿಗಿಂತಲೂ ಕಡೆ ಎಂದು ಹೇಳುವಾಗ ಸ್ವಧರ್ಮ ಕೆಟ್ಟದ್ದಾಗಿದ್ದರೂ, ಸ್ವಪ್ರೇರಣೆ ಎಂದು ಕೆಟ್ಟದ್ದನ್ನು ಆಚರಿಸಲು ಗೀತೆ ಖಂಡಿತವಾಗಿಯೂ ಹೇಳುವುದಿಲ್ಲ. “ಎಲ್ಲ ಇಂದ್ರಿಯಗಳಿಗೂ ತಮ್ಮ ತಮ್ಮ ವಿಷಯಗಳಲ್ಲಿ ರಾಗದ್ವೇಷಗಳು ಸಹಜವಾಗಿ ಇದ್ದೇ ಇರುತ್ತವೆ. ಮಾನವನು ಇವುಗಳ ಬಲೆಯಲ್ಲಿ ಬೀಳಬಾರದು. ಅವುಗಳೇ ನಿಜವಾಗಿ ಮಾನವನ ಶತ್ರುಗಳು” (3.34) ಎಂದೂ ಸಹ ಗೀತೆ ಸ್ಪಷ್ಟವಾಗಿ ಹೇಳುವುದನ್ನು ಗಮನಿಸಬೇಕು.

ಒಂದೆಡೆ, ಸ್ವಪ್ರಕೃತಿಯನ್ನನುಸರಿಸಿಯೇ ಎಲ್ಲ ಜೀವಿಗಳು ವರ್ತಿಸುತ್ತವೆ, ಪ್ರಕೃತಿಯ ಪ್ರೇರಣೆ ಅಥವಾ ಪ್ರಚೋದನೆಯೇ ಜೀವಿಗಳ ವರ್ತನೆಗೆ ಕಾರಣ ಎಂದು ಹೇಳುತ್ತ, ಇನ್ನೊಂದೆಡೆ ಇಂದ್ರಿಯಗಳ ಬಲೆಯಲ್ಲಿ ಬೀಳಬಾರದು, ಅವುಗಳ ವಂಚನೆಯಿಂದ ತಪ್ಪಿಸಿಕೊಳ್ಳಬೇಕು ಎಂದು ಹೇಳುವ ಗೀತೆಯ ವಚನವು ವಿರೋಧಾಭಾಸವೆಂಬಂತೆ ತೋರುವುದು. ಈ ಹಿನ್ನೆಲೆಯಲ್ಲಿಯೇ ಅರ್ಜುನನು ಕೃಷ್ಣನನ್ನು ಪ್ರಶ್ನಿಸುತ್ತಾನೆ "ಪ್ರಕೃತಿ ಧರ್ಮಕ್ಕನುಗುಣವಾಗಿ ವರ್ತಿಸುವಲ್ಲಿ ದೋಷವಿಲ್ಲವೆಂದಾದರೆ, ಮಾನವನು ಪಾಪ ಕರ್ಮಗಳನ್ನು ಹೇಗೆ ಮಾಡುತ್ತಾನೆ? ಪಾಪ ಕರ್ಮಗಳಿಗೆ ಅವನನ್ನು ಪ್ರಚೋದಿಸುವವರು ಯಾರು?" (3.36) ಈ ಪ್ರಶ್ನೆಗೆ ಕೃಷ್ಣನು ನೀಡುವ ಉತ್ತರ ಬಹಳ ಚೆನ್ನಾಗಿದೆ "ಮಾನವನನ್ನು ಅವನಿಚ್ಛೆಗೆ ವಿರುದ್ಧವಾಗಿ ಪಾಪಕರ್ಮ ಮಾಡುವಂತೆ ಪ್ರೇರೇಪಿಸುವುದು ಅವನ ಕಾಮ ಹಾಗೂ ಅದರ ಸಂಗಾತಿಯಾದ ಕ್ರೋಧ. ಇವೆರಡೂ ರಜೋ ಗುಣದಿಂದ ಹುಟ್ಟಿವೆ" ಕಾಮವು ಮಾನವನ ಬಹುದೊಡ್ಡ ಶತ್ರು. ಪಾಪ ಕರ್ಮಗಳಿಂದ ನಿವೃತ್ತನಾಗುವುದೇ ಮುಕ್ತಿಯ ಮೊದಲ ಮೆಟ್ಟಿಲು – ಇದರಿಂದ ಆತ್ಮಪ್ರಭುತ್ವ, ಆತ್ಮನಿಗ್ರಹ ಅಥವಾ ನಿಯಂತ್ರಣ, ಸಂಯಮಗಳು ಸಿದ್ಧವಾಗುವುವು.

ಪ್ರಕೃತಿಯ ಸಹಜ ಪ್ರವೃತ್ತಿಗಳ ನಿಗ್ರಹ, ನಿಯಂತ್ರಣದ ಬಗ್ಗೆ ವಿಚಾರ ಮಾಡುವಾಗ ಒಂದು ಮಹತ್ವದ ಭೇದವನ್ನು ಲಕ್ಷಿಸಬೇಕು. ಪ್ರಕೃತಿಯ ಯಾವ ಪ್ರವೃತ್ತಿಗಳನ್ನು ನಿಯಂತ್ರಿಸಬೇಕು ಮತ್ತು ಯಾವುದನ್ನೂ ನಿಯಂತ್ರಿಸಬಾರದು ಎಂಬುದನ್ನು ತಿಳಿದುಕೊಳ್ಳಬೇಕು. ಪ್ರಕೃತಿಯ ಮೂಲಭೂತ ಸಹಜ ಪ್ರವೃತ್ತಿ, ಅದರ ಅನಿವಾರ್ಯ ಅಥವಾ ಅಚಲ ಕಾರ್ಯಾಚರಣೆ ಮುಂತಾದವುಗಳನ್ನು ದಮನ ಮಾಡುವುದಾಗಲಿ, ನಿಗ್ರಹಿಸುವುದಾಗಲಿ, ಹತ್ತಿಕ್ಕುವುದಾಗಲಿ ಮಾಡಬಾರದು, ಬದಲಾಗಿ ಅದರ ಆನುಷಂಗಿಕ, ನೈಮಿತ್ತಿಕ, ಪ್ರಾಸಂಗಿಕ ಕಾರ್ಯ ರೂಪಗಳನ್ನು, ಅವುಗಳ ಗೊಂದಲ, ಅಲೆದಾಟ, ವಿಕೃತಿ ಇವುಗಳನ್ನು ಅವಶ್ಯವಾಗಿ ನಿಯಂತ್ರಿಸಬೇಕು. ಪ್ರಕೃತಿಯ ಕಾರ್ಯಗಳಲ್ಲಿ ಅವುಗಳ ಅಂಗಭೂತ ಮತ್ತು ವಿಕೃತ ಹೀಗೆ ಭೇದ ಮಾಡುವುದು ಅವಶ್ಯವಿದೆ. ಅದೇ ರೀತಿ ನಿಗ್ರಹ ಮತ್ತು ಸಂಯಮ ಇವುಗಳ ನಡುವಿನ ಭೇದವನ್ನರಿಯುವುದೂ ಸಹ ಮಹತ್ವದ್ದಿದೆ. ನಿಗ್ರಹ ಅಂದರೆ ಬಲ ಪೂರ್ವಕವಾಗಿ, ಒತ್ತಾಯದಿಂದ ಪ್ರಕೃತಿಯ ಚಲನೆಗಳನ್ನು ದಮನ ಮಾಡುವುದು ಎಂದರ್ಥ; ಇದು ಒಂದು ರೀತಿಯಲ್ಲಿ ಅತ್ಯಾಚಾರಕ್ಕೆ, ಹಿಂಸಾಚಾರಕ್ಕೆ ಸಮ. ಹೀಗೆ ಮಾಡುವುದರಿಂದ ನಮ್ಮ ಸ್ವಾಭಾವಿಕ ಶಕ್ತಿಯು ಅಂತತಃ ಕುಗ್ಗುವುದು,

ಕ್ಷೀಣವಾಗುವುದು. ಇದನ್ನು ಮಾಡಬಾರದೆಂದು ಗೀತೆ ಸ್ಪಷ್ಟವಾಗಿ ಹೇಳುತ್ತದೆ. ನಾತ್ಮಾನಮವ ಸಾದಯೇತ್ (6.5) ಇದಕ್ಕೆ ವಿರುದ್ಧವಾಗಿ ಸಂಯಮವನ್ನು ಗೀತೆ ಪ್ರಶಂಸಿಸುತ್ತದೆ. ಸಂಯಮವೆಂದರೆ ಶ್ರೇಷ್ಠ ಆತ್ಮದಿಂದ ಕನಿಷ್ಠ ಆತ್ಮಕ್ಕೆ ಮಾರ್ಗದರ್ಶನ ನೀಡಿ, ನಿಯಂತ್ರಣದಲ್ಲಿ ತರುವುದು ಎಂದರ್ಥ. ಸಂಯಮದಿಂದ ನಮ್ಮ ಶಕ್ತಿಯು ಹೆಚ್ಚು ಹೆಚ್ಚಾಗಿ ಕಾರ್ಯಮಾಡಲು ಸಮರ್ಥವಾಗುವುದು ಮತ್ತು ಯೋಗ್ಯ ಕಾರ್ಯಗಳು ಸಂಭವಿಸುವುವು. "ಯೋಗಃ ಕರ್ಮಸು ಕೌಶಲಂ" (2.50) ಆರನೆಯ ಅಧ್ಯಾಯದ ಆರಂಭದಲ್ಲಿ ಸಂಯಮದ ಸ್ವರೂಪವನ್ನು ಗೀತೆ ಸ್ಪಷ್ಟಪಡಿಸುತ್ತದೆ. "ಆತ್ಮನ ಸಹಾಯ ತೆಗೆದುಕೊಂಡು ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಬೇಕು. ಆತ್ಮದ ಲಾಲನೆಯಾಗಲಿ, ಅದರ ದಮನವಾಗಲಿ ಎರಡೂ ಒಳ್ಳೆಯವಲ್ಲ. ಆತ್ಮನೇ ಮಿತ್ರನೂ ಹೌದು ಶತ್ರುವೂ ಹೌದು. ಯಾರು ಉನ್ನತ ಆತ್ಮದ ಮೂಲಕ ನಿಮ್ನ ಸ್ತರದ (ಆತ್ಮವನ್ನು) ಗೆದ್ದಿದ್ದಾರೋ ಅವರಿಗೆ ಆತ್ಮನೇ ಮಿತ್ರ. ಯಾರಿಗೆ ಇದು ಸಾಧ್ಯವಾಗಿಲ್ಲವೋ ಅವರಿಗೆ ಆತ್ಮನೇ ಶತ್ರುವಾಗುವುನು" (6.5.6) ಯಾರು ಆತ್ಮನನ್ನು ಗೆದ್ದು ಪೂರ್ಣ ಪ್ರಭುತ್ವದ ಶಾಂತಿಯನ್ನು ಪಡೆದಿದ್ದಾರೆಯೋ, ಅಂಥವರ ಶ್ರೇಷ್ಠ ಆತ್ಮನು ಅವರ ಬಹಿರ್ಮುಖ ಕಾರ್ಯಗಳಲ್ಲಿ ಪ್ರಜ್ಞಾಯುಕ್ತವಾಗಿ ಸಮಾಹಿತನಾಗುವುನು. ಸಮಾಧಿಯ ಸಮಾಧಾನದ ಸುಸ್ಥಿರ ಅವಸ್ಥೆಯಲ್ಲಿ ಅವನು ಪ್ರಾವಿಷ್ಠನಾಗುವುನು. (6.7) ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಕೆಳ ಸ್ತರದ ಆತ್ಮನನ್ನು (ಜೀವ) ಮೇಲ್ ಸ್ತರದ ಆತ್ಮದ ಮೂಲಕ (ಆತ್ಮ, ಅಂತರಾತ್ಮ) ಗೆಲ್ಲುವುದು ಅಥವಾ ಪ್ರಾಕೃತಿಕ ಆತ್ಮನನ್ನು ಆಧ್ಯಾತ್ಮಿಕ ಆತ್ಮದ ಮೂಲಕ ಗೆಲ್ಲುವುದೇ ನಿಜವಾದ ಪರಿಪೂರ್ಣ ಮುಕ್ತಿಯ ದಾರಿಯಾಗಿದೆ.

ಪ್ರಕೃತಿಯ ನಿಯತಿವಾದದ ವ್ಯಾಪ್ತಿ, ಅದರ ಅರ್ಥ ಇವುಗಳಿಗೆ ಇರುವ ನಿರ್ದಿಷ್ಟವಾದ ಮರ್ಯಾದೆಯನ್ನು ಕುರಿತು ಮೇಲಿನ ಪರಿಚ್ಛೇದದಲ್ಲಿ ವಿವರವಾಗಿ ಹೇಳಲಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಪ್ರಕೃತಿಯ ನಿಯತಿವಾದವು ಒಂದು ಮಹಾನ್ ನಿಯಂತ್ರಣದ ಅಡಿಯಲ್ಲಿ ಅಥವಾ ಮೇರೆಯ ಒಳಗೆ ಕಾರ್ಯ ಮಾಡುತ್ತದೆ. ಪ್ರಕೃತಿಯ ದಾಸ್ಯದಿಂದ ಪ್ರಕೃತಿಯ ಪ್ರಭುತ್ವದವರೆಗೆ ಆತ್ಮವು ಹೇಗೆ, ಯಾವ ದಾರಿಯಿಂದ ಹೋಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಪ್ರಕೃತಿಯ ಗುಣಗಳು, ಅವುಗಳ ಕಾರ್ಯವಿಧಾನ ಮತ್ತು ಅವುಗಳ ವ್ಯಾಪ್ತಿಯನ್ನು ಕುರಿತು ಆಳವಾಗಿ ಅಮೂಲಾಗ್ರವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಪ್ರಕೃತಿಯ ಕೆಳಗಿನ ಶ್ರೇಣಿಯ ಸ್ತರದಲ್ಲಿನ ಭೂತಗಳಲ್ಲಿ (ಜೀವಿಗಳಲ್ಲಿ) ತಮೋ ಗುಣವೇ

ಪ್ರಧಾನವಾಗಿದೆ, ಅದೇ ಸರ್ವಸತ್ತಧಾರಿಯಾಗಿದೆ. ಇಲ್ಲಿನ ಭೂತಗಳಿಗೆ ತಮ್ಮ ಸ್ವಂತಿಕೆಯ ಅರಿವು ಕಿಂಚಿತ್ತೂ ಇಲ್ಲ, ಕೇವಲ ಪ್ರಕೃತಿಯ ಪ್ರವಾಹದಲ್ಲಿ ಹೊಡೆದುಕೊಂಡು ಹೋಗುತ್ತವೆ. ಅಣು, ಪರಮಾಣುಗಳಲ್ಲಿ ಕೂಡ ಇಚ್ಛೆ ಅನ್ನುವುದಿದೆ. ಆದರೆ ಅದು ಸ್ವತಂತ್ರವಾಗಿಲ್ಲ. ತೀರ ಯಾಂತ್ರಿಕವಾಗಿದೆ, ಯಂತ್ರವಚ್ಚಾಲಿತವಾಗುತ್ತದೆ. ಅಲ್ಲಿ ಅಣುವಿನ ಅಣತಿ ನಡೆಯುವುದಿಲ್ಲ ಬದಲಾಗಿ ಅದರ ಇಚ್ಛೆಯ ಯಾಂತ್ರಿಕತೆಗೆ ಬದ್ಧವಾಗಿ, ವಶವಾಗಿ ಅಣು ವರ್ತಿಸುತ್ತದೆ. ಈ ಸ್ತರದಲ್ಲಿ ಬುದ್ಧಿ ಮತ್ತು ಸಂಕಲ್ಪಗಳು, ಸಾಂಖ್ಯರು ಹೇಳುವಂತೆ, ಜಡವಾಗಿರುತ್ತವೆ. ಅವುಗಳಲ್ಲಿನ ಚಲನೆ, ಚಾಲನೆ ಯಾಂತ್ರಿಕವಾಗಿರುತ್ತದೆ. ಅದೊಂದು ಅಚೇತನವಾದ ತತ್ತ್ವ. ಈ ಸ್ತರದಲ್ಲಿ ಆತ್ಮ–ಪ್ರಜ್ಞೆಯು ಮೇಲ್ ಪಾತಳಿಗೆ ಬರುವ ಪ್ರಯತ್ನವನ್ನು ಕೂಡ ಮಾಡುವುದಿಲ್ಲ. ತನ್ನಲ್ಲಿ ಚೇತನ ಅಥವಾ ಪ್ರಜ್ಞೆ ಇದೆ ಎಂಬ ವಿಷಯವನ್ನೇ ಅಣು ಅರಿಯದು. ಅದರ ಮೇಲೆ ತಮಸ್ಸಿನ ಅಥವಾ ನಿಷ್ಕ್ರಿಯತೆಯ ಬಲವಾದ ಹಿಡಿತವಿದೆ. ಅದರಲ್ಲಿ ರಜೋ ಗುಣವೂ ಇದೆ, ಸತ್ವ ಗುಣವೂ ಇದೆ. ಆದರೆ ಅವುಗಳ ಮೇಲೆ ನಿಷ್ಕ್ರಿಯತೆಯ ಆಡಳಿತವಿದೆ. ಪ್ರಕೃತಿಯು ಜೀವಿಯ ಮೇಲೆ (ಅಣುವಿನ ಮೇಲೆ ಕೂಡ) ಒತ್ತಡ ಹೇರುತ್ತದೆ. ಮಹಾಶಕ್ತಿಯಿಂದ ಕಾರ್ಯಮಾಡುತ್ತದೆ. ಆದರೆ ಅದೊಂದು ಯಂತ್ರಾರೂಢ ಮಾಯೆಯಂತೆ. ಮುಂದೆ ಸಸ್ಯ ವರ್ಗ, ಇಲ್ಲಿ ರಜೋ ಗುಣವು ಮೇಲ್ ಪಾತಳಿಗೆ ಬರುವ ಸಾಹಸ ಮಾಡುತ್ತದೆ. ಅದರೊಟ್ಟಿಗೆ ಪ್ರಾಣಶಕ್ತಿ ಮಾಡುವ ಕೆಲಸದಿಂದಾಗಿ ನರ ಮಂಡಲದ ಪ್ರತಿಕ್ರಿಯೆ ಆರಂಭವಾಗುತ್ತದೆ. ಇದನ್ನೇ ನಾವು ಸುಖ ದುಃಖ ಎಂದು ಗುರುತಿಸುತ್ತೇವೆ. ಈ ನೋವು ನಲಿವು ನಮ್ಮಲ್ಲೂ ಇರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಈ ಹಂತದಲ್ಲಿ ಸತ್ವ ಗುಣ ಸಮಾಧಿಯಂಥ ಮೌನ ಸ್ಥಿತಿಗೆ ಜಾರಿರುತ್ತದೆ. ಅದಿನ್ನೂ ಬಾಹ್ಯ ಸ್ತರಕ್ಕೆ ಬಂದಿರುವುದಿಲ್ಲ. ಅಂತೆಯೇ ಪ್ರಜ್ಞಾಯುಕ್ತವಾದ ಬುದ್ಧಿ ಸಂಕಲ್ಪವಿನ್ನೂ ಜಾಗೃತವಾಗಿರುವುದಿಲ್ಲ. ಈ ಹಂತದಲ್ಲಿ ಎಲ್ಲವೂ ಯಾಂತ್ರಿಕವಾಗಿರುತ್ತದೆ. ಅವಚೇತನ ಅಥವಾ ಅರೆ ಚೇತನದ ಕ್ರಿಯೆಗಳೇ ಅಧಿಕವಾಗಿರುತ್ತವೆ. ತಮಸ್ಸು ರಜಸ್ಸಿಗಿಂತ ಬಲಿಷ್ಠವಾಗಿರುತ್ತದೆ. ಇವೆರಡೂ ಸೇರಿ ಸತ್ವವನ್ನು ಸೆರೆಗೆ ತಳ್ಳುತ್ತವೆ, ಹೊರಬರದಂತೆ ಕಾವಲು ಕಾಯುತ್ತವೆ.

ಪಶುಗಳಲ್ಲಿ ತಮೋ ಗುಣವೇ ಪ್ರಧಾನವಾಗಿರುವುದಾದರೂ, ನಾವದನ್ನು ತಾಮಸಿಕ ಸರ್ಗವೆಂದು ಕರೆದರೂ ಸಹ, ರಜೋ ಗುಣವು ಅಲ್ಲಿ ಸಾಕಷ್ಟು ಪ್ರಬಲವಾಗಿದ್ದು ತಾಮಸ ಕ್ರಿಯೆಯನ್ನು ಗೆದ್ದು ಅದು ಬೆಳವಣಿಗೆ ಹೊಂದಿದ

ಪ್ರಾಣಶಕ್ತಿ, ವಾಸನೆ, ಭಾವನೆ, ಭಾವೋದ್ವೇಗ, ಸುಖಾನುಭೂತಿ, ದುಃಖ ಸಂವೇದನೆಗಳನ್ನು ಜೀವಿಯಲ್ಲಿ ಮೂಡಿಸುತ್ತದೆ. ಸತ್ವ ಗುಣವು ನಿಧಾನವಾಗಿ ಪ್ರಕಟವಾಗುತ್ತಿದ್ದರೂ ಸಹ ಅದು ನಿಮ್ನ ಸ್ತರದ ಕಾರ್ಯಾಚರಣೆಗೆ ಬದ್ಧವಾಗಿರುವುದು. ಪಶು ವರ್ಗಕ್ಕೆ ನಿಧಾನವಾಗಿ ತನ್ನ ತನದ ಅರಿವು ಇರುವ ಮನಸ್ಸು ಮೂಡುತ್ತದೆ. ಅಹಂಕಾರದ ಯಾಂತ್ರಿಕ ಸಂವೇದನೆ ಆರಂಭವಾಗುತ್ತದೆ. ಸಚೇತನವಾದ ಸ್ಮೃತಿ ಮೂಡುತ್ತದೆ, ಒಂದು ನಿರ್ದಿಷ್ಟ ಮಿತಿಯ ವಿಚಾರ ಶಕ್ತಿ, ವಿಶೇಷವಾಗಿ ಸಹಜ ಪ್ರೇರಣೆ ಹಾಗೂ ಪ್ರಾಣಿಕ ಸಹಜ ಸ್ಫುರಣೆಗಳು ಅದರಲ್ಲಿ ಬೆಳೆಯತೊಡಗುತ್ತವೆ. ಆದರೆ ಬುದ್ಧಿಯು ಇನ್ನೂ ಬೆಳೆದಿರುವುದಿಲ್ಲ. ಬೌದ್ಧಿಕ ಸಂಕಲ್ಪ ಉದಯವಾಗಿರುವುದಿಲ್ಲ, ಸ್ವಪ್ರಜ್ಞೆ ಸಂಪೂರ್ಣವಾಗಿ ಇರುವುದಿಲ್ಲ; ಆದ್ದರಿಂದ ಈ ಹಂತದಲ್ಲಿ ಪ್ರಾಣಿಗಳಿಗೆ ಅವುಗಳ ಕರ್ಮದ ಹೊಣೆಯನ್ನು ಹೊರಿಸಲಾಗುವುದಿಲ್ಲ. ಪರಮಾಣುವು ತನ್ನ ಕುರುಡು ಕ್ರಿಯೆಗಳಿಗೆ, ಅಗ್ನಿಯು ಸುಟ್ಟು ಬೂದಿ ಮಾಡುವುದಕ್ಕೆ, ಬಿರುಗಾಳಿಯು ತನ್ನ ವಿನಾಶಕಾರಿ ಕ್ರಿಯೆಗೆ ಎಷ್ಟು ಹೊಣೆಯೋ ಅದಕ್ಕಿಂತ ಹೆಚ್ಚಿನ ಹೊಣೆಯನ್ನು ಹುಲಿಯ ಕೊಂದು ತಿನ್ನುವ ಕ್ರಿಯೆಗೆ, ಕ್ರೌರ್ಯಕ್ಕೆ ಹೊಲಿಸಲಾಗುವುದಿಲ್ಲ. ಹುಲಿಗೆ ಉತ್ತರ ಕೊಡಬಲ್ಲ ಸಾಮರ್ಥ್ಯವಿದ್ದರೆ, ಅದು ಕೂಡ ಮನುಷ್ಯನಂತೆ, ತನಗೆ ಇಚ್ಛಾ ಸ್ವಾತಂತ್ರ್ಯವಿದೆ, ಕರ್ತೃತ್ವದ ಬಗ್ಗೆ ಗರ್ವ ಇದೆ. "ನಾನು ಕೊಲ್ಲುತ್ತೇನೆ, ನಾನು ನಾಶ ಮಾಡುತ್ತೇನೆ" ಎಂದು ಹೇಳಬಹುದು. ಆದರೆ ನಿಜವಾಗಿ ಈ ಕೊಲ್ಲುವ, ತಿನ್ನುವ ಕಾರ್ಯ ಅದರದಲ್ಲ. ಹುಲಿಯ ಪ್ರಾಕೃತಿಕ ಸಹಜ ಕ್ರಿಯೆ ಹಾಗೆ ಮಾಡಿಸುತ್ತದೆ, ಅದರೊಳಗಿರುವ ಪ್ರಕೃತಿಯೇ ಈ ನಾಶಮಾಡುವ ಕ್ರಿಯೆಯನ್ನೂ ಮಾಡುತ್ತದೆ ಎಂಬುದನ್ನು ಸಾವು ಸುಲಭವಾಗಿ ಗುರುತಿಸಬಹುದು. ಅದೇ ರೀತಿ ಹುಲಿಯು ಕೊಲ್ಲದೇ ತಿನ್ನದೇ ಉಳಿದರೆ, ಒಂದೋ ಅದರ ಹೊಟ್ಟೆ ತುಂಬಿರಬೇಕು ಅಥವಾ ಅಂಜಿಕೊಂಡಿರಬೇಕು ಇಲ್ಲವಾದರೆ ಅದು ಆಲಸ್ಯದಿಂದ ತಾಮಸಕ್ಕೆಳಸಿರಬೇಕು. ಅಂದರೆ ಅದು ಪ್ರಕೃತಿಯ ಇನ್ನೊಂದು ಗುಣಕ್ಕೆ ಅಂದರೆ ತಾಮಸಿಕ ಗುಣಕ್ಕೆ (ತಾತ್ಕಾಲಿಕವಾಗಿ) ವಶವಾಗಿರಬೇಕು ಎಂದರ್ಥ. ಕೊಲ್ಲುವುದು ಆ ಪ್ರಾಣಿಯಲ್ಲಿನ ಪ್ರಕೃತಿಯೇ, ಅದೇ ರೀತಿ ಕೊಲ್ಲದೇ ಇರುವುದೂ ಕೂಡಾ ಅದರೊಳಗಿನ ಪ್ರಕೃತಿಯೇ. ಅದರಲ್ಲಿರುವ ಆತ್ಮವು (ಜೀವಾತ್ಮ, ಅದು ಯಾವುದೇ ರೂಪದಲ್ಲಿರಲಿ) ಪ್ರಕೃತಿಯ ಕಾರ್ಯವನ್ನು ನಿರ್ವಿಕಾರವಾಗಿ ಸಮ್ಮತಿಸುತ್ತದೆ. ಅದರ ಭಾವಾವೇಶ, ಕ್ರಿಯೆ ಅಥವಾ ಕ್ರಿಯಾವಿಹೀನತೆ ಏನೇ ಇರಲಿ ಎಲ್ಲವನ್ನೂ ಮಾಡಿಸುವುದು ಅದರ

ಪ್ರಕೃತಿಯೇ. ಅಣು–ಪರಮಾಣುವಿನಂತೆ ಪ್ರಾಣಿಯೂ ಕೂಡ ತನ್ನ ಪ್ರಕೃತಿಯ ಯಾಂತ್ರಿಕ ಕ್ರಿಯೆಗೆ ಬದ್ಧವಾಗಿಯೇ ವರ್ತಿಸುತ್ತದೆ. ಸದೃಶಂ ಚೇಷ್ಟತೇಸ್ವಸ್ಯಾಃ ಪ್ರಕೃತೇ (3.33) ಯಂತ್ರಾರೂಢಂ ಮಾಯಯಾ.

ಆದರೆ ಕನಿಷ್ಠ ಪಕ್ಷ ಮಾನವ ಜೀವಿಯಲ್ಲಾದರೂ ಬೇರೆ ರೀತಿಯ ಕ್ರಿಯೆಯ ಸಾಧ್ಯತೆಯನ್ನು ಕಾಣುತ್ತೇವಲ್ಲವೇ? ಅವನಲ್ಲಿ ಇಚ್ಛಾ ಸ್ವಾತಂತ್ರ್ಯ ಮುಕ್ತ ಕಾರ್ಯ ಸಾಮರ್ಥ್ಯ ಹಾಗೂ ಹೊಣೆಗಾರಿಕೆಯ ಪ್ರಜ್ಞೆ ಅಂದರೆ ಪ್ರಕೃತಿಯೇ ಎಲ್ಲವನ್ನೂ ಮಾಡಿಸುತ್ತದೆ ಅನ್ನುವುದಕ್ಕಿಂತ ಭಿನ್ನವಾಗಿ ನಾನು ಮಾಡುತ್ತೇನೆ ಅನ್ನುವ ಕರ್ತೃತ್ವ ಭಾವ ಇದೆಯಲ್ಲವೇ? ಇದು ಮಾಯೆಯ ಯಾಂತ್ರಿಕತೆಗಿಂತ ಭಿನ್ನವಲ್ಲವೇ? ಎಂಬ ಸಂದೇಹ ಅಥವಾ ಪ್ರಶ್ನೆ ಸಹಜವಾಗಿ ಬರುತ್ತದೆ. ಏಕೆಂದರೆ ಅವನಲ್ಲಿ ಪ್ರಜ್ಞಾಯುಕ್ತವಾದ ಬುದ್ಧಿ ಇದೆ. ಬುದ್ಧಿಯು ಎಲ್ಲವನ್ನೂ ಪರಿಶೀಲಿಸುವ ಮಾನವನಲ್ಲಿರುವ ಬೆಳಕಿನ ವಸ್ತುವು. ಅದರ ಮೂಲಕವೇ ಅವನು ಯೋಚಿಸುತ್ತಾನೆ. ವೀಕ್ಷಿಸುತ್ತಾನೆ, ಅರ್ಥೈಸಿಕೊಳ್ಳುತ್ತಾನೆ, ಸಮ್ಮತಿಸುತ್ತಾನೆ ಅಥವಾ ಅಸಮ್ಮತಿಸುತ್ತಾನೆ. ಬೇಕು–ಬೇಡಗಳನ್ನು ವ್ಯಕ್ತಪಡಿಸುತ್ತಾನೆ. ಕೊನೆಗೆ ಇದರಿಂದಲಾದರೂ ಅವನು ತನ್ನ ಪ್ರಕೃತಿಯ ಈಶ್ವರನಾಗಬಲ್ಲನೇನೋ ಎಂದು ತೋರುತ್ತದೆ. ಮಾನವನು ಹುಲಿ ಅಥವಾ ಅಗ್ನಿ ಅಥವಾ ಬಿರುಗಾಳಿಯಂತಲ್ಲ. ಯಾರನ್ನೋ ಕೊಂದು ಹಾಕಿ, ತನ್ನ ಕೃತಿಯ ಸಮರ್ಥನೆಗಾಗಿ "ನಾನು ನನ್ನ ಪ್ರಕೃತಿಗನುಗುಣವಾಗಿ ವರ್ತಿಸಿದ್ದೇನೆ" ಎಂದು ಹೇಳುವುದಿಲ್ಲ. ಅವನು ಹಾಗೆ ಮಾಡುವುದಿಲ್ಲ. ಏಕೆಂದರೆ ಅದವನ ಸ್ವಧರ್ಮವಲ್ಲ. ಅದವನ ಧರ್ಮಾವಿರುದ್ಧ ಕಾರ್ಯವೂ ಅಲ್ಲ. ಅವನ ಸ್ವಧರ್ಮಾವಿರುದ್ಧ ಹುಲಿ, ಬಿರುಗಾಳಿ, ಬೆಂಕಿಯಂತಲ್ಲ ಅವನ ಈ ಹತ್ಯೆಯ ಕೆಲಸ. ಅವನಲ್ಲಿ ಪ್ರಜ್ಞಾಯುಕ್ತ ಬುದ್ಧಿಯುಕ್ತ ಸಂಕಲ್ಪ ಶಕ್ತಿಯಿದೆ. ತನ್ನೆಲ್ಲ ಕಾರ್ಯಗಳನ್ನು ಅವನು ಬುದ್ಧಿಗೆ ಒಪ್ಪಿಸಿ, ತದನುಸಾರ ಕಾರ್ಯ ಮಾಡಬೇಕು. ಅವನು ಹಾಗೆ ಮಾಡಲಿಲ್ಲವಾದರೆ, ತನ್ನ ಕುರುಡು ಆವೇಶದ ಪ್ರವೃತ್ತಿಗೆ ಬಲಿಯಾಗಿ ಅನುಚಿತ ಕೆಲಸ ಮಾಡಿದ್ದೇ ಆದರೆ ಅವನ "ಸ್ವಧರ್ಮಃ ಸು ಅನುಷ್ಠಿತಃ", ಅಂದರೆ ಸ್ವಧರ್ಮದ ನಿಯಮವು ಸರಿಯಾಗಿ ಪಾಲಿಸಲ್ಪಟ್ಟಿಲ್ಲವೆಂದೇ ಅರ್ಥ. ಅವನು ತನ್ನ ಮನುಷ್ಯತ್ವದ ನಿಯಮವನ್ನು ಸರಿಯಾಗಿ ಆಚರಿಸಿಲ್ಲವೆಂದೇ ಅರ್ಥ, ಅಷ್ಟೇ ಏಕೆ ಅವನು ತೀರ ಪಶುವಿನಂತೆಯೇ ವರ್ತಿಸಿದ್ದಾನೆ ಎಂದು ಹೇಳಬೇಕಾಗುವುದು. ಮಾನವನ ಬುದ್ಧಿಯನ್ನು ರಜೋ ಗುಣವಾಗಲಿ ತಮೋ ಗುಣವಾಗಲಿ ಆಕ್ರಾಂತಗೊಳಿಸಿ ತನ್ನ ಎಲ್ಲ ಕಾರ್ಯಗಳನ್ನು ಅವನು ಸಮರ್ಥಿಸಿಕೊಳ್ಳುವಂತೆ

ಮಾಡಬಹುದೆಂಬುದೇನೋ ನಿಜವೇ, ತಾನು ಏನೂ ಮಾಡದೇ ತನ್ನ ನಿಷ್ಕ್ರಿಯತೆಯನ್ನು ಕೂಡ ಸಮರ್ಥಿಸಿಕೊಳ್ಳುವಂತೆ ಅವನನ್ನು ಪ್ರೇರೇಪಿಸಬಹುದು. ಆದರೆ, ಏನೇ ಆದರೂ ಕಾರ್ಯ ಮಾಡುವ ಮೊದಲು ಅಥವಾ ಕನಿಷ್ಠ ಪಕ್ಷ ಮಾಡಿದ ನಂತರವಾದರೂ ತನ್ನ ಕೃತಿಯನ್ನು ಬುದ್ಧಿಗೆ ವಿವೇಚನೆಗಾಗಿ ಒಪ್ಪಿಸಬೇಕು. ಕನಿಷ್ಠ ಪಕ್ಷ ಇಷ್ಟನ್ನಾದರೂ ಅವನು ಮಾಡಲೇಬೇಕು. ಇಷ್ಟಲ್ಲದೇ ಮಾನವನಲ್ಲಿ ಸತ್ವ ಗುಣವು ಜಾಗೃತವಾಗಿರುತ್ತದೆ; ಆ ಗುಣವೇ ಬುದ್ಧಿಯಾಗಿ, ಬುದ್ಧ್ಯಾಪೂರ್ವಕ ಸಂಕಲ್ಪವಾಗಿ ಕೆಲಸ ಮಾಡುವುದಲ್ಲದೇ ಬೆಳಕಿಗಾಗಿ, ಸರಿಯಾದ ಜ್ಞಾನಕ್ಕಾಗಿ ಮತ್ತು ಸರಿಯಾದ ಜ್ಞಾನದ ಬೆಳಕಿನಲ್ಲಿ ಕೆಲಸ ಮಾಡುವುದನ್ನು ಕಲಿಯಲೆತ್ನಿಸುತ್ತಾನೆ. ಇದು ತನ್ನ ಸುತ್ತಣ ವಿಶ್ವದಲ್ಲಿರುವ ಇತರರ ಮೇಲಿರುವ ಅವನ ಸಹಾನುಭೂತಿಯನ್ನು ತೋರಿಸುವುದಲ್ಲದೇ ತನ್ನದೇ ಆದ ಉನ್ನತ ಪ್ರಕೃತಿಯ ನಿಯಮವನ್ನು ಅರಿಯಲು ಹಾಗೂ ತನ್ಮೂಲಕ ಹೆಚ್ಚಿನ ಶಾಂತಿ, ಸಮಾಧಾನ ಹಾಗೂ ಸುಖವನ್ನು ಸ್ಥಾಪಿಸಲು ಅವನು ಬಯಸುತ್ತಿದ್ದಾನೆ ಎಂಬುದನ್ನು ತೋರಿಸುತ್ತದೆ. ಈ ಸದ್ಗುಣವೇ, ಸುಜ್ಞಾನ ಹಾಗೂ ಸಹಾನುಭೂತಿಯೇ ನಿಧಾನವಾಗಿ ಒಂದೊಂದಾಗಿ ಬರುತ್ತವೆ. ತನ್ನ ರಾಜಸಿಕ ಹಾಗೂ ತಾಮಸಿಕ ಗುಣಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಅವನು ನಿಧಾನವಾಗಿ ಕಲಿಯುತ್ತಾನೆ ಅಪರಿಪೂರ್ಣವಾಗಿಯಾದರೂ ಅದನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ಅವನ ಈ ಸಾತ್ವಿಕ ಗುಣವೇ ಮಾನವತ್ವದ ಪರಿಪೂರ್ಣತೆಗೆ ನಿಧಾನವಾಗಿ ದಾರಿಯಾಗಬಲ್ಲದು.

ಆದರೆ, ಮಾನವನ ಸ್ವಭಾವವು ಸಾತ್ವಿಕ ಪ್ರಧಾನವಾದಾಗ ಅವನ ಈ ಸ್ಥಿತಿಯನ್ನೇ ಸ್ವತಂತ್ರವೆಂದೂ ಅವನ ಈ ಸಾತ್ವಿಕ ಸ್ಥಿತಿಯಲ್ಲಿನ ಸಂಕಲ್ಪವನ್ನು ಮುಕ್ತ ಸಂಕಲ್ಪವೆಂದೂ ಕರೆಯಬಹುದೇ? ಇಲ್ಲ, ಗೀತೆಯು ಇದನ್ನು ಒಪ್ಪುವುದಿಲ್ಲ, ಅದು ಉನ್ನತ ಪ್ರಜ್ಞೆಯ ದೃಷ್ಟಿಕೋನದಿಂದ ನೋಡುತ್ತದೆ. ಉನ್ನತ ಪ್ರಜ್ಞೆಯ ದೃಷ್ಟಿಯಿಂದ ನೋಡಿದರೆ, ಬುದ್ಧಿ ಅಥವಾ ಪ್ರಜ್ಞಾ ಬುದ್ಧಿಯ ಯುಕ್ತ ಸಂಕಲ್ಪವು ಕೂಡ ವಿಶ್ವ ಪ್ರಕೃತಿಯ ಉಪಕರಣವೇ ಆಗಿದೆ. ಬುದ್ಧಿಯ ಸಂಕಲ್ಪವು ಕಾರ್ಯ ಮಾಡುವಾಗಲೂ ಸಹ, ಅದು ಎಷ್ಟೇ ಸಾತ್ವಿಕವಾಗಿದ್ದರೂ ಕೂಡ, ಕೆಲಸ ಮಾಡುವುದು ಮಾತ್ರ ಪ್ರಕೃತಿಯೇ, ಆಗಲೂ ಸಹ ಜೀವನು ಮಾಯಾ ರೂಢನಾಗಿಯೇ ಕೆಲಸ ಮಾಡುತ್ತಾನೆ. ಏನಿಲ್ಲವೆಂದರೂ ಕನಿಷ್ಠ ಹತ್ತರಲ್ಲಿ ಒಂಭತ್ತರಷ್ಟಾದರೂ ನಮ್ಮ ಸಂಕಲ್ಪ ಇಚ್ಛಾ ಸ್ವಾತಂತ್ರ್ಯವೆನ್ನುವುದು ಇಲ್ಲವೇ ಇಲ್ಲ. ನಮ್ಮ ಸಂಕಲ್ಪವೆನ್ನುವುದೊಂದು ಸುಳ್ಳು ಕಲ್ಪನೆ ಅಷ್ಟೇ. ನಿರ್ದಿಷ್ಟ ಪ್ರಸಂಗದಲ್ಲಿ ಮೂಡಿಬಂದ ನಿರ್ದಿಷ್ಟ ಕರ್ಮದ ಹಿಂದೆ

ನಮ್ಮ ಭೂತಕಾಲವಿದೆ, ನಮ್ಮ ವಂಶ ಪರಾಂಪರಾಗತ ಸಂಸ್ಕಾರವಿದೆ. ನಮ್ಮ ಪ್ರಶಿಕ್ಷಣ, ತರಬೇತಿ ಇದೆ, ನಮ್ಮ ಪರಿಸರದ ಪ್ರಭಾವವಿದೆ, ಇದೆಲ್ಲದರ ಸಂಕೀರ್ಣ ಮಿಶ್ರಣವನ್ನೇ ನಾವು ಕರ್ಮ ಎಂದು ಕರೆಯುತ್ತೇವೆ. ಇದೆಲ್ಲ ನಮ್ಮ ಗತಕಾಲದ ನಿರೂಪ, ಗತಕಾಲದ ಪ್ರಕೃತಿಯ ಪ್ರಭಾವ, ಇಡೀ ಪ್ರಕೃತಿ ಅಥವಾ ವಿಶ್ವವು ವೈಯಕ್ತಿಕ ಮನುಷ್ಯನ ಮೇಲೆ ಪ್ರಭಾವ ಬೀರಿ ಅವನೇನಿದ್ದಾನೆ, ಏನು ಮಾಡುತ್ತಾನೆ ಎಂಬುದನ್ನು ಪ್ರಭಾವಿಸುತ್ತದೆ. ಚೆನ್ನಾಗಿ ವಿಶ್ಲೇಷಣೆ ಮಾಡಿದರೆ ತತ್ ಕ್ಷಣದ ಪ್ರತಿಕ್ರಿಯೆ ಅಥವಾ ಕಾರ್ಯದ ಹಿಂದೆ ಕೂಡ ಇದೇ ಪ್ರಕೃತಿ ಇದೆ ಎಂಬುದು ಗೊತ್ತಾಗುತ್ತದೆ. ಅಹಂ ಎನ್ನುವ ಭಾವವು ಮಾನವನ ಪ್ರತಿ ಕರ್ಮದ ಜೊತೆಗೂ ಸೇರಿಕೊಳ್ಳುತ್ತದೆ. ಅಂತೆಯೇ ಅವನು "ನಾನು ಹಾಗೆ ಮಾಡಿದೆ, ಹೀಗೆ ಮಾಡುವವನಿದ್ದೇನೆ, ನನಗೆ ತೊಂದರೆಯಾಗಿದೆ, ನನಗೆ ಹಿಂಸೆಯಾಗುತ್ತಿದೆ" ಎಂದೆಲ್ಲ ಮಾತನಾಡುತ್ತಾನೆ. ಆದರೆ ತನ್ನ ಕರ್ಮಗಳನ್ನು ಹಾಗೂ ಪ್ರಚೋದನೆಯನ್ನು ಚೆನ್ನಾಗಿ ವಿಶ್ಲೇಷಿಸಿದರೆ ಅವನಿಗೆ ತಿಳಿಯುತ್ತದೆ. ತಾನು ಮಾಡಿದ್ದಲ್ಲ "ಎಲ್ಲವನ್ನು ಮಾಡಿಸಿದ್ದು ಪ್ರಕೃತಿಯೇ, ಪ್ರಕೃತಿಯೇ ತನ್ನ ಮೂಲಕ ಸಂಕಲ್ಪ ಮಾಡುತ್ತದೆ" ಎಂದು. "ನನ್ನ ಸ್ವಭಾವ, ನನ್ನ ಪ್ರಕೃತಿ" ಎಂದು ಅವನು ಹೇಳುವಾಗಲೆಲ್ಲ "ನಿರ್ದಿಷ್ಟ ವ್ಯಕ್ತಿಯಲ್ಲಿ ತಾನೇ ತಾನಾಗಿ ನಿಯತವಾಗಿರುವ (ಮಿತಿಗೊಂಡ) ವೈಯಕ್ತಿಕ ಪ್ರಕೃತಿ" ಎಂದೇ ಅರ್ಥ. ಪ್ರಪಂಚದ ಅಸ್ತಿತ್ವದ ಈ ಬಲಿಷ್ಠ ಅಂಶವನ್ನು ನೋಡಿಯೇ ಬೌದ್ಧರು "ಎಲ್ಲವೂ ಕರ್ಮ, ಅಸ್ತಿತ್ವದಲ್ಲಿ ಆತ್ಮ ಎಂಬುದು ಇಲ್ಲವೇ ಇಲ್ಲ, ಆತ್ಮ, ಅಸ್ಮಿತೆ ಅನ್ನುವುದೆಲ್ಲ ಅಹಂ–ಮನಸ್ಸಿನ ಪರಿಕಲ್ಪನೆ ಅಷ್ಟೇ" ಎಂದು ಹೇಳಿದರು. ಅಹಂ "ನಾನೇ ಆಯ್ದುಕೊಳ್ಳುತ್ತೇನೆ, ಪುಣ್ಯದ ಕೆಲಸ ಮಾಡುವುದು ನನ್ನ ಇಚ್ಛೆ, ಪಾಪದ ಕೆಲಸವನ್ನು ನಿರಾಕರಿಸುವುದು ಕೂಡ ನನ್ನ ಸ್ವಂತ ಇಚ್ಛೆ" ಎಂದು ಹೇಳುವಾಗಲೆಲ್ಲ ಅದು ತನ್ನನ್ನು ಪ್ರಕೃತಿಯ ಸತ್ವ ಗುಣ ಪ್ರಧಾನ ಕರ್ಮದ ಜೊತೆ ಗುರುತಿಸಿಕೊಳ್ಳುತ್ತದೆ ಎಂದೇ ಅರ್ಥ. ಪ್ರಕೃತಿಯ ಸತ್ವ ಗುಣದ ಪ್ರವಾಹದಲ್ಲಿ ತನ್ನನ್ನು ಗುರುತಿಸಿಕೊಂಡು, ಅದು ಆಡಿಸಿದಂತೆ ನಿರ್ದಿಷ್ಟ ಕೆಲಸವನ್ನು ತನಗೆ ಬೇಕು ಎನ್ನುವಂತೆ ಮಾಡಿ ತಾನು ಮಾಡಿದೆ ಎಂದು ಅದು ಹೇಳಿಕೊಳ್ಳುತ್ತದೆ. ಪ್ರಕೃತಿಯು (ನಮ್ಮ) ಬುದ್ಧಿಯ ಮೂಲಕ ನಿರ್ದಿಷ್ಟ ಕರ್ಮವನ್ನು ಆಯ್ದುಕೊಂಡು ಬೇಕು–ಬೇಡಗಳನ್ನು ನಿರ್ಧರಿಸಿ ಆಚರಣೆ ಮಾಡುತ್ತದೆ. ಪ್ರಕೃತಿಯೇ ನಮ್ಮ ಸಂಕಲ್ಪವನ್ನು ಕಾರ್ಯವನ್ನು ರೂಪಿಸುವುದು, ನಿಷ್ಕ್ರಿಯನಾಗಿರುವ ಸಾಕ್ಷೀಚೇತನದ ಪುರುಷನನ್ನು ಮೆಚ್ಚಿಸಲು ಪ್ರಕೃತಿ ಇದೆಲ್ಲವನ್ನೂ ಯೋಜಿಸುವುದೆಂದು ಸಾಂಖ್ಯರು ಅಭಿಪ್ರಾಯ ಪಡುತ್ತಾರೆ.

ಪ್ರಕೃತಿಯ ನಿಯತಿವಾದ ಸಂಬಂಧಿತ ಈ ಹೇಳಿಕೆ ಹೆಚ್ಚು ಉತ್ಪ್ರೇಕ್ಷಿತವಾಗಿರ–ಬಹುದಾದರೂ, ಇದು ವ್ಯಾಪ್ತಿಯನ್ನು ನಿರ್ಧರಿಸಿ ಇದಕ್ಕೊಂದು ಮಿತಿಯನ್ನು ಹಾಕಬೇಕಾದರೂ ನಾವು ಬಹಳಷ್ಟು ಯೋಚನೆ ಮಾಡಬೇಕಾಗಿರುತ್ತದೆ. ಈ ಮಿತಿಯನ್ನು ಹಾಕುವುದು ಹೇಗೆ ಮತ್ತು ಯಾವ ರೀತಿ ಅನ್ನುವುದನ್ನು ಮುಂದಿನ ಅಧ್ಯಾಯಗಳಲ್ಲಿ ನೋಡೋಣ. ನಮ್ಮ ವೈಯಕ್ತಿಕ ಇಚ್ಛಾ ಸ್ವಾತಂತ್ರ್ಯ – ಸ್ವಾತಂತ್ರ್ಯವೆಂಬುದಿಲ್ಲವಾದರೂ ನಾವು ಹಾಗೆ ಕರೆಯಲಿಚ್ಛಿಸಿದರೆ ಇಚ್ಛಾ ಸ್ವಾತಂತ್ರ್ಯವೆಂದು ಹೇಳಬಹುದು – ತೀರ ಸಾಪೇಕ್ಷವಾಗಿದೆ, ಇದ್ದರೂ ಅಣು ಮಾತ್ರದಷ್ಟು ಇದ್ದಿರಬಹುದೇನೋ ಮತ್ತು ಇತರ ಅನೇಕ ಸಂಕೀರ್ಣ ವಿಷಯಗಳಿಂದ ಮಿಶ್ರಿತವಾಗಿ ಅನಾಕಲನೀಯವಾಗಿದೆ. ನಮ್ಮ ಇಚ್ಛೆ ಎಷ್ಟೇ ಪ್ರಬಲವಾಗಿದ್ದರೂ ಅದು ಯಾವತ್ತಿಗೂ ಪ್ರಭುತ್ವವನ್ನು ತಂದುಕೊಡಲಾರದು. ಮತ್ತೊಂದು ಪ್ರಕೃತಿಯು ನಮ್ಮನ್ನು ಬಲವಾಗಿ ವಿರೋಧಿಸಿದರೆ, ಪರಿಸ್ಥಿತಿ ತೀರ ವಿರೋಧವನ್ನೊಡ್ಡಿದರೆ ನಮ್ಮ ಇಚ್ಛೆಯು ಇದೆಲ್ಲವನ್ನು ಸಮರ್ಥವಾಗಿ ಎದುರಿಸಿ ನಿಲ್ಲಬಲ್ಲದು ಎಂಬ ಭರವಸೆ ನೀಡಲಾಗದು. ಈ ವಿರೋಧವು ನಮ್ಮ ಪ್ರಕೃತಿಯ ಜೊತೆ ಸೇರಿ ಅದನ್ನು ಬದಲಾಯಿಸಬಹುದು, ಸೂಕ್ಷ್ಮವಾಗಿ ಅದನ್ನು ಸೋಲಿಸಿ ನಯವಾಗಿ ವಂಚಿಸಬಹುದು, ಆಕ್ರಮಿಸಲೂಬಹುದು. ರಜೋ ಗುಣ ಹಾಗೂ ತಮೋ ಗುಣಗಳು ಅತಿಶಯ ಸಾತ್ವಿಕವಾಗಿರುವ ಇಚ್ಛೆಯನ್ನು ಸುಲಭವಾಗಿ ವಂಚಿಸುತ್ತವೆ. ಅದರ ಸಾಮರ್ಥ್ಯವನ್ನು ಕುಗ್ಗಿಸಿ, ದಮನ ಮಾಡಿ ಸತ್ವ ಗುಣದ ಅಂಶವೇ ಕುಂಠಿತವಾಗುವಂತೆ ಮಾಡುತ್ತವೆ. ಈ ರೀತಿಯಾಗಿ ಆದ ಬದಲಾವಣೆ ವ್ಯಕ್ತಿಗೆ ಸುಲಭವಾಗಿ ತಿಳಿಯುವುದೇ ಇಲ್ಲ. ತಾನು ಸ್ವತಂತ್ರನಾಗಿ ವ್ಯವಹರಿಸುತ್ತಿರುವುದಾಗಿ, ಸಾತ್ವಿಕವಾದ ರೀತಿಯಲ್ಲಿ ವ್ಯವಹರಿಸುತ್ತಿರುವುದಾಗಿ ಭಾವಿಸುತ್ತಾನೆ. ಇದರಲ್ಲಿ ತಪ್ಪಾಗಲಿ, ಹೆಮ್ಮೆ, ಗರ್ವ ಅಥವಾ ಅಹಂಭಾವದ ಪ್ರಶ್ನೆ ಇಲ್ಲ. ತಜ್ಞನಾದ ಮಾನಸಿಕ ತಜ್ಞನು ಮಾತ್ರ ತನ್ನ ನಿಷ್ಪಕ್ಷಪಾತ ದೃಷ್ಟಿಯಿಂದ ಶ್ರೇಷ್ಠ ಆಧ್ಯಾತ್ಮಿಕ ಅಥವಾ ಸಾತ್ವಿಕ ವ್ಯಕ್ತಿಯಲ್ಲಿ ಕೂಡ ಆತ್ಮ ವಂಚನೆಯ ಪ್ರಬಲ ಅಂಶವನ್ನು ಕಂಡುಹಿಡಿಯಬಲ್ಲನು. ನಾವೇನೋ ತೀರ ಸ್ವತಂತ್ರವಾಗಿ ಕಾರ್ಯಾಚರಣೆ ಮಾಡುತ್ತಿದ್ದೇವೆ ಎಂದು ತಿಳಿದುಕೊಂಡಿರುತ್ತೇವೆ. ಆದರೆ, ನಮ್ಮ ವ್ಯವಹಾರದ ಹಿಂದೆ ಶಕ್ತಿಗಳು ಪ್ರಚ್ಛನ್ನವಾಗಿರುತ್ತವೆ, ನಾವು ಕಠೋರ ಹಾಗೂ ಸೂಕ್ಷ್ಮ ಆತ್ಮ ನಿರೀಕ್ಷಣೆ ಮಾಡಿದರೂ ಅವು ನಮ್ಮ ಕಣ್ಣಿಗೆ ಬೀಳುವುದಿಲ್ಲ. ನಾವು ಅಹಂಕಾರ ಮುಕ್ತರಾಗಿದ್ದೇವೆಂದು ಭ್ರಮಿಸುತ್ತೇವೆ, ಆದರೆ ಸೂಕ್ಷ್ಮ ಅಹಂ ಗಟ್ಟಿಯಾಗಿ

ಕುಳಿತಿರುತ್ತದೆ. ಈ ರೀತಿಯ ಅಹಂಭಾವ ಪಾಪಿಯಲ್ಲೂ ಇರುತ್ತದೆ. ಪುಣ್ಯ ಜೀವಿಯಲ್ಲಿಯೂ ಇರುತ್ತದೆ. ನಮ್ಮ (ಜ್ಞಾನದ) ಕಣ್ಣುಗಳು ನಿಜವಾಗಿ ತೆರೆದಾಗ, ನಮ್ಮ ಕ್ರಿಯೆಗಳು ಎಲ್ಲಿಂದ ಹುಟ್ಟುತ್ತವೆ, ಹೇಗೆ ಕೆಲಸ ಮಾಡುತ್ತವೆ ಎಂಬುದು ನಮ್ಮ ಅರಿವಿಗೆ ಬಂದಾಗ ಗೀತೆಯು ಹೇಳಿದಂತೆ "ಗುಣಾಃ ಗುಣೇಷು ವರ್ತಂತೆ" (3.28) ಎಂದು ನಾವೂ ಸಹ ಹೇಳಬೇಕಾಗಿ ಬರುತ್ತದೆ. ಪ್ರಕೃತಿಯ ಗುಣಗಳು ಪರಸ್ಪರ ಕ್ರಿಯೆ–ಪ್ರತಿಕ್ರಿಯೆ ಮಾಡುತ್ತಿರುತ್ತವೆ. ಇದರಲ್ಲಿ ನಾವು, ನಮ್ಮದು ಎಂಬ ಹೆಗ್ಗಳಿಕೆ ಏನೂ ಇರುವುದಿಲ್ಲ. ಎಲ್ಲ ಕರ್ತೃತ್ವವು ಪ್ರಕೃತಿಯ ಕಡೆಗೇ ಇರುತ್ತದೆ.

ಈ ವಿವರಣೆಯಿಂದ ಸ್ಪಷ್ಟವಾಗುವುದೇನೆಂದರೆ ಸತ್ವ ಗುಣವು ಎಷ್ಟೇ ಅತಿಶಯ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದರೂ ಕೂಡ ಅದು ಸ್ವಾತಂತ್ರ್ಯವನ್ನು (ಇಚ್ಛಾ ಸ್ವಾತಂತ್ರ್ಯ, ಆತ್ಮ ಸ್ವಾತಂತ್ರ್ಯ) ತಂದುಕೊಡುವುದಿಲ್ಲ. ಗೀತೆಯು ಹೇಳುವಂತೆ ಸತ್ವ ಗುಣವೂ ಸಹ ಇತರ ಗುಣಗಳಷ್ಟೇ ದೃಢವಾದ ಬಂಧನವನ್ನು ಹೇರುತ್ತದೆ ಮತ್ತು ಅದೇ ರೀತಿಯ ಬಯಕೆಗಳು, ಅಹಂಭಾವ, ಅಂದರೆ ತುಸು ಉದಾತ್ತವಾದ ಬಯಕೆಗಳಿಂದ ಶುದ್ಧ ಅಹಂಕಾರದಿಂದ ಬಂಧನ ಹೇರುತ್ತದೆ. ಈ ವಾಸನೆಗಳು ಮತ್ತು ಅಹಂಭಾವ ಎಲ್ಲಿಯವರೆಗೆ ನಮ್ಮಲ್ಲಿರುವುವೋ ಅಲ್ಲಿಯವರೆಗೆ ನಾವು ಸ್ವತಂತ್ರವಾಗಲಾರೆವು. ಸದ್ಗುಣಿಯಾದವನು, ಜ್ಞಾನಿಯಾದವನು ಕೂಡ ತನ್ನದೇ ಆದ ಅಹಂಕಾರವನ್ನು, ಹೆಮ್ಮೆಯನ್ನು ಹೊಂದಿರುವುದುಂಟು. ಅವನಲ್ಲಿರುವ ಸಾತ್ವಿಕ ಅಹಂಕಾರದ ತೃಪ್ತಿಗಾಗಿಯೇ ಅವನು ಸದಾಚಾರ ಇತ್ಯಾದಿಗಳನ್ನು ಮಾಡುತ್ತಿರುತ್ತಾನೆ. ಅವನ ಸದ್ಗುಣ, ಸದಾಚಾರಗಳು ಅವನ ಅಹಂನ ತೃಪ್ತಿಗಾಗಿಯೇ ಇರುವುದುಂಟು. ಅಹಂಕಾರದ ಸಮಾಧಾನಕ್ಕಾಗಿ ಮಾಡುವವನ ಕರ್ಮಗಳು ಸ್ವಾತಂತ್ರ್ಯವನ್ನು ತಂದುಕೊಡುವುದಿಲ್ಲ. ತನ್ನ ಅಹಂಕಾರದ ತೃಪ್ತಿಯನ್ನು ಬಿಟ್ಟು, ಅಹಂಕಾರದ ಮೂಲಕ ವಿಚಾರ ಮಾಡುವುದು ಸಂಕಲ್ಪ ಮತ್ತು ಕರ್ಮ ಮಾಡುವುದನ್ನು ಬಿಟ್ಟಾಗ ಮಾತ್ರ ಅವನಲ್ಲಿರುವ "ನಾನು" ಎಂಬ ಅಣು ಅಹಂ ಲಯವಾಗುವುದು. ಆಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಗುವುದು. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಸ್ವಾತಂತ್ರ್ಯ, ಉನ್ನತ ಆತ್ಮ ಚೈತನ್ಯದ ಪ್ರಭುತ್ವ ಇವೆಲ್ಲ ಆರಂಭವಾಗುವುದು ನಮ್ಮ ಸಾಮಾನ್ಯ ಆತ್ಮ ಸ್ತರದ ಮೇಲೆ ಇರುವ ಪರಮಾತ್ಮನನ್ನು ಕಂಡಾಗ ಮಾತ್ರ. ಅಹಂ ಎನ್ನುವುದು ಒಂದು ರೀತಿಯ ಪರದೆ, ಅಡ್ಡ ಪರದೆ ಅಥವಾ ಮರೆ ಮಾಡುವ ನೆರಳು. ನಮ್ಮ ಸಾಮಾನ್ಯ ಅಥವಾ ಪ್ರಾಕೃತಿಕ ಆತ್ಮ ಚೈತನ್ಯದ ಮೇಲ್ಗಡೆಗೆ ಇರುವ ಪರಮಾತ್ಮನನ್ನರಿತು ನಮ್ಮ ವೈಯಕ್ತಿಕ

ಸತ್ತೆಯನ್ನು ಅದರ ಜೊತೆ ಒಂದಾಗಿಸಿದಾಗ, ನಮ್ಮ ವೈಯಕ್ತಿಕ ಪ್ರಕೃತಿಯನ್ನು ಪರಮ, ಅದ್ವಿತೀಯ, ಏಕಮಾತ್ರ ಪರಮಾತ್ಮನ ಸಂಕಲ್ಪದ ಉಪಕರಣವನ್ನಾಗಿ ಮಾಡಿದಾಗ ಈ ಸಿದ್ಧಿ ಸಾಧ್ಯವಾಗಬಹುದು. ಆಗ ಮಾತ್ರ ಕೇವಲ ಅವನ ಸ್ವತಂತ್ರವಾದ ಸಂಕಲ್ಪ ಕಾರ್ಯಮಾಡುವುದು. ಹೀಗಾಗಬೇಕಾದರೆ ನಾವು ಮೂರು ಗುಣಗಳನ್ನು ಮೀರಿ ನಿಲ್ಲಬೇಕು. ನಾವು ತ್ರಿಗುಣಾತೀತರಾಗಬೇಕು. ಏಕೆಂದರೆ ಆತ್ಮನು ತ್ರಿಗುಣಗಳ ಆಚೆಗಿದ್ದಾನೆ. ಅವನು ಸಾತ್ವಿಕ ಗುಣವನ್ನು ಸಹ ಮೀರಿ ಆಚೆಗಿದ್ದಾನೆ. ನಾವು ಸತ್ವ ಗುಣದ ಮೂಲಕವೇ ಅಲ್ಲಿಗೆ ಹೋಗಬೇಕೆಂಬುದು ನಿಜ, ಆದರೆ ಕೊನೆಗೆ ಅದನ್ನೂ ಸಹ ಮೀರಿ ಮೇಲೆ ಹೋಗಬೇಕು. ನಮ್ಮ ವೈಯಕ್ತಿಕ ಅಹಂಕಾರದ ಸಾಧನೆಯಿಂದಲೇ ಅಲ್ಲಿಗೆ ಹೋಗುವುದು ನಿಜ, ಆದರೆ ನಮ್ಮ ಅಹಂನ್ನು ಸಂಪೂರ್ಣ ಮೀರಿದಲ್ಲದೇ ನಮಗೆ ಪರಮಾತ್ಮ ಸಿದ್ಧಿಸುವುದಿಲ್ಲ. ಎಲ್ಲ ಇಚ್ಛೆಗಳಲ್ಲಿ ಅತಿ ಶ್ರೇಷ್ಠವಾದ, ಆವೇಶ ಪೂರ್ಣವಾದ, ಅದ್ಭುತವಾದ ಹಾಗೂ ಆನಂದಮಯವಾದ ಬಯಕೆ(ಅಭೀಪ್ಸೆ)ಯ ಮೂಲಕವೇ ಅತ್ತ ಸಾಗುವುದು ನಿಜ. ಆದರೆ ಎಲ್ಲ ಬಯಕೆ, ಪರಮೋನ್ನತ ಅಭೀಪ್ಸೆ ಕೂಡ ನಮ್ಮಿಂದ ಬಿದ್ದು ಹೋದಾಗ ಮಾತ್ರ ಆ ನೆಲೆಯಲ್ಲಿ ನಾವು ಭದ್ರವಾಗಿ ನಿಲ್ಲಲು ಸಾಧ್ಯ. ಆಧ್ಯಾತ್ಮಿಕ ಪಯಣದ ಒಂದು ಹಂತದಲ್ಲಿ ನಾವು ಮೋಕ್ಷದ ಅಭೀಪ್ಸೆಯನ್ನು ಸಹ ಬಿಡಬೇಕಾಗುವುದು. ಅಂದಾಗ ಮಾತ್ರ ಪರಮಾತ್ಮ ಪ್ರಾಪ್ತಿ ಸಾಧ್ಯವಾಗುವುದು.

(ಸಶೇಷ)



**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಆ ಅತ್ಮಸ್ಥೈರ್ಯ ಪರಿಪೂರ್ಣ ಮೌನ, ಘನಶಾಂತ ಅವಳ ವದನ
ಅವಳಾತ್ಮ ಕವಚ ಬಳಲಿತ್ತು ಮಾತ್ರ, ಹೆಣಗುತ್ತ ಘಟನೆಗಳಿಗೆ
ಅವಳಾತ್ಮಶಕ್ತಿ ಜಾಗರಿಸಿ ಜಗದ ಆ ಬಲವ ಎಲ್ಲ ಕಡೆಗೆ
ಅವಳ ಕಕ್ಕುಲತೆ ದೈವ ಸಾಮಿಪ್ಯ, ಅವಳುಸಿರು ಜಗದ ಎದೆಗೆ

ಜೀವದಣುವಾಗಿ, ಒಳಜೀವಿಯಿಹುದು, ಜೀವಾಳ ಅವಳ ಬಸಿರು
ಏಕಾಂಗಿಯಾಗಿ ತನ್ನೊಳಗೆ ಧರಿಸಿ, ಪಾಲಿಸಿರೆ ವಿಶ್ವದುಸಿರು
ಬ್ರಹ್ಮಾಂಡಕಿರುವ ಅತಿಘೋರ ಭಯವು, ಅವಳೆದೆಯ ದಿಗಿಲು ಸಹಿತ
ಘನವಿಶ್ವ ಬಲದ ಅಡಿಪಾಯ ಪಡೆದು, ನೆಲೆಸಿತ್ತು ಶಕ್ತಿ ಸತತ

ವಿಶ್ವಮಾತೆಯಾ ಪ್ರೇಮಾನುಭೂತಿ ಅವಳಾತ್ಮದೊಡನೆ ಸ್ಪಂದಿ

**ಅನು: ಪುಟ್ಟು ಕುಲಕರ್ಣಿ**
**ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 8**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.